ಕರಾವಳಿ ಸುದ್ದಿ

ಅರಿವಿನತ್ತ ನಮ್ಮ ಚಿತ್ತ | KARAVALI SUDDI ENGLISH-KANNADA WEEKLY | ವಾರ ಪತ್ರಿಕೆ

Vol: 12 Issue: 25 KARBIL/2015/62120 DAKSHINA KANNADA 09-15 NOVEMBER 2026 Rs 10/-

'ದುಷ್ಟನ ಬಾಯಿಯು ದ್ರೋಹವನ್ನು ನುಂಗುವುದು.'

ಕೊಂಕಣಿ ಸಂಗೀತದ ವಿಶ್ವ ದಾಖಲೆ ಸಂಭ್ರಮ!

ಮಂಗಳೂರಿನಲ್ಲಿ ಗಿನ್ನೆಸ್ ದಾಖಲೆಗಾಗಿ 6,700 ಗಾಯಕರು ಸಜ್ಜು!

ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರಿಂದ ಮಹಾಸಮ್ಮೇಳನಕ್ಕೆ ಚಾಲನೆ - 12 ದಿನಗಳ ನಿರಂತರ ಗಾಯನ







ಕೊಂಕಣಿ ಭಾಷೆ, ಸಂಗೀತ ಮತ್ತು ಸಂಸ್ಕೃತಿಯ ವೈಭವವನ್ನು ವಿಶ್ವದಾದ್ಯಂತ ಪಸರಿಸುವ ಉದ್ದೇಶದೊಂದಿಗೆ ಮಂಗಳೂರಿನಲ್ಲಿ ಪ್ರಪ್ರಥಮ ವಿಶ್ವ ಕೊಂಕಣಿ ಸಂಗೀತ ಮಹಾಸಮ್ಮೇಳನಕ್ಕೆ ನವಂಬರ್ 3ರಂದು ಮಂಗಳವಾರ ಮುಂಜಾನೆ 5 ಗಂಟೆಗೆ ಪುರಭವನದಲ್ಲಿ ಅದ್ದೂರಿ ಚಾಲನೆ ದೊರೆಯಿತು. ಕೊಂಕಣಿ ಸಾಂಸ್ಕೃತಿಕ ಸಂಘಟನೆ 'ಮಾಂಡ್ ಸೊಭಾಣ್'ನ 40ನೇ ವರ್ಷದ ಸಂಭ್ರಮದ ಅಂಗವಾಗಿ ನವೆಂಬರ್ 3ರಿಂದ 15ರ ತನಕ ಆಯೋಜಿಸಿರುವ ಈ ಅಂತಾರಾಷ್ಟ್ರೀಯ ಮಹಾಸಮ್ಮೇಳನವು ವಿಶ್ವದ ವಿವಿಧ ಭಾಗಗಳ ಕೊಂಕಣಿ ಭಾಷಿಕರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿದೆ.

ಗೋವಾ ಮುಖ್ಯಮಂತ್ರಿ ಸನ್ಮಾನ್ಯ ಡಾ. ಪ್ರಮೋದ್ ಸಾವಂತ್ ಅವರು ಮಹಾಸಮ್ಮೇಳನವನ್ನು ಉದ್ಘಾಟಿಸಿದರು. ಮಂಗಳೂರು ಧರ್ಮಕ್ಷೇತ್ರದ ಬಿಷಪ್ ಪರಮ ಪೂಜ್ಯ ಅತೀ ವಂದನೀಯ ಡಾ. ಪೀಟರ್ ಪಾವ್ಲ್ ಸಲ್ಡಾನ್ಹಾ ಅವರು ಆಶೀರ್ವಚನ ನೀಡಿದರು.

12 ದಿನಗಳ ನಿರಂತರ ಗಾಯನ: ಗಿನ್ನೆಸ್ ದಾಖಲೆ ಗುರಿ:

ಮಹಾಸಮ್ಮೇಳನದ ಪ್ರಮುಖ ಆಕರ್ಷಣೆಯಾಗಿ 'ಕೊಂಕಣಿ ನಿರಂತರಿ – ಸಂಸಾರ್ ಸರಾಸರಿ' (ಕೊಂಕಣಿ ನಿರಂತರವಾಗಲಿ – ಜಗದ ಕೊನೆತನಕ ಉಳಿಯಲಿ) ಎಂಬ ಪರಿಕಲ್ಪನೆಯಡಿ ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸುವ ಪ್ರಯತ್ನ ನಡೆಯುತ್ತಿದೆ. ಇದಕ್ಕಾಗಿ ಸತತ 12 ದಿನಗಳ ಕಾಲ ನಿರಂತರ ಗಾಯನ ಮ್ಯಾರಥಾನ್ ಆಯೋಜಿಸಲಾಗಿದೆ.

ಸುಮಾರು 300 ಗಾಯನ ತಂಡಗಳು ಸರದಿಯಂತೆ ಭಾಗವಹಿಸಲಿದ್ದು, ಜಗತ್ತಿನ ವಿವಿಧ ಭಾಗಗಳಿಂದ 6,700ಕ್ಕೂ ಅಧಿಕ ಗಾಯಕರು ತಮ್ಮ ಪ್ರತಿಭೆ ಪ್ರದರ್ಶಿಸಲಿದ್ದಾರೆ. ಇದರಲ್ಲಿ ಗೋವಾದ 53 ತಂಡಗಳೂ ಸೇರಿವೆ. ವಿವಿಧ ಕೊಂಕಣಿ ಉಪಭಾಷೆಗಳು, ಸಮುದಾಯಗಳು ಮತ್ತು ಸಂಗೀತ ಪರಂಪರೆಗಳನ್ನು ಪ್ರತಿನಿಧಿಸುವ 4,500ಕ್ಕೂ ಅಧಿಕ ಹಾಡುಗಳನ್ನು ಯಾವುದೇ ಹಾಡು ಅಥವಾ ಗಾಯಕನ ಪುನರಾವರ್ತನೆಯಿಲ್ಲದೆ ಪ್ರಸ್ತುತಪಡಿಸುವ ಗುರಿ ಹೊಂದಲಾಗಿದೆ.

ಕೊಂಕಣಿ ಭಾಷೆಯ ಭಾವನೆ ಒಂದೇ - ಡಾ. ಪ್ರಮೋದ್ ಸಾವಂತ್:

ಗಿನ್ನೆಸ್ ದಾಖಲೆ ಪ್ರಯತ್ನಕ್ಕೆ ಚಾಲನೆ ನೀಡಿ ಮಾತನಾಡಿದ ಗೋವಾ ಮುಖ್ಯಮಂತ್ರಿ ಸನ್ಮಾನ್ಯ ಡಾ. ಪ್ರಮೋದ್ ಸಾವಂತ್ ಅವರು, ಮಾಂಡ್ ಸೊಭಾಣ್ ಹಾಗೂ ಸ್ವಾಗತ ಸಮಿತಿಯ ಪರಿಶ್ರಮ ಮತ್ತು ಕಾರ್ಯವನ್ನು ಶ್ಲಾಘಿಸಿದರು. ಕೊಂಕಣಿ ಭಾಷೆಯಲ್ಲಿ ವಿವಿಧ ಉಪಭಾಷೆಗಳಿದ್ದರೂ, ಕೊಂಕಣಿ ಜನರ ಹೃದಯ ಮತ್ತು ಭಾಷೆಯ ಭಾವನೆ ಒಂದೇ ಆಗಿದೆ ಎಂದು ಹೇಳಿದರು.

ಗೋವಾದಲ್ಲಿ ಕೊಂಕಣಿ ಅಧಿಕೃತ ಭಾಷೆಯಾಗಿದ್ದು, ಸರ್ಕಾರದಿಂದ ಅಗತ್ಯ ಪ್ರೋತ್ಸಾಹ ದೊರೆಯುತ್ತಿದೆ. ಆದರೆ ಮಂಗಳೂರಿನ ಕೊಂಕಣಿ ಭಾಷಿಕರು ಯಾವುದೇ ಸರ್ಕಾರಿ ವ್ಯವಸ್ಥೆಗಳ ನೆರವಿಲ್ಲದೆ ತಮ್ಮ ಪರಿಶ್ರಮ ಮತ್ತು ಸಮರ್ಪಣೆಯಿಂದ ಭಾಷೆಯನ್ನು ಜೀವಂತವಾಗಿಟ್ಟಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಗೋವಾದ ಹೊರಗಿರುವ ಕೊಂಕಣಿ ಸಾಧಕರನ್ನೂ ಗೋವಾ ಸರ್ಕಾರ ತನ್ನ ಅಧಿಕೃತ ರಾಜ್ಯ ಪ್ರಶಸ್ತಿಗಳಿಗೆ ಪರಿಗಣಿಸುತ್ತದೆ ಎಂದರು.

ಗೋವಾ ಮತ್ತು ಕರಾವಳಿ ಕರ್ನಾಟಕದ ರಾಜ್ಯ ಗಡಿಗಳು ಬೇರೆಬೇರೆಯಾಗಿದ್ದರೂ, ಎರಡೂ ಪ್ರದೇಶಗಳು ಒಂದೇ ಕರಾವಳಿ, ಸಂಸ್ಕೃತಿ ಮತ್ತು ಜೀವನಶೈಲಿಯನ್ನು ಹಂಚಿಕೊಂಡಿವೆ. ಈ ಸಾಂಸ್ಕೃತಿಕ ಬಾಂಧವ್ಯ ಸದಾಕಾಲ ಮುಂದುವರಿಯಲಿ ಎಂದು ಆಶಿಸಿದರು.

ಎರಿಕ್ ಒಝಾರಿಯೊ ಅವರ ಕೊಡುಗೆ ಸ್ಮರಣೆ:

ಕಾರ್ಯಕ್ರಮದಲ್ಲಿ ಮಾತನಾಡಿದ ಗೋವಾದ ಕ್ಯಾಲಂಗುಟ್ ಕ್ಷೇತ್ರದ ಶಾಸಕರಾದ ಮೈಕಲ್ ಲೋಬೋ ಅವರು, ದಿವಂಗತ ಎರಿಕ್ ಒಝಾರಿಯೊ ಅವರು ಕೊಂಕಣಿ ಸಂಸ್ಕೃತಿಯ ಬೆಳವಣಿಗೆಗೆ ನೀಡಿದ ಜೀವಮಾನದ ಕೊಡುಗೆಯನ್ನು ಸ್ಮರಿಸಿದರು. ಯುವ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುವಲ್ಲಿ ಅವರು ವಹಿಸಿದ ಪಾತ್ರ ಮಹತ್ವದ್ದಾಗಿದೆ ಎಂದರು. ಸಮ್ಮೇಳನದಲ್ಲಿ ಭಾಗವಹಿಸುತ್ತಿರುವ ಎಲ್ಲ ತಂಡಗಳಿಗೆ ಶುಭ ಹಾರೈಸಿದ ಅವರು, ಗೋವಾದಿಂದ ಹೆಚ್ಚಿನ ಸಂಖ್ಯೆಯಲ್ಲಿ ತಂಡಗಳು ಪಾಲ್ಗೊಂಡಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ಈ ಮಹಾಸಮ್ಮೇಳನವನ್ನು ಮಾಂಡ್ ಸೊಭಾಣ್‌ನ ಸ್ಥಾಪಕ ಹಾಗೂ ದೂರದೃಷ್ಟಿಯ ನಾಯಕ ದಿವಂಗತ ಎರಿಕ್ ಒಝಾರಿಯೊ ಅವರ ಸ್ಮರಣೆಗೆ ಸಮರ್ಪಿಸಲಾಗಿದೆ.

ಗಣ್ಯರ ಉಪಸ್ಥಿತಿ:

ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಗೋವಾದ ಶಾಸಕರಾದ ಮೈಕಲ್ ಲೋಬೋ ಮತ್ತು ದೆಲಿಲಾ ಲೋಬೋ, ಸ್ವಾಗತ ಸಮಿತಿ ಸದಸ್ಯ ಡಾಲ್ಫಿ ಪ್ರಶಾಂತ್ ಡಿಸೋಜ, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸ್ಟ್ಯಾನಿ ಅಲ್ವಾರಿಸ್, ಜಾಯ್ಸ್ ಒಝಾರಿಯೊ, ರಾಯ್ ಕ್ಯಾಸ್ಟೆಲಿನೊ, ಪ್ರಕಾಶ್ ಶೆಟ್ಟಿ ಮಂಗಳೂರು, ಎರಿಕ್ ಕೊರೆಯಾ, ರೊನಾಲ್ಡ್ ಸಿಲ್ವನ್ ಡಿಸೋಜ ಹಾಗೂ ಕೃಷ್ಣಪ್ರಸಾದ್ ಉಪಸ್ಥಿತರಿದ್ದರು.

ಮಾಂಡ್ ಸೊಭಾಣ್ ಅಧ್ಯಕ್ಷ ಲೂಯಿಸ್ ಜೆ. ಪಿಂಟೊ ಅವರು ಗಣ್ಯರನ್ನು ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು. ರೈನೆಲ್ ಸಿಕ್ವೇರಾ ಕಾರ್ಯಕ್ರಮ ನಿರೂಪಿಸಿದರು.

ಬೆಳಗ್ಗೆ ಸರಿಯಾಗಿ 6 ಗಂಟೆಗೆ ಗೋವಾ ಮುಖ್ಯಮಂತ್ರಿ ಡಾ. ಪ್ರಮೋದ್ ಸಾವಂತ್ ಅವರು ಗುಮಟ ವಾದ್ಯ ನುಡಿಸುವ ಮೂಲಕ ನಿರಂತರ ಗಾಯನ ಮ್ಯಾರಥಾನ್‌ಗೆ ಅಧಿಕೃತ ಚಾಲನೆ ನೀಡಿದರು. ಕೊಂಕಣಿ ಸಂಗೀತದ ವೈವಿಧ್ಯ, ಭಾಷೆಯ ಶ್ರೀಮಂತಿಕೆ ಮತ್ತು ಜಾಗತಿಕ ಕೊಂಕಣಿ ಸಮುದಾಯದ ಒಗ್ಗಟ್ಟನ್ನು ಸಾರುವ ಈ ಮಹಾಸಮ್ಮೇಳನವು ಮಂಗಳೂರಿನ ಸಾಂಸ್ಕೃತಿಕ ಇತಿಹಾಸದಲ್ಲಿ ವಿಶೇಷ ಸ್ಥಾನ ಪಡೆಯುವ ನಿರೀಕ್ಷೆಯಿದೆ.

ಮಂಗಳೂರಿನಲ್ಲಿ ಕನ್ನಡ ರಾಜ್ಯೋತ್ಸವ ಸಂಭ್ರಮ

ಕನ್ನಡಾಭಿಮಾನ ಎಲ್ಲರನ್ನೂ ಬೆಸೆಯುವ ಸೇತುವೆಯಾಗಲಿ - ಸಚಿವ ಯು.ಟಿ. ಖಾದರ್






ಕನ್ನಡಾಭಿಮಾನವು ಇತರ ಭಾಷೆಗಳನ್ನು ಮಾತನಾಡುವವರನ್ನು ದೂರವಿಡುವ ಸಾಧನವಾಗದೆ, ಎಲ್ಲರನ್ನೂ ಪ್ರೀತಿ, ವಿಶ್ವಾಸ ಮತ್ತು ಸಹಬಾಳ್ವೆಯಿಂದ ಬೆಸೆಯುವ ಸೇತುವೆಯಾಗಬೇಕು ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಯು.ಟಿ. ಖಾದರ್ ಅವರು ಕರೆ ನೀಡಿದರು. ಮಂಗಳೂರು ನಗರದ ನೆಹರು ಮೈದಾನದಲ್ಲಿ ನಡೆದ 71ನೇ ಕನ್ನಡ ರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕನ್ನಡವೆಂದರೆ ಕೇವಲ ಭಾಷೆಯಲ್ಲ, ಅದೊಂದು ಮಂತ್ರ, ಮಹಾಶಕ್ತಿ ಹಾಗೂ ನಮ್ಮ ಅಸ್ಮಿತೆಯ ಸಂಕೇತವಾಗಿದೆ. ಈ ಮಣ್ಣಿನ ಕಂಪು, ಬದುಕಿನ ಆತ್ಮೀಯತೆ ಮತ್ತು ಸಂಸ್ಕೃತಿಯ ಪ್ರತಿಬಿಂಬವೇ ಕನ್ನಡ. ಕಾವೇರಿಯ ನಿರಂತರ ಹರಿವು, ಸಹ್ಯಾದ್ರಿಯ ಎತ್ತರದ ಗರಿಮೆ ಹಾಗೂ ಕರಾವಳಿಯ ಕಡಲ ಅಲೆಗಳ ಸಂವಾದದಲ್ಲಿ ಕನ್ನಡದ ಸೊಗಡು ಅಡಗಿದೆ ಎಂದರು. ಕನ್ನಡವು ಗತಕಾಲದ ಇತಿಹಾಸದ ವೈಭವಕ್ಕೆ ಮಾತ್ರ ಸೀಮಿತವಾಗದೆ, ವರ್ತಮಾನದ ಆತ್ಮವಿಶ್ವಾಸ ಮತ್ತು ಭವಿಷ್ಯದ ಹೊಣೆಗಾರಿಕೆಯ ಸಂಕೇತವೂ ಆಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ 120 ಸಾಧಕರು ಹಾಗೂ 53 ಸಂಘ–ಸಂಸ್ಥೆಗಳಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪೊಲೀಸ್, ಎನ್‌ಸಿಸಿ ಹಾಗೂ ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಂದ ಆಕರ್ಷಕ ಪಥಸಂಚಲನ ನಡೆಯಿತು. ಕಾರ್ಯಕ್ರಮದಲ್ಲಿ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಶಾಸಕ ವೇದವ್ಯಾಸ ಕಾಮತ್, ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ, ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ. ಶಾಹಿದ್, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಂತೋಷ್ ಕುಮಾರ್ ಶೆಟ್ಟಿ, ಗಾಣಿಗ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಶ್ವಾಸ್ ಕುಮಾರ್ ದಾಸ್, ರಾಜ್ಯ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಅಲ್ವಾರಿಸ್, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ತಾಯಿ ಮರಣ ಶೂನ್ಯ ಸಾಧನೆ - ಮಂಗಳೂರಿನ ಲೇಡಿಗೋಷನ್ ಆಸ್ಪತ್ರೆಗೆ ರಾಜ್ಯಮಟ್ಟದ ಪ್ರಥಮ ಪ್ರಶಸ್ತಿ



ತಾಯಿ ಮತ್ತು ಶಿಶು ಆರೋಗ್ಯ ಸೇವೆಯಲ್ಲಿ ಗುಣಮಟ್ಟದ ಆರೈಕೆ ಹಾಗೂ ವಿನೂತನ ಕ್ರಮಗಳ ಮೂಲಕ ಗಮನ ಸೆಳೆದಿರುವ ಮಂಗಳೂರಿನ ಸರಕಾರಿ ಲೇಡಿಗೋಷನ್ ಆಸ್ಪತ್ರೆಗೆ 2025–26ನೇ ಸಾಲಿನ ಗರ್ಭಪಾತ ನಂತರದ ತಾಯಿ ಆರೋಗ್ಯ ಸೇವೆಗಾಗಿ ರಾಜ್ಯಮಟ್ಟದ ಪ್ರಥಮ ಪ್ರಶಸ್ತಿ ಲಭಿಸಿದೆ. ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಐಪಾಸ್ ಫೌಂಡೇಶನ್ ಸಹಯೋಗದಲ್ಲಿ ನಡೆಸಿದ ಸಮೀಕ್ಷೆಯಲ್ಲಿ ರಾಜ್ಯದ ಜಿಲ್ಲಾಸ್ಪತ್ರೆಗಳ ಪೈಕಿ ಲೇಡಿಗೋಷನ್ ಆಸ್ಪತ್ರೆ ಮೊದಲ ಸ್ಥಾನ ಗಳಿಸಿದೆ. 2025–26ನೇ ಸಾಲಿನಲ್ಲಿ ಆಸ್ಪತ್ರೆಯಲ್ಲಿ ನಡೆದ 304 ಕಾನೂನುಬದ್ಧ ಗರ್ಭಪಾತ ಪ್ರಕರಣಗಳನ್ನು ಸಮರ್ಥವಾಗಿ ನಿರ್ವಹಿಸಿ, ಗರ್ಭಪಾತ ನಂತರದ ಆರೈಕೆಯಲ್ಲಿ ಶೂನ್ಯ ತಾಯಿ ಮರಣ ಪ್ರಮಾಣ ದಾಖಲಿಸಿರುವುದು ಈ ಸಾಧನೆಗೆ ಕಾರಣವಾಗಿದೆ.

304 ಪ್ರಕರಣಗಳ ಯಶಸ್ವಿ ನಿರ್ವಹಣೆ: 2025–26ನೇ ಸಾಲಿನಲ್ಲಿ ಆಸ್ಪತ್ರೆಯಲ್ಲಿ ನಿರ್ವಹಿಸಲಾದ ಗರ್ಭಪಾತ ಪ್ರಕರಣಗಳ ವಿವರ ಹೀಗಿದೆ: 9 ವಾರಗಳೊಳಗೆ – 191 ಪ್ರಕರಣಗಳು, 10ರಿಂದ 12 ವಾರಗಳು – 31 ಪ್ರಕರಣಗಳು, 12ರಿಂದ 20 ವಾರಗಳು–52 ಪ್ರಕರಣಗಳು, 20ರಿಂದ 24 ವಾರಗಳು – 25 ಪ್ರಕರಣಗಳು ಹಾಗೂ 24 ವಾರಗಳ ನಂತರ – 5 ಪ್ರಕರಣಗಳು. ಹೀಗೆ ಒಟ್ಟು 304 ಪ್ರಕರಣಗಳನ್ನು ಗುಣಮಟ್ಟದ ಸಮಗ್ರ ಗರ್ಭಪಾತ ಆರೈಕೆ (Comprehensive Abortion Care) ಮಾರ್ಗಸೂಚಿಗಳ ಪ್ರಕಾರ ನಿರ್ವಹಿಸಲಾಗಿದೆ. ಅಲ್ಲದೆ, ಶೇ.95ರಷ್ಟು ಫಲಾನುಭವಿಗಳಿಗೆ ಕುಟುಂಬ ಕಲ್ಯಾಣ ವಿಧಾನಗಳನ್ನು ಅಳವಡಿಸಿಕೊಳ್ಳಲು ಪ್ರೇರಣೆ ನೀಡಿ, ಅದರ ಅನುಸರಣೆಗೆ ಕ್ರಮ ಕೈಗೊಂಡಿರುವುದು ಆಸ್ಪತ್ರೆಯ ಮತ್ತೊಂದು ಸಾಧನೆಯಾಗಿದೆ.

ಆಧುನಿಕ ಸೌಲಭ್ಯಗಳಿಂದ ತಾಯಿ ಆರೋಗ್ಯಕ್ಕೆ ಆದ್ಯತೆ: ಆಸ್ಪತ್ರೆಯಲ್ಲಿ ನೂತನವಾಗಿ ಅಳವಡಿಸಿರುವ ವಾಟ್ಸಾಪ್ ಹೈರಿಸ್ಕ್ ಪ್ರೆಗ್ನೆನ್ಸಿ ಟ್ರ್ಯಾಕಿಂಗ್ ವ್ಯವಸ್ಥೆ, ಪ್ರಸೂತಿ ತೀವ್ರ ನಿಗಾ ಘಟಕ, ಪ್ರಸೂತಿ ಕ್ರಿಟಿಕಲ್ ಕೇರ್ ಘಟಕ ಹಾಗೂ ಹೈರಿಸ್ಕ್ ಪ್ರೆಗ್ನೆನ್ಸಿ ಡೆಲಿವರಿ ಘಟಕಗಳು ತಾಯಿ ಮರಣ ಪ್ರಮಾಣವನ್ನು ಶೂನ್ಯಕ್ಕೆ ತರುವಲ್ಲಿ ಮಹತ್ವದ ಪಾತ್ರ ವಹಿಸಿವೆ. ವಿವಿಧ ಸಂಘ–ಸಂಸ್ಥೆಗಳ ಸಿಎಸ್‌ಆರ್ ಅನುದಾನದ ಮೂಲಕ ಒದಗಿಸಲಾದ ಅತ್ಯಾಧುನಿಕ ಜೀವರಕ್ಷಕ ಉಪಕರಣಗಳು ಕೂಡ ಗುಣಮಟ್ಟದ ವೈದ್ಯಕೀಯ ಸೇವೆ ನೀಡಲು ನೆರವಾಗಿವೆ.

ಸಾಮೂಹಿಕ ಪ್ರಯತ್ನಕ್ಕೆ ಸಂದ ಗೌರವ: ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ದುರ್ಗಾಪ್ರಸಾದ್ ಎಂ.ಆರ್. ಅವರು ಈ ಸಾಧನೆಗೆ ಸಹಕರಿಸಿದ ಕೆ.ಎಂ.ಸಿ. ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ, ಅರಿವಳಿಕೆ, ರೇಡಿಯೋಡಯಾಗ್ನೋಸಿಸ್ ಹಾಗೂ ನವಜಾತ ಶಿಶು ವಿಭಾಗಗಳ ತಜ್ಞ ವೈದ್ಯರನ್ನು ಅಭಿನಂದಿಸಿದ್ದಾರೆ. ಶುಶ್ರೂಷಕ ವೃಂದ, ಅರೆವೈದ್ಯಕೀಯ ಸಿಬ್ಬಂದಿ ಹಾಗೂ ತಾಂತ್ರಿಕ ವರ್ಗದವರ ಸೇವೆಯನ್ನೂ ಅವರು ಶ್ಲಾಘಿಸಿದ್ದಾರೆ. ಆರೋಗ್ಯ ಸಚಿವರು, ಜನಪ್ರತಿನಿಧಿಗಳು, ಜಿಲ್ಲಾಡಳಿತದ ಅಧಿಕಾರಿಗಳು ಹಾಗೂ ವಿವಿಧ ಸಮಾಜಮುಖಿ ಸಂಸ್ಥೆಗಳ ಸಹಕಾರವನ್ನು ಸ್ಮರಿಸಿದ ಅವರು, ಆಸ್ಪತ್ರೆಯ ಈ ಸಾಧನೆಯ ಗೌರವವನ್ನು ಉಳಿಸಿಕೊಂಡು ತಾಯಂದಿರ ಆರೋಗ್ಯ ರಕ್ಷಣೆಗೆ ನಿರಂತರವಾಗಿ ಶ್ರಮಿಸುವ ಸಂಕಲ್ಪ ವ್ಯಕ್ತಪಡಿಸಿದ್ದಾರೆ.

ಕರ್ತವ್ಯನಿಷ್ಠೆ, ಸರಳತೆ ಹಾಗೂ ಆತ್ಮೀಯತೆಯ ಪ್ರತೀಕ ಅರುಣಕಾಂತ್

26 ವರ್ಷಗಳ ಸೇವೆಗೆ ವಾರ್ತಾ ಇಲಾಖೆಯಿಂದ ಗೌರವದ ಬೀಳ್ಕೊಡುಗೆ



ಸರ್ಕಾರಿ ಸೇವೆ ಎಂದರೆ ಕೇವಲ ಕರ್ತವ್ಯ ನಿರ್ವಹಣೆಯಲ್ಲ, ಅದು ಸಮರ್ಪಣೆ, ಶಿಸ್ತು ಮತ್ತು ಜವಾಬ್ದಾರಿಯ ಪ್ರತಿಬಿಂಬ. ಇಂತಹ ಗುಣಗಳನ್ನು ತಮ್ಮ 26 ವರ್ಷಗಳ ಸುದೀರ್ಘ ಸೇವೆಯಲ್ಲಿ ಮೈಗೂಡಿಸಿಕೊಂಡು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ವಿಶಿಷ್ಟ ಛಾಪು ಮೂಡಿಸಿದ ಚಾಲಕ ಅರುಣಕಾಂತ್ ಅವರು ಅಕ್ಟೋಬರ್ 31ರಂದು ಸರ್ಕಾರಿ ಸೇವೆಯಿಂದ ನಿವೃತ್ತರಾದರು.

1999ರಲ್ಲಿ ವಾರ್ತಾ ಇಲಾಖೆಯಲ್ಲಿ ಚಾಲಕರಾಗಿ ನೇಮಕಗೊಂಡ ಅವರು, ತಮ್ಮ ಸೇವಾವಧಿಯಲ್ಲಿ ಬೆಂಗಳೂರು, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. ಇಲಾಖೆಯ ಅಧಿಕಾರಿಗಳು, ಪತ್ರಕರ್ತರು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ಅವರು, ತಮ್ಮ ಸರಳತೆ, ಸೌಜನ್ಯ ಮತ್ತು ಕರ್ತವ್ಯನಿಷ್ಠೆಯಿಂದ ಎಲ್ಲರ ವಿಶ್ವಾಸ ಹಾಗೂ ಮೆಚ್ಚುಗೆಗೆ ಪಾತ್ರರಾಗಿದ್ದರು.

ಸರ್ಕಾರಿ ಕಾರ್ಯಕ್ರಮಗಳು, ಇಲಾಖೆಯ ವಿವಿಧ ಚಟುವಟಿಕೆಗಳು ಮತ್ತು ಮಾಧ್ಯಮ ಸಂಬಂಧಿತ ಕಾರ್ಯಗಳಲ್ಲಿ ಸಮಯದ ಪರಿವೆಯಿಲ್ಲದೆ ಶ್ರಮಿಸುತ್ತಿದ್ದ ಅರುಣಕಾಂತ್, ವಾರ್ತಾ ಇಲಾಖೆಯ ಕಾರ್ಯನಿರ್ವಹಣೆಯಲ್ಲಿ ಮಹತ್ವದ ಸಹಯೋಗಿಯಾಗಿದ್ದರು. ವಿಶೇಷವಾಗಿ ಪತ್ರಕರ್ತರೊಂದಿಗೆ ಆತ್ಮೀಯ ಸಂಬಂಧ ಬೆಳೆಸಿಕೊಂಡು, ಮಾಧ್ಯಮ ನಿರ್ವಹಣೆಯ ಕಾರ್ಯಗಳಿಗೆ ಸದಾ ಸಹಕಾರ ನೀಡುತ್ತಿದ್ದರು.

ಸೇವೆಗೆ ಮೆಚ್ಚುಗೆ, ಆತ್ಮೀಯ ಬೀಳ್ಕೊಡುಗೆ: ನಿವೃತ್ತಿಯ ಹಿನ್ನೆಲೆಯಲ್ಲಿ ಮಂಗಳೂರಿನ ವಾರ್ತಾ ಇಲಾಖೆ ಕಚೇರಿಯಲ್ಲಿ ಅರುಣಕಾಂತ್ ಅವರನ್ನು ಸನ್ಮಾನಿಸಿ ಗೌರವಪೂರ್ವಕವಾಗಿ ಬೀಳ್ಕೊಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಶ್ರೀನಿವಾಸ್ ನಾಯಕ್ ಇಂದಾಜೆ ಅವರು, 'ವಾರ್ತಾ ಇಲಾಖೆಯಲ್ಲಿ ಅರುಣಕಾಂತ್ ಸಲ್ಲಿಸಿರುವ ಸೇವೆ ಅತ್ಯಂತ ಶ್ಲಾಘನೀಯ. ಪತ್ರಕರ್ತರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ಅವರು, ಸರ್ಕಾರಿ ಕಾರ್ಯಕ್ರಮಗಳ ಮಾಧ್ಯಮ ನಿರ್ವಹಣೆಯಲ್ಲಿ ಹಗಲಿರುಳು ಶ್ರಮಿಸಿದ್ದಾರೆ. ತಮ್ಮ ಕರ್ತವ್ಯನಿಷ್ಠೆ, ಸಮಯಪ್ರಜ್ಞೆ ಹಾಗೂ ಸಹಕಾರ ಮನೋಭಾವದಿಂದ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಾರ್ತಾಧಿಕಾರಿ ಬಿ.ಎ. ಖಾದರ್ ಶಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಜ್ಯೋತಿ ಹಾಗೂ ವಾರ್ತಾ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದು, ಅರುಣಕಾಂತ್ ಅವರ ಸೇವೆಯನ್ನು ಸ್ಮರಿಸಿ ಗೌರವ ಸಲ್ಲಿಸಿದರು.

26 ವರ್ಷಗಳ ಸೇವೆಯ ಪಯಣಕ್ಕೆ ನಿವೃತ್ತಿಯೊಂದಿಗೆ ವಿರಾಮ ದೊರೆತಿದ್ದರೂ, ಸಹೋದ್ಯೋಗಿಗಳು ಮತ್ತು ಪತ್ರಕರ್ತರ ಮನದಲ್ಲಿ ಅವರು ಗಳಿಸಿರುವ ಪ್ರೀತಿ, ವಿಶ್ವಾಸ ಹಾಗೂ ಆತ್ಮೀಯತೆ ಸದಾ ನೆನಪಿನಲ್ಲಿ ಉಳಿಯಲಿದೆ. ಅವರ ನಿವೃತ್ತ ಜೀವನ ಸುಖ, ಶಾಂತಿ, ಆರೋಗ್ಯ ಮತ್ತು ಸಂತೋಷದಿಂದ ಕೂಡಿರಲಿ ಎಂದು ಎಲ್ಲರೂ ಹಾರೈಸಿದರು.

ಸಂಪಾದಕೀಯ

– ರೋಷನ್ ಬೊನಿಫಾಸ್ ಮಾರ್ಟಿಸ್



ಸಾಧಕರಿಗೆ ಸಿಗಲಿ ಗೌರವ ಹಾಗೂ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗಿರಲಿ ಘನತೆ!

ಕನ್ನಡ ರಾಜ್ಯೋತ್ಸವವೆಂದರೆ ಕೇವಲ ಸಂಭ್ರಮಾಚರಣೆಯಲ್ಲ. ನಾಡು, ನುಡಿ, ಸಂಸ್ಕೃತಿ ಹಾಗೂ ಸಮಾಜದ ಒಳಿತಿಗಾಗಿ ನಿಸ್ವಾರ್ಥವಾಗಿ ದುಡಿದ ಸಾಧಕರನ್ನು ಗುರುತಿಸಿ ಗೌರವಿಸುವ ಮಹತ್ವದ ಸಂದರ್ಭ. ಅದರಲ್ಲೂ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ ಎಂಬುದು ಸಾಧಕರ ದೀರ್ಘಕಾಲದ ಪರಿಶ್ರಮ ಮತ್ತು ಸೇವೆಗೆ ದೊರೆಯುವ ಗೌರವದ ಮನ್ನಣೆ. ಆದರೆ ಈ ಬಾರಿಯ ದಕ್ಷಿಣ ಕನ್ನಡ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಕಂಡುಬಂದ ಗೊಂದಲಗಳು ಪ್ರಶಸ್ತಿಯ ಘನತೆ ಮತ್ತು ಪಾರದರ್ಶಕತೆಯ ಬಗ್ಗೆಯೇ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಪ್ರಶಸ್ತಿ ವಿಜೇತರ ಅಧಿಕೃತ ಪಟ್ಟಿ ರಾಜ್ಯೋತ್ಸವದ ಹಿಂದಿನ ದಿನವೇ ಪ್ರಕಟವಾಗಬೇಕಿತ್ತು. ಆದರೆ ಸಂಜೆ ಕಳೆದು ರಾತ್ರಿಯಾದರೂ ಜಿಲ್ಲಾಡಳಿತದಿಂದ ಯಾವುದೇ ಮಾಹಿತಿ ಹೊರಬರಲಿಲ್ಲ. ಈ ನಡುವೆ ಸಾಮಾಜಿಕ ಜಾಲತಾಣಗಳಲ್ಲಿ ಮೊದಲು 60 ಮಂದಿಯ ಪಟ್ಟಿ, ಬಳಿಕ 96 ಮಂದಿಯ ಮತ್ತೊಂದು ಪಟ್ಟಿ ಹರಿದಾಡಿತು. ಕೊನೆಗೆ ರಾಜ್ಯೋತ್ಸವದ ದಿನ ಧ್ವಜಾರೋಹಣ ಮತ್ತು ಪಥಸಂಚಲನ ಮುಗಿದ ಬಳಿಕ ಬೆಳಗ್ಗೆ 9.35ಕ್ಕೆ ಅಧಿಕೃತ ಪಟ್ಟಿ ಬಿಡುಗಡೆಯಾಯಿತು.

ರಾಜ್ಯೋತ್ಸವದ ಸಂಭ್ರಮ ಆರಂಭವಾಗುವ ಮೊದಲೇ ಪ್ರಕಟವಾಗಬೇಕಿದ್ದ ಪಟ್ಟಿ ಧ್ವಜಾರೋಹಣ ಮುಗಿಯುವವರೆಗೂ ಹೊರಬರದಿರಲು ಕಾರಣವೇನು? ಇದು ಕೇವಲ ಆಡಳಿತಾತ್ಮಕ ವಿಳಂಬವೇ ಅಥವಾ ರಾಜಕೀಯ ಶಿಫಾರಸುಗಳು ಮತ್ತು ಒತ್ತಡಗಳಿಂದ ಉಂಟಾದ ಗೊಂದಲವೇ? ಕೊನೆಯ ಕ್ಷಣದವರೆಗೂ ಪಟ್ಟಿಯನ್ನು ಅಂತಿಮಗೊಳಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದ್ದೇಕೆ? ಈ ಪ್ರಶ್ನೆಗಳಿಗೆ ಜಿಲ್ಲಾಡಳಿತ ಸಾರ್ವಜನಿಕವಾಗಿ ಸ್ಪಷ್ಟನೆ ನೀಡಬೇಕಿದೆ. ಈ ಬಾರಿ 119 ವ್ಯಕ್ತಿಗಳು ಹಾಗೂ 54 ಸಂಘ-ಸಂಸ್ಥೆಗಳಿಗೆ ಸನ್ಮಾನ ನೀಡಿರುವುದು ಕೂಡ ಚರ್ಚೆಗೆ ಕಾರಣವಾಗಿದೆ. ಸಾಧಕರನ್ನು ಗೌರವಿಸುವುದು ಸ್ವಾಗತಾರ್ಹ. ಆದರೆ ಪ್ರಶಸ್ತಿಗಳ ಸಂಖ್ಯೆ ಹೆಚ್ಚಾದಷ್ಟೂ ಅವುಗಳ ಮೌಲ್ಯ ಹೆಚ್ಚಾಗುವುದಿಲ್ಲ. ಪ್ರಶಸ್ತಿಯ ಘನತೆ ಅದರ ಸಂಖ್ಯೆಯಲ್ಲಲ್ಲ, ಅದಕ್ಕೆ ಭಾಜನರಾಗುವವರ ಸಾಧನೆ ಮತ್ತು ಸಮಾಜಕ್ಕೆ ನೀಡಿದ ಕೊಡುಗೆಯಲ್ಲಿದೆ. ಯಾವುದೇ ಪ್ರಚಾರದ ಹಂಗಿಲ್ಲದೆ ವರ್ಷಗಳ ಕಾಲ ಸಮಾಜಕ್ಕಾಗಿ ದುಡಿದ ನಿಜವಾದ ಸಾಧಕರು ನಮ್ಮ ನಡುವೆ ಅನೇಕರಿದ್ದಾರೆ. ಶಿಕ್ಷಣ, ಸಾಹಿತ್ಯ, ಕಲೆ, ಸಂಸ್ಕೃತಿ, ಕ್ರೀಡೆ, ಆರೋಗ್ಯ ಹಾಗೂ ಸಮಾಜಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮಹತ್ವದ ಕೊಡುಗೆ ನೀಡಿದವರನ್ನು ಗುರುತಿಸಿ ಗೌರವಿಸುವುದೇ ಪ್ರಶಸ್ತಿಯ ಮೂಲ ಆಶಯವಾಗಬೇಕು. ಪರಿಚಯ, ರಾಜಕೀಯ ಪ್ರಭಾವ ಅಥವಾ ಶಿಫಾರಸುಗಳಿಗಿಂತ ಅರ್ಹತೆ ಮತ್ತು ಸಾಧನೆಗೆ ಆದ್ಯತೆ ದೊರೆಯಬೇಕು. ಇಲ್ಲವಾದರೆ ನಿಜವಾದ ಸಾಧಕರಿಗೆ ಅನ್ಯಾಯವಾಗುವುದರ ಜೊತೆಗೆ ಪ್ರಶಸ್ತಿಯ ಮೌಲ್ಯವೂ ಕುಂದಲಿದೆ.

ಸರ್ಕಾರಕ್ಕೆ ಮತ್ತು ಜಿಲ್ಲಾಡಳಿತಕ್ಕೆ ನಮ್ಮ ನೇರ ಪ್ರಶ್ನೆ: ಪ್ರಶಸ್ತಿಗೆ ಅರ್ಹರನ್ನು ಆಯ್ಕೆ ಮಾಡುವುದು ಮುಖ್ಯವೋ, ಅಥವಾ ಶಿಫಾರಸು ಮಾಡಿದ ಎಲ್ಲರನ್ನೂ ತೃಪ್ತಿಪಡಿಸುವುದು ಮುಖ್ಯವೋ? ಮುಂದಿನ ವರ್ಷದಿಂದಾದರೂ ಪ್ರಶಸ್ತಿ ಆಯ್ಕೆಗೆ ಸ್ಪಷ್ಟ ಮಾನದಂಡಗಳನ್ನು ರೂಪಿಸಬೇಕು. ಸಾಧಕರ ಕಾರ್ಯವ್ಯಾಪ್ತಿ, ಸೇವೆಯ ಅವಧಿ, ಸಮಾಜಕ್ಕೆ ನೀಡಿದ ಕೊಡುಗೆ ಹಾಗೂ ಸಾಧನೆಯ ಮಹತ್ವವನ್ನು ಸಮಗ್ರವಾಗಿ ಪರಿಶೀಲಿಸಿ ನಿಷ್ಪಕ್ಷಪಾತವಾಗಿ ಆಯ್ಕೆ ಮಾಡಬೇಕು. ರಾಜಕೀಯ ಒತ್ತಡ ಮತ್ತು ಅನಗತ್ಯ ಶಿಫಾರಸುಗಳಿಗೆ ಅವಕಾಶ ನೀಡಬಾರದು. ಮುಖ್ಯವಾಗಿ, ಪ್ರಶಸ್ತಿ ವಿಜೇತರ ಅಧಿಕೃತ ಪಟ್ಟಿಯನ್ನು ರಾಜ್ಯೋತ್ಸವಕ್ಕೆ ಕೆಲವು ದಿನಗಳ ಮುಂಚಿತವಾಗಿಯೇ ಪ್ರಕಟಿಸುವ ವ್ಯವಸ್ಥೆ ಜಾರಿಯಾಗಬೇಕು. ಪ್ರಶಸ್ತಿಗೆ ಆಯ್ಕೆಯಾಗದವರೆಲ್ಲ ಅನರ್ಹರಲ್ಲ; ಪ್ರಶಸ್ತಿ ಪಡೆದವರ ಸಾಧನೆಯನ್ನು ಪ್ರಶ್ನಿಸುವುದೂ ನಮ್ಮ ಉದ್ದೇಶವಲ್ಲ. ಆದರೆ ಅರ್ಹರಾದವರು ಕಡೆಗಣಿಸಲ್ಪಡಬಾರದು ಮತ್ತು ಅನಗತ್ಯ ಪ್ರಭಾವದಿಂದ ಪ್ರಶಸ್ತಿಯ ಮೌಲ್ಯ ಕುಂದಬಾರದು ಎಂಬುದೇ ಸಾರ್ವಜನಿಕರ ಆಶಯ. ಈ ಬಾರಿಯ ಗೊಂದಲಗಳಿಂದ ಜಿಲ್ಲಾಡಳಿತ ಪಾಠ ಕಲಿಯಬೇಕು. ಮುಂದಿನ ವರ್ಷದ ರಾಜ್ಯೋತ್ಸವದಂದು ಪ್ರಶಸ್ತಿ ವಿಜೇತರ ಪಟ್ಟಿಗಾಗಿ ಜನರು ಗೊಂದಲದಿಂದ ಕಾಯುವ ಪರಿಸ್ಥಿತಿ ನಿರ್ಮಾಣವಾಗಬಾರದು. ಬದಲಾಗಿ, ನಿಜವಾದ ಸಾಧಕರನ್ನು ಗೌರವಿಸುವ ಹೆಮ್ಮೆಯ ಕ್ಷಣವಾಗಬೇಕು. ಪ್ರಶಸ್ತಿ ರಾಜಕೀಯ ಪ್ರಭಾವದ ಫಲವಾಗಬಾರದು; ಅದು ಪರಿಶ್ರಮದ ಪ್ರತಿಫಲವಾಗಬೇಕು. ಶಿಫಾರಸಿನ ಶಕ್ತಿಗಿಂತ ಸಾಧನೆಯ ಶಕ್ತಿ ದೊಡ್ಡದಾಗಬೇಕು. ರಾಜ್ಯೋತ್ಸವ ಪ್ರಶಸ್ತಿ ಎಲ್ಲರನ್ನೂ ತೃಪ್ತಿಪಡಿಸುವ ಸಾಧನವಾಗದೆ, ನಿಸ್ವಾರ್ಥ ಸೇವೆಗೆ ಸಲ್ಲಿಸುವ ಗೌರವದ ಕಿರೀಟವಾಗಲಿ. ಅದುವೇ ಕನ್ನಡ ರಾಜ್ಯೋತ್ಸವದ ನಿಜವಾದ ಆಶಯಕ್ಕೆ ಸಲ್ಲಿಸುವ ಗೌರವ.

–ಸಂ.

ಕರಾವಳಿ ಸುದ್ದಿ
KARAVALI SUDDI
KARBIL/2015/62120 DAKSHINA KANNADA
ಸಂಪಾದಕ, ಪ್ರಕಾಶಕ ಮತ್ತು ಮುದ್ರಕ :
ರೋಷನ್ ಬೊನಿಫಾಸ್ ಮಾರ್ಟಿಸ್
ಕಚೇರಿ ವಿಳಾಸ :
ಕರಾವಳಿ ಸುದ್ದಿ ವಾರ ಪತ್ರಿಕೆ
ಕಟ್ಟಡ ನಂಬರ್ 2-69/2ಇ, ನಿತ್ಯಾದಾರ್ ಮ್ಯಾನ್ಷನ್ ಹತ್ತಿರ, ಮಾಣಿ ಗ್ರಾಮ ಮತ್ತು ಅಂಚೆ,
ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ - 574 253.
ದೂರವಾಣಿ ಸಂಖ್ಯೆ : +91 84314 26747 ವೆಬ್‌ಸೈಟ್ : karavalisuddi.com
ಇ-ಮೇಯ್ಲ್ : karavalisuddidk@gmail.com


ಮಾರುಕಟ್ಟೆಯಲ್ಲಿ ಲಭ್ಯ
Merchant Name : KARAVALI SUDDI
Account No.: 42208429806
IFSC : SBIN0003823
UPI ID : karavalisuddi9806@sbi
SCAN & PAY
ಕರಾವಳಿ ಸುದ್ದಿ
SUBSCRIPTION
YEARLY : RS 500
2 YEARS : RS 1000
5 YEARS : RS 2500
10 YEARS : RS 5000
PhonePe Paytm BHIM

ಪ್ರೊ. ಎ.ವಿ. ನಾವಡ ಮತ್ತು ಪ್ರೊ. ವೀರಣ್ಣ ರಾಜೂರ ಅವರಿಗೆ ಪ್ರಥಮ 'ಫರ್ಡಿನಾಂಡ್ ಕಿಟ್ಟೆಲ್ ಪ್ರಶಸ್ತಿ'

ಕನ್ನಡ ಭಾಷೆ, ಸಾಹಿತ್ಯ, ಸಂಶೋಧನೆ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ಮಹತ್ವದ ಕೊಡುಗೆ ನೀಡಿರುವ ಹಿರಿಯ ವಿದ್ವಾಂಸರಾದ ಪ್ರೊ. ಎ.ವಿ. ನಾವಡ ಮತ್ತು ಧಾರವಾಡದ ಪ್ರೊ. ವೀರಣ್ಣ ರಾಜೂರ ಅವರು ಪ್ರಥಮ 'ರೆವ. ಡಾ. ಫರ್ಡಿನಾಂಡ್ ಕಿಟ್ಟೆಲ್ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ. ಮಂಗಳೂರಿನ ಕರ್ನಾಟಕ ಥಿಯಾಲಾಜಿಕಲ್ ಕಾಲೇಜಿನ ಮೂಲಕ ಸ್ಥಾಪಿತವಾಗಿರುವ ವಂದನೀಯ ಡಾ. ಫರ್ಡಿನಾಂಡ್ ಕಿಟ್ಟೆಲ್ ಫೌಂಡೇಶನ್ ಈ ಪ್ರಶಸ್ತಿಯನ್ನು ನೀಡುತ್ತಿದೆ. ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಕೊಡುಗೆ ನೀಡಿದ ವಿದ್ವಾಂಸರನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ಪ್ರಶಸ್ತಿಯನ್ನು ಆರಂಭಿಸಲಾಗಿದೆ. ಪ್ರಶಸ್ತಿ ಪ್ರದಾನ ಸಮಾರಂಭವು ನವೆಂಬರ್ 12ರಂದು ಕರ್ನಾಟಕ ಥಿಯಾಲಾಜಿಕಲ್ ಕಾಲೇಜಿನ ಬಿಶಪ್ ಜತನ್ನ ಸಭಾಂಗಣದಲ್ಲಿ ನಡೆಯಲಿದೆ.

ಪ್ರೊ. ಎ.ವಿ. ನಾವಡ – ಭಾಷೆ, ಜಾನಪದ ಮತ್ತು ಹರಿದಾಸ ಸಾಹಿತ್ಯದ ಸಂಶೋಧಕ: 1946ರ ಏಪ್ರಿಲ್ 28ರಂದು ಮಂಗಳೂರಿನ ಸಮೀಪದ ಕೋಟೆಕಾರಿನಲ್ಲಿ ಜನಿಸಿದ ಪ್ರೊ. ಎ.ವಿ. ನಾವಡ ಅವರು ಭಾಷಾವಿಜ್ಞಾನ, ಕೋಶವಿಜ್ಞಾನ, ಜಾನಪದ ಹಾಗೂ ಹರಿದಾಸ ಸಾಹಿತ್ಯ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಕುಂದಾಪುರದ ಭಂಡಾರ್ಕರ್ಸ್ ಕಾಲೇಜಿನಲ್ಲಿ ಸುಮಾರು 24 ವರ್ಷಗಳ ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ ಅವರು, ಕನ್ನಡ ವಿಶ್ವವಿದ್ಯಾಲಯದಲ್ಲಿ ಹಸ್ತಪ್ರತಿ ಶಾಸ್ತ್ರ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು, ಪ್ರಸಾರಾಂಗದ ನಿರ್ದೇಶಕರು ಹಾಗೂ ಪುರಂದರದಾಸ ಅಧ್ಯಯನ ಪೀಠದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ತುಳು ನಿಘಂಟು ಯೋಜನೆಯ ಮುಖ್ಯ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕಿಟ್ಟೆಲ್ ಹಾಗೂ ಕನ್ನಡಕ್ಕೆ ಮಿಷನರಿಗಳ ಕೊಡುಗೆ ಕುರಿತು ಸಂಶೋಧನೆ ನಡೆಸಿರುವ ಅವರು, 'ವಿವಕ್ಷೆ', 'ಜಾನಪದ ಸಮಾಲೋಚನೆ', 'ಜಾನಪದ ಕೈಪಿಡಿ', 'ತುಳು ಜಾನಪದ ಗೀತೆಗಳು', 'ಸಾವಿರಾರು ಕೀರ್ತನೆಗಳು' ಸೇರಿದಂತೆ ಹಲವು ಮಹತ್ವದ ಕೃತಿಗಳನ್ನು ರಚಿಸಿ, ಸಂಪಾದಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಜಾನಪದ ತಜ್ಞ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳಿಗೆ ಪಾತ್ರರಾಗಿದ್ದಾರೆ.

ಪ್ರೊ. ವೀರಣ್ಣ ರಾಜೂರ - ವಚನ ಸಾಹಿತ್ಯ ಮತ್ತು ಹಸ್ತಪ್ರತಿ ಸಂಶೋಧನೆಯಲ್ಲಿ ಸಾಧನೆ: 1947ರ ಜೂನ್ 4ರಂದು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಬೆನಕನಾಳದಲ್ಲಿ ಜನಿಸಿದ ಪ್ರೊ. ವೀರಣ್ಣ ರಾಜೂರ ಅವರು ಕನ್ನಡ ಸಾಹಿತ್ಯ ಸಂಶೋಧನೆ, ವಚನ ಸಾಹಿತ್ಯ ಅಧ್ಯಯನ, ಹಸ್ತಪ್ರತಿ ಸಂಪಾದನೆ ಹಾಗೂ ರಂಗಭೂಮಿ ಕ್ಷೇತ್ರಗಳಲ್ಲಿ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ ಆರಂಭಿಸಿದ ಅವರು, ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ ಹಾಗೂ ಪ್ರಸಾರಾಂಗದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಡಾ. ಎಂ.ಎಂ. ಕಲಬುರ್ಗಿ ಅವರ ಶಿಷ್ಯರಾಗಿದ್ದ ಅವರು, ವಿಶೇಷವಾಗಿ ಬಸವೋತ್ತರ ಯುಗದ ವಚನಕಾರರ ಕುರಿತು ಮಹತ್ವದ ಸಂಶೋಧನೆ ನಡೆಸಿದ್ದಾರೆ. 'ವಚನ ಅಧ್ಯಯನ', 'ಸ್ವರವಚನಗಳು', 'ವೀರಣ್ಣ ರಾಜೂರ ನೂರೊಂದು ಬರಹ', 'ನೂರು ಶೋಧ' ಸೇರಿದಂತೆ ನೂರಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿಯ ಗೌರವ ಫೆಲೋಶಿಪ್ ಹಾಗೂ ಫ.ಗು. ಹಳಕಟ್ಟಿ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳಿಗೆ ಭಾಜನರಾಗಿದ್ದಾರೆ. ಅವರ ಸಾಧನೆಗಳನ್ನು ದಾಖಲಿಸುವ 'ರಾಜಮಾರ್ಗ' ಅಭಿನಂದನ ಗ್ರಂಥವೂ ಪ್ರಕಟವಾಗಿದೆ.



ಆಯ್ಕೆ ಸಮಿತಿ ಮತ್ತು ಫೌಂಡೇಶನ್‌ನ ಆಶಯ: ಪ್ರೊ. ಕೆ. ಚಿನ್ನಪ್ಪ ಗೌಡ ಅವರ ಅಧ್ಯಕ್ಷತೆಯಲ್ಲಿ ರೆವ. ಡಾ. ಎಚ್.ಎಂ. ವಾಟ್ಸನ್, ಡಾ. ಧನಂಜಯ ಕುಂಬ್ಳೆ, ಡಾ. ಪ್ರಕಾಶಚಂದ್ರ ಶಿಶಿಲ ಹಾಗೂ ರೆವ. ಡಾ. ಸಂದೀಪ್ ಥಿಯೋಫಿಲ್ ಅವರನ್ನೊಳಗೊಂಡ ಸಮಿತಿಯು ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡಿದೆ. ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಶೋಧನಾ ಪರಂಪರೆಯನ್ನು ಶ್ರೀಮಂತಗೊಳಿಸಿದ ವಿದ್ವಾಂಸರ ಸಾಧನೆಯನ್ನು ಗುರುತಿಸಿ ಗೌರವಿಸುವುದರ ಜೊತೆಗೆ, ಕನ್ನಡ ಭಾಷೆಯ ಕುರಿತ ಸಂಶೋಧನೆಗೆ ಉತ್ತೇಜನ ನೀಡುವುದು ಫೌಂಡೇಶನ್‌ನ ಪ್ರಮುಖ ಉದ್ದೇಶವಾಗಿದೆ. ವಿಚಾರ ಸಂಕಿರಣ, ಸಮ್ಮೇಳನ, ಶೈಕ್ಷಣಿಕ ಕಾರ್ಯಕ್ರಮಗಳ ಆಯೋಜನೆ ಹಾಗೂ ಸಂಶೋಧನಾತ್ಮಕ ಕೃತಿಗಳ ಪ್ರಕಟಣೆಯ ಮೂಲಕ ಕನ್ನಡದ ಜ್ಞಾನಪರಂಪರೆಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯವನ್ನು ಫೌಂಡೇಶನ್ ಕೈಗೊಳ್ಳಲಿದೆ.

ಫರ್ಡಿನಾಂಡ್ ಕಿಟ್ಟೆಲ್ - ಕನ್ನಡಕ್ಕೆ ಅಮೂಲ್ಯ ಕೊಡುಗೆ ನೀಡಿದ ವಿದ್ವಾಂಸ: ವಂದನೀಯ ಡಾ. ಫರ್ಡಿನಾಂಡ್ ಕಿಟ್ಟೆಲ್ (1832–1903) ಅವರು ಬಾಸೆಲ್ ಮಿಷನ್‌ನ ಮಿಷನರಿಯಾಗಿದ್ದು, ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ ವಿದ್ವಾಂಸರಾಗಿದ್ದರು. ನಿಘಂಟುಶಾಸ್ತ್ರ, ವ್ಯಾಕರಣ, ಛಂದಸ್ಸು, ಪಠ್ಯವಿಮರ್ಶೆ ಹಾಗೂ ಸಾಹಿತ್ಯ ಚರಿತ್ರೆಯಲ್ಲಿ ಮಹತ್ವದ ಸಂಶೋಧನೆ ನಡೆಸಿದ್ದರು. 1832ರ ಏಪ್ರಿಲ್ 7ರಂದು ಜರ್ಮನಿಯ ರೋಸ್ಟರ್‌ಹಾಫ್‌ನಲ್ಲಿ ಜನಿಸಿದ ಕಿಟ್ಟೆಲ್ ಅವರು 1853ರಲ್ಲಿ ಭಾರತಕ್ಕೆ ಆಗಮಿಸಿ ಮಂಗಳೂರಿನಲ್ಲಿ ಸೇವೆ ಆರಂಭಿಸಿದರು. ಸುಮಾರು ಐದು ದಶಕಗಳ ಕಾಲ ಮಂಗಳೂರು, ಧಾರವಾಡ, ಹುಬ್ಬಳ್ಳಿ, ಮಡಿಕೇರಿ ಹಾಗೂ ಕೊಡಗಿನ ವಿವಿಧ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಿದರು. ಅವರ ಪ್ರಮುಖ ಕೊಡುಗೆಗಳಲ್ಲಿ 1894ರಲ್ಲಿ ಪ್ರಕಟವಾದ 'ಕನ್ನಡ–ಇಂಗ್ಲಿಷ್ ನಿಘಂಟು' ಅತ್ಯಂತ ಮಹತ್ವದ್ದಾಗಿದೆ. ಕನ್ನಡ ಭಾಷೆಯ ಅಧ್ಯಯನ ಮತ್ತು ಸಂಶೋಧನೆಗೆ ಇಂದಿಗೂ ಈ ಕೃತಿ ಪ್ರಮುಖ ಆಕರವಾಗಿದೆ. ಅವರ ವಿದ್ವತ್ಪೂರ್ಣ ಕಾರ್ಯವನ್ನು ಗುರುತಿಸಿ ಜರ್ಮನಿಯ ಟ್ಯೂಬಿಂಗನ್ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು. ಕಿಟ್ಟೆಲ್ ಅವರ ವಿದ್ವತ್ತು, ಶಿಕ್ಷಣ ಮತ್ತು ಅಂತರ್‌ಸಾಂಸ್ಕೃತಿಕ ತಿಳುವಳಿಕೆಯಿಂದ ಪ್ರೇರಿತವಾಗಿರುವ ಫೌಂಡೇಶನ್, ಕನ್ನಡ ಭಾಷೆ ಮತ್ತು ಸಾಹಿತ್ಯದ ಸಂಶೋಧನೆಗೆ ಹೊಸ ವೇದಿಕೆ ಕಲ್ಪಿಸುವ ಆಶಯ ಹೊಂದಿದೆ. ಪ್ರಥಮ ಪ್ರಶಸ್ತಿಗೆ ಇಬ್ಬರು ಹಿರಿಯ ವಿದ್ವಾಂಸರ ಆಯ್ಕೆಯು ಕನ್ನಡದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆಯಾಗಿದೆ.

ಸಿಬಿಲ್ ಸ್ಕೋರ್ ನೆಪದಲ್ಲಿ ಶಿಕ್ಷಣ ಸಾಲ ನಿರಾಕರಿಸಬೇಡಿ - ನಿಸಾರ್ ಅಹಮದ್



ಉನ್ನತ ಶಿಕ್ಷಣ ಪಡೆಯುವ ಕನಸು ಹೊತ್ತಿರುವ ವಿದ್ಯಾರ್ಥಿಗಳಿಗೆ ಶಿಕ್ಷಣ ಸಾಲ ನೀಡಲು ಬ್ಯಾಂಕುಗಳು ಅನಗತ್ಯ ಅಡ್ಡಿಪಡಿಸುವಂತಿಲ್ಲ. ಪೋಷಕರ ಸಿಬಿಲ್ ಸ್ಕೋರ್ ಕಡಿಮೆ ಇದೆ ಅಥವಾ ಹಿಂದಿನ ಸಾಲ ಎನ್‌ಪಿಎ ಆಗಿದೆ ಎಂಬ ಕಾರಣ ನೀಡಿ ವಿದ್ಯಾರ್ಥಿಗಳ ಶಿಕ್ಷಣ ಸಾಲದ ಅರ್ಜಿಗಳನ್ನು ತಿರಸ್ಕರಿಸಬಾರದು ಎಂದು ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು. ನಿಸಾರ್ ಅಹಮದ್ ಬ್ಯಾಂಕ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪ್ರಧಾನಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಆರ್ಥಿಕ ನೆರವು ಕೋರಿ ಬ್ಯಾಂಕುಗಳಿಗೆ ಶಿಕ್ಷಣ ಸಾಲದ ಅರ್ಜಿ ಸಲ್ಲಿಸುತ್ತಾರೆ. ಆದರೆ ಕೆಲವು ಬ್ಯಾಂಕುಗಳು ವಿದ್ಯಾರ್ಥಿಗಳ ತಂದೆ–ತಾಯಿಯ ಸಿಬಿಲ್ ಸ್ಕೋರ್ ಹಾಗೂ ಹಿಂದಿನ ಸಾಲಗಳ ಎನ್‌ಪಿಎ ಸ್ಥಿತಿಯನ್ನು ಮುಂದಿಟ್ಟುಕೊಂಡು ಸಾಲ ನೀಡಲು ನಿರಾಕರಿಸುತ್ತಿರುವ ಬಗ್ಗೆ ಆಯೋಗಕ್ಕೆ ದೂರುಗಳು ಬಂದಿವೆ. ಇಂತಹ ವರ್ತನೆ ಸರಿಯಲ್ಲ ಎಂದು ಅವರು ತಿಳಿಸಿದರು.

7.5 ಲಕ್ಷದವರೆಗಿನ ಶಿಕ್ಷಣ ಸಾಲವನ್ನು ಯಾವುದೇ ಗ್ಯಾರಂಟಿ ಇಲ್ಲದೆ ಒದಗಿಸುವ ವ್ಯವಸ್ಥೆಯಿದ್ದು, ಈ ಕುರಿತು ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಸ್ಪಷ್ಟ ನಿರ್ದೇಶನಗಳನ್ನು ನೀಡಿವೆ. ಶಿಕ್ಷಣ ಸಾಲ ಮಂಜೂರಾತಿಯಲ್ಲಿ ಬ್ಯಾಂಕುಗಳು ವಿಳಂಬ ಮಾಡಿದರೆ ಅಥವಾ ಅನಗತ್ಯವಾಗಿ ಅರ್ಜಿ ತಿರಸ್ಕರಿಸಿದರೆ ವಿದ್ಯಾರ್ಥಿಗಳು ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕರನ್ನು ಸಂಪರ್ಕಿಸಬಹುದು ಎಂದು ಸಲಹೆ ನೀಡಿದರು.

ಮಕ್ಕಳ ಸಮಗ್ರ ಮಾಹಿತಿ ಸಂಗ್ರಹಿಸಲು ಸೂಚನೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಜಿಲ್ಲೆಯಲ್ಲಿರುವ ಆರು ವರ್ಷದೊಳಗಿನ ಮಕ್ಕಳ ಸಮಗ್ರ ಅಂಕಿಅಂಶಗಳನ್ನು ಸಂಗ್ರಹಿಸಿ ನಿರ್ವಹಿಸಬೇಕು. ಈ ಮಾಹಿತಿಯನ್ನು ಶಿಕ್ಷಣ ಇಲಾಖೆಯೊಂದಿಗೆ ಹಂಚಿಕೊಳ್ಳುವಂತೆ ನಿಸಾರ್ ಅಹಮದ್ ಸೂಚಿಸಿದರು.

ವಸತಿ ಯೋಜನೆಗಳ ಫಲಾನುಭವಿಗಳಿಗೆ ನೆರವು: ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಮನೆ ನಿರ್ಮಾಣ ಕೈಗೊಂಡಿರುವ ಫಲಾನುಭವಿಗಳಿಗೆ ಕಾಮಗಾರಿ ಪೂರ್ಣಗೊಳಿಸಲು ಅನುದಾನದ ಕೊರತೆ ಎದುರಾದರೆ, ಉದ್ಯೋಗ ಖಾತರಿ ಯೋಜನೆ ಹಾಗೂ ಕಾರ್ಮಿಕ ಇಲಾಖೆಯ ವಸತಿ ಯೋಜನೆಗಳ ಮೂಲಕ ಅಗತ್ಯ ನೆರವು ಒದಗಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲೆಯಲ್ಲಿ ಶಾಂತಿ, ಸುವ್ಯವಸ್ಥೆಗೆ ಮೆಚ್ಚುಗೆ: ಮಂಗಳೂರು ನಗರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಉತ್ತಮವಾಗಿದ್ದು, ಶಾಂತಿ ಮತ್ತು ನೆಮ್ಮದಿಯ ವಾತಾವರಣ ನೆಲೆಸಿರುವುದಕ್ಕೆ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರು ಮೆಚ್ಚುಗೆ ವ್ಯಕ್ತಪಡಿಸಿದರು. ಜಿಲ್ಲೆಯಲ್ಲಿ ಕೋಮು ಗಲಭೆಗಳಿಲ್ಲದೆ ಶಾಂತಿ ಕಾಪಾಡುವಲ್ಲಿ ಪೊಲೀಸ್ ಇಲಾಖೆ ವಹಿಸಿರುವ ಪಾತ್ರವನ್ನು ಶ್ಲಾಘಿಸಿ ಅಭಿನಂದನೆ ಸಲ್ಲಿಸಿದರು.

ಸಭೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ, ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ಅರುಣ್ ಕೆ., ಆಯೋಗದ ನಾಮನಿರ್ದೇಶಿತ ಸದಸ್ಯರಾದ ರಿಯಾಜ್, ಸುಭಾಷ್ ಚೌಟ, ಪೀಟರ್ ಮೆಂಡೋನ್ಸ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.


ಪತ್ರಕರ್ತರಿಗೆ 10 ಲಕ್ಷದ ಅಪಘಾತ ವಿಮೆ



ಅಂಚೆ ಇಲಾಖೆಯು ಮೂಲಕ ಗ್ರಾಹಕರಿಗೆ ವಿವಿಧ ಸೇವಾ ಸೌಲಭ್ಯಗಳು ಲಭ್ಯವಿದ್ದು, ಅವುಗಳ ಸದುಪಯೋಗ ಪಡೆದುಕೊಳ್ಳುವಂತೆ ಭಾರತೀಯ ಅಂಚೆ ಇಲಾಖೆಯ ಪಾಂಡೇಶ್ವರ ಕೇಂದ್ರದ ಹಿರಿಯ ಅಧಿಕಾರಿ ಲೋಕನಾಥ್ ಕರೆ ನೀಡಿದರು. ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಮಂಗಳೂರು ಪ್ರೆಸ್ ಕ್ಲಬ್, ಪತ್ರಿಕಾಭವನ ಟ್ರಸ್ಟ್ ಹಾಗೂ ಭಾರತೀಯ ಅಂಚೆ ಇಲಾಖೆ ಸಹಯೋಗದಲ್ಲಿ ಪತ್ರಕರ್ತರ ಸಂಘದ ಸದಸ್ಯರಿಗಾಗಿ ಆಯೋಜಿಸಿದ್ದ ಅಂಚೆ ವಿಮಾ ಯೋಜನೆಯ ನೋಂದಣಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಅಂಚೆ ಇಲಾಖೆಯಲ್ಲಿ ಆಧಾರ್ ನೋಂದಣಿ ಮತ್ತು ತಿದ್ದುಪಡಿ, ಜೀವ ವಿಮೆ ಹಾಗೂ ವಿವಿಧ ಆರೋಗ್ಯ ವಿಮಾ ಯೋಜನೆಗಳು ಸೇರಿದಂತೆ ಹಲವು ಸೇವೆಗಳು ಲಭ್ಯವಿವೆ. ಕಡಿಮೆ ಮೊತ್ತದ ಪ್ರೀಮಿಯಂ ಹಾಗೂ ಕನಿಷ್ಠ ದಾಖಲೆಗಳೊಂದಿಗೆ ಗ್ರಾಹಕರು ಹೆಚ್ಚಿನ ಸೌಲಭ್ಯಗಳನ್ನು ಪಡೆಯಬಹುದು ಎಂದು ತಿಳಿಸಿದರು. ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯರಿಗೆ 10 ಲಕ್ಷದವರೆಗಿನ ಅಪಘಾತ ವಿಮಾ ಯೋಜನೆಯು ಉಪಯುಕ್ತವಾಗಿದ್ದು, ಪತ್ರಕರ್ತರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಲೋಕನಾಥ್ ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್. ವಹಿಸಿದ್ದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀನಿವಾಸ ನಾಯಕ್ ಇಂದಾಜೆ ವಂದಿಸಿದರು. ಪತ್ರಿಕಾಭವನ ಟ್ರಸ್ಟ್ ಅಧ್ಯಕ್ಷ ಅನ್ನು ಮಂಗಳೂರು, ಜಿಲ್ಲಾ ಸಂಘದ ಪೂರ್ವಾಧ್ಯಕ್ಷ ಹರ್ಷ ಹಾಗೂ ಭಾರತೀಯ ಅಂಚೆ ಇಲಾಖೆಯ ಪಾಂಡೇಶ್ವರ ಕೇಂದ್ರದ ನಿರೀಕ್ಷಕ ಪ್ರದೀಪ್ ಭಂಡಾರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮಾಲತಿ ಶೆಟ್ಟಿ ಮಾಣೂರು ಅವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ



ಸಾಹಿತ್ಯ, ಪತ್ರಿಕೋದ್ಯಮ, ಸಮಾಜಸೇವೆ ಹಾಗೂ ಸಂಘಟನಾ ಕ್ಷೇತ್ರಗಳಲ್ಲಿ ಕಳೆದ 22 ವರ್ಷಗಳಿಂದ ನಿರಂತರವಾಗಿ ತೊಡಗಿಸಿಕೊಂಡಿರುವ ಸಾಹಿತಿ, ಪತ್ರಕರ್ತೆ ಹಾಗೂ ಸಮಾಜಸೇವಕಿ ಮಾಲತಿ ಶೆಟ್ಟಿ ಮಾಣೂರು ಅವರು 2026ನೇ ಸಾಲಿನ ದಕ್ಷಿಣ ಕನ್ನಡ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕಳೆದ 13 ವರ್ಷಗಳಿಂದ ಸಾಹಿತ್ಯಪರ 'ಅಮೃತ ಪ್ರಕಾಶ' ಪತ್ರಿಕೆಯನ್ನು ಮುನ್ನಡೆಸುತ್ತಿರುವ ಅವರು, ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಒಟ್ಟು 9 ಕೃತಿಗಳನ್ನು ರಚಿಸಿರುವ ಮಾಲತಿ ಶೆಟ್ಟಿ ಅವರು, ಪತ್ರಿಕೆಯ ವತಿಯಿಂದ ಆಯೋಜಿಸಿದ ಸರಣಿ ಕೃತಿ ಬಿಡುಗಡೆ ಕಾರ್ಯಕ್ರಮಗಳ ಮೂಲಕ ಹಿರಿಯ ಹಾಗೂ ಕಿರಿಯ ಲೇಖಕರ 49 ಕೃತಿಗಳನ್ನು ಲೋಕಾರ್ಪಣೆಗೊಳಿಸಿದ್ದಾರೆ. ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಸಕ್ತಿ ಬೆಳೆಸುವ ಉದ್ದೇಶದಿಂದ ಜಿಲ್ಲೆಯ ಸರ್ಕಾರಿ ಹಾಗೂ ಖಾಸಗಿ ಶಾಲಾ–ಕಾಲೇಜುಗಳಲ್ಲಿ ಉಚಿತ ಸಾಹಿತ್ಯ ಅಭಿರುಚಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಈವರೆಗೆ 120 ಶಾಲಾ–ಕಾಲೇಜುಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿರುವುದು ಅವರ ಸಾಹಿತ್ಯ ಸೇವೆಯ ವಿಶೇಷತೆಯಾಗಿದೆ. ಹಿರಿಯ ಯಕ್ಷಗಾನ ಕಲಾವಿದ ದಿವಂಗತ ಕಿಟ್ಟಣ್ಣ ಶೆಟ್ಟಿ ಮಾಣೂರು ಹಾಗೂ ರೇವತಿ ಶೆಟ್ಟಿ ಮಾಣೂರು ದಂಪತಿಯ ಪುತ್ರಿಯಾಗಿರುವ ಮಾಲತಿ ಶೆಟ್ಟಿ ಅವರು, ಪತಿ ಸತ್ಯ ಪ್ರಕಾಶ್ ಶೆಟ್ಟಿ ಅವರೊಂದಿಗೆ ಮಂಗಳೂರಿನ ಅತ್ತಾವರದ ವೈದ್ಯನಾಥ ನಗರದಲ್ಲಿರುವ 'ಸಾಹಿತ್ಯ ನಂದನ' ನಿವಾಸದಲ್ಲಿ ವಾಸವಾಗಿದ್ದಾರೆ. ಎರಡು ದಶಕಗಳಿಗೂ ಹೆಚ್ಚಿನ ಸಾಹಿತ್ಯ, ಪತ್ರಿಕೋದ್ಯಮ ಹಾಗೂ ಸಮಾಜಸೇವೆಯನ್ನು ಗುರುತಿಸಿ ಅವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಲಭಿಸಿರುವುದು ಅವರ ಸಾಧನೆಗೆ ಸಂದ ಗೌರವವಾಗಿದೆ.

200ರ ಕೂಪನ್‌ಗೆ ಫಾರ್ಚುನರ್: ಒಲಿದ ಅದೃಷ್ಟ!



ಮಧ್ಯಪ್ರದೇಶದ ಸೀಲಂಪುರದಲ್ಲಿ ಆರು ವರ್ಷದ ಬಾಲಕನೊಬ್ಬ ಕೇವಲ 200 ಮೌಲ್ಯದ ಲಕ್ಕಿ ಡ್ರಾ ಕೂಪನ್ ಮೂಲಕ ಬರೋಬ್ಬರಿ 50 ಲಕ್ಷ ಮೌಲ್ಯದ ಟೊಯೊಟಾ ಫಾರ್ಚುನರ್ ಕಾರನ್ನು ಗೆದ್ದಿರುವ ಘಟನೆ ಎಲ್ಲರ ಗಮನ ಸೆಳೆದಿದೆ. ಅದೃಷ್ಟ ಯಾವಾಗ, ಹೇಗೆ ಕೈಹಿಡಿಯುತ್ತದೆ ಎಂಬುದಕ್ಕೆ ಈ ಘಟನೆ ಮತ್ತೊಂದು ಉದಾಹರಣೆಯಾಗಿದೆ. ಗರ್ಬಾ ಕಾರ್ಯಕ್ರಮವೊಂದರಲ್ಲಿ ಬಾಲಕನ ಅಜ್ಜಿ ಖರೀದಿಸಿದ ಲಕ್ಕಿ ಡ್ರಾ ಕೂಪನ್ ಮೊಮ್ಮಗನ ಹೆಸರಿನಲ್ಲಿ ನೋಂದಣಿಯಾಗಿದ್ದು, ಅದೇ ಕೂಪನ್ ಕುಟುಂಬಕ್ಕೆ ಭರ್ಜರಿ ಬಹುಮಾನ ತಂದುಕೊಟ್ಟಿದೆ.

ಅಜ್ಜಿ ಖರೀದಿಸಿದ ಕೂಪನ್‌ಗೆ ಮೊಮ್ಮಗನಿಗೆ ಬಹುಮಾನ! :

ಸೀಲಂಪುರ ನಿವಾಸಿ ಮೆದಾಂಶ್ ರೈಕ್ವಾರ್ ಎಂಬ ಆರು ವರ್ಷದ ಬಾಲಕನ ಅಜ್ಜಿ ಕಿರಣ್ ರೈಕ್ವಾರ್ ಅವರು ಗರ್ಬಾ ಕಾರ್ಯಕ್ರಮದ ಸಂದರ್ಭದಲ್ಲಿ 200 ನೀಡಿ ಲಕ್ಕಿ ಡ್ರಾ ಕೂಪನ್ ಖರೀದಿಸಿದ್ದರು. ಅದನ್ನು ಮೊಮ್ಮಗನ ಹೆಸರಿನಲ್ಲಿ ನೋಂದಾಯಿಸಿದ್ದರು. 2026ರಲ್ಲಿ ನಡೆದ ಲಕ್ಕಿ ಡ್ರಾ ಫಲಿತಾಂಶ ಪ್ರಕಟವಾದಾಗ, ಮೆದಾಂಶ್‌ಗೆ ಮೊದಲ ಬಹುಮಾನವಾಗಿ 50 ಲಕ್ಷ ಮೌಲ್ಯದ ಟೊಯೊಟಾ ಫಾರ್ಚುನರ್ ಕಾರು ಲಭಿಸಿದೆ ಎಂದು ವರದಿಯಾಗಿದೆ.

ಎರಡು ವರ್ಷಗಳ ಕನಸು ನನಸು!: ಕುಟುಂಬವು ಕಳೆದ ಎರಡು ವರ್ಷಗಳಿಂದ ಸ್ವಂತ ಕಾರು ಖರೀದಿಸುವ ಕನಸು ಕಾಣುತ್ತಿತ್ತು ಎನ್ನಲಾಗಿದೆ. ಇದೀಗ ಲಕ್ಕಿ ಡ್ರಾದಲ್ಲಿ ದುಬಾರಿ ಕಾರು ಬಹುಮಾನವಾಗಿ ದೊರೆತಿರುವುದು ಕುಟುಂಬದ ಸಂತಸವನ್ನು ಇಮ್ಮಡಿಗೊಳಿಸಿದೆ. ಹೊಸ ಕಾರನ್ನು ಮನೆಗೆ ಬರಮಾಡಿಕೊಂಡ ಕುಟುಂಬಸ್ಥರು ಪೂಜೆ ಸಲ್ಲಿಸಿ ಸಂಭ್ರಮಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ವೈರಲ್: ಕೇವಲ 200 ಹೂಡಿಕೆಗೆ 50 ಲಕ್ಷದ ಕಾರು ಒಲಿದಿರುವ ಈ ಬಾಲಕನ ಕಥೆ ಸಾಮಾಜಿಕ ಜಾಲತಾಣಗಳಲ್ಲಿ ಗಮನ ಸೆಳೆಯುತ್ತಿದೆ. ಅಜ್ಜಿ ಖರೀದಿಸಿದ ಒಂದು ಕೂಪನ್ ಮೊಮ್ಮಗನ ಹೆಸರಿನಲ್ಲಿ ಅದೃಷ್ಟದ ಬಾಗಿಲು ತೆರೆದಿರುವುದು ಅನೇಕರಲ್ಲಿ ಅಚ್ಚರಿ ಮೂಡಿಸಿದೆ.

ವಕೀಲ ಎಂ.ವಿ. ಶಂಕರ್ ಭಟ್ ಅವರಿಗೆ 'ವಕೀಲ ಭೂಷಣ-2026' ಗೌರವ



ಮಂಗಳೂರು ವಕೀಲರ ಸಂಘ (ರಿ.) ಹಾಗೂ ವಕೀಲರ ವಾಹಿನಿ ಸಹಯೋಗದಲ್ಲಿ ಆಯೋಜಿಸಲಾದ 'ವಕೀಲ ಭೂಷಣ–2026' ಪ್ರಶಸ್ತಿ ಪ್ರದಾನ ಸಮಾರಂಭವು ಮಂಗಳೂರು ವಕೀಲರ ಸಂಘದ ಸಮ್ಮೇಳನ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು. ಮಂಗಳೂರಿನ ಹಿರಿಯ ವಕೀಲರಾದ ಎಂ.ವಿ. ಶಂಕರ್ ಭಟ್ ಅವರಿಗೆ 'ವಕೀಲ ಭೂಷಣ–2026' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ವಕೀಲ ವೃತ್ತಿಯಲ್ಲಿ ಸಲ್ಲಿಸಿದ ದೀರ್ಘಕಾಲದ ಸೇವೆ, ವೃತ್ತಿಪರ ಅನುಭವ ಹಾಗೂ ಸಾಧನೆಗಳನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು.

ಮಂಗಳೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ (ಪ್ರಭಾರ) ಮಾನು ಕೆ.ಎಸ್. ಅವರು ಗೌರವ ಅತಿಥಿಗಳಾಗಿ ಭಾಗವಹಿಸಿದ್ದರು. ಕುಂದಾಪುರದ ಹಿರಿಯ ವಕೀಲ ಎ.ಎಸ್.ಎನ್. ಹೆಬ್ಬಾರ್, ವಕೀಲರ ವಾಹಿನಿಯ ಪ್ರಧಾನ ಸಂಪಾದಕ ಹಾಗೂ ಹಿರಿಯ ವಕೀಲ ಎಸ್.ಎನ್. ಪ್ರಶಾಂತ್ ಚಂದ್ರ, ಸಂಪಾದಕ ಮತ್ತು ಪ್ರಕಾಶಕ ಡಾ. ಡಿ.ಎಂ. ಹೆಗಡೆ, ಸಹ ಸಂಪಾದಕ ಚಂದ್ರಕಾಂತ ಕೆ. ಪಾಟೀಲ ಹಾಗೂ ಬೆಂಗಳೂರಿನ ವಕೀಲ ಬಿ. ವೆಂಕಟ ಕೃಷ್ಣ ಅವರು ಅತಿಥಿಗಳಾಗಿ ಉಪಸ್ಥಿತರಿದ್ದರು. ಮಂಗಳೂರು ವಕೀಲರ ಸಂಘದ ಅಧ್ಯಕ್ಷ ಜಗದೀಶ್ ಕೆ. ಶೇಣವ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಗೌತಮ್ ಬಿ.ಪಿ. ಅವರು ಉಪಸ್ಥಿತರಿದ್ದರು.

ಹಿರಿಯ ವಕೀಲರ ವೃತ್ತಿಪರ ಸಾಧನೆಗಳನ್ನು ಗುರುತಿಸುವುದರ ಜೊತೆಗೆ ನ್ಯಾಯಾಂಗ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಗಳನ್ನು ಗೌರವಿಸುವ ಉದ್ದೇಶದಿಂದ ಈ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿತ್ತು. ಹಿರಿಯ ಹಾಗೂ ಕಿರಿಯ ವಕೀಲರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಭ್ರಮಕ್ಕೆ ಸಾಕ್ಷಿಯಾದರು. ವಕೀಲ ವೃತ್ತಿಯ ಘನತೆ, ನೈತಿಕ ಮೌಲ್ಯಗಳು ಮತ್ತು ಸಾಧಕರ ಸೇವೆಯನ್ನು ಗುರುತಿಸುವ ಆಶಯದೊಂದಿಗೆ ನಡೆದ 'ವಕೀಲ ಭೂಷಣ–2026' ಸಮಾರಂಭವು ಅರ್ಥಪೂರ್ಣವಾಗಿ ಸಂಪನ್ನಗೊಂಡಿತು.

ಮಣ್ಣಾಪು ಅಪಘಾತ - ಬೈಕ್ ಸಹಸವಾರ ಸಾವು

ನಿಂತಿದ್ದ ಬೈಕ್‌ಗೆ ಹಿಂಬದಿಯಿಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ಸಹಸವಾರ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟ ಘಟನೆ ನಡೆದಿದೆ. ಮೃತರನ್ನು ಬಂಟ್ವಾಳ ತಾಲೂಕಿನ ನಾವೂರು ಗ್ರಾಮದ ಕನಪಾದೆ ನಿವಾಸಿ ಗೋಪಾಲ್ ಎಂದು ಗುರುತಿಸಲಾಗಿದೆ. ಮಣ್ಣಾಪು ಬಳಿ ಈ ಅಪಘಾತ ಸಂಭವಿಸಿತ್ತು. ಗೋಪಾಲ್ ಅವರು ಝುಕಾರಿಯಾ ಎಂಬುವವರು ಚಲಾಯಿಸುತ್ತಿದ್ದ ಬೈಕ್‌ನಲ್ಲಿ ಸಹಸವಾರರಾಗಿ ಪ್ರಯಾಣಿಸುತ್ತಿದ್ದರು. ಗಂಜೀಮಠದ ಕೆಂಪುಕಲ್ಲು ಕೋರೆಯಲ್ಲಿ ಕೆಲಸ ಮುಗಿಸಿ ಮನೆಗೆ ಮರಳುತ್ತಿದ್ದ ವೇಳೆ ಮಣ್ಣಾಪು ತಲುಪಿದಾಗ, ಮತ್ತೊಂದು ಅಪಘಾತದ ಹಿನ್ನೆಲೆಯಲ್ಲಿ ರಸ್ತೆ ಸಂಚಾರ ಸ್ಥಗಿತಗೊಂಡಿತ್ತು. ಈ ಕಾರಣದಿಂದ ಝುಕಾರಿಯಾ ಬೈಕ್ ನಿಲ್ಲಿಸಿದ್ದರು. ಈ ಸಂದರ್ಭದಲ್ಲಿ ಹಿಂಬದಿಯಿಂದ ವೇಗವಾಗಿ ಬಂದ ಕಾರೊಂದು ನಿಂತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಬೈಕ್‌ನಲ್ಲಿದ್ದ ಇಬ್ಬರೂ ರಸ್ತೆಗೆ ಬಿದ್ದು ಗಾಯಗೊಂಡಿದ್ದರು. ಗೋಪಾಲ್ ಅವರಿಗೆ ತಲೆ, ಎದೆ ಸೇರಿದಂತೆ ದೇಹದ ವಿವಿಧ ಭಾಗಗಳಿಗೆ ಗಂಭೀರ ಗಾಯಗಳಾಗಿದ್ದರೆ, ಝುಕಾರಿಯಾ ಅವರಿಗೂ ಗಾಯಗಳಾಗಿದ್ದವು. ಸ್ಥಳೀಯರು ಗಾಯಾಳುಗಳನ್ನು ಬಂಟ್ವಾಳ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಗೋಪಾಲ್ ಅವರನ್ನು ತೀವ್ರ ನಿಗಾ ಘಟಕದಲ್ಲಿ ದಾಖಲಿಸಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೆ ಅಂದು ರಾತ್ರಿ ಮೃತಪಟ್ಟಿದ್ದಾರೆ. ಮೃತರು ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಕಾರು ಚಾಲಕ ಆಫ್ರೀದ್ ವಿರುದ್ಧ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಲಾರಿ-ಸ್ಕೂಟರ್ ಡಿಕ್ಕಿ - ಸವಾರ ಸಾವು

ಬೈಕಂಪಾಡಿಯಲ್ಲಿ ಲಾರಿ ಮತ್ತು ಸ್ಕೂಟರ್ ನಡುವೆ ಸಂಭವಿಸಿದ ಅಪಘಾತದಲ್ಲಿ ಸ್ಕೂಟರ್ ಸವಾರ ಮೃತಪಟ್ಟಿದ್ದಾರೆ. ಮೃತರನ್ನು ಹಳೆಯಂಗಡಿಯ ಕದಿಕೆ ನಿವಾಸಿ 39 ವರ್ಷ ಪ್ರಾಯದ ಇಮ್ತಿಯಾಜ್ ಎಂದು ಗುರುತಿಸಲಾಗಿದೆ. ಅವರು ಶಿಪ್ಪಿಂಗ್ ಕಂಪನಿಯೊಂದರಲ್ಲಿ ಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಪಣಂಬೂರಿನಲ್ಲಿರುವ ತಮ್ಮ ಕಚೇರಿಗೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದ ವೇಳೆ ಬೈಕಂಪಾಡಿಯಲ್ಲಿ ಲಾರಿಗೆ ಡಿಕ್ಕಿ ಹೊಡೆದು ಗಂಭೀರವಾಗಿ ಗಾಯಗೊಂಡಿದ್ದರು. ತಕ್ಷಣ ಸ್ಥಳೀಯರು ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿದರಾದರೂ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಸ್ಟುಡಿಯೋ ಮಾಲೀಕನ ಕೊಲೆ ಯತ್ನ - ಜೈಲು ಶಿಕ್ಷೆ

ಸ್ಟುಡಿಯೋ ಮಾಲೀಕನನ್ನು ಕತ್ತಿಯಿಂದ ಕಡಿದು ಕೊಲೆ ಮಾಡಲು ಯತ್ನಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳಿಗೆ ನ್ಯಾಯಾಲಯವು ತಲಾ 7 ವರ್ಷಗಳ ಜೈಲು ಶಿಕ್ಷೆ ಹಾಗೂ ಒಟ್ಟು 88 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ. 2020ರ ಅಕ್ಟೋಬರ್ 28ರಂದು ಸಂಜೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಫರಂಗಿಪೇಟೆಯಲ್ಲಿ ಈ ಘಟನೆ ನಡೆದಿತ್ತು. ಸ್ಟುಡಿಯೋ ಮಾಲೀಕ ದಿನೇಶ್ ಅವರು ಸ್ಟುಡಿಯೋದಲ್ಲಿದ್ದ ಸಂದರ್ಭದಲ್ಲಿ ಪೂರ್ವದ್ವೇಷದ ಹಿನ್ನೆಲೆಯಲ್ಲಿ ನಾಲ್ವರು ಆರೋಪಿಗಳು ಅಲ್ಲಿಗೆ ಬಂದು ಕತ್ತಿಯಿಂದ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ್ದರು. ಈ ಸಂಬಂಧ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ಪೊಲೀಸ್ ಉಪನಿರೀಕ್ಷಕ ಪ್ರಸನ್ನ ಎಂ.ಎಸ್. ಅವರು ತನಿಖೆ ನಡೆಸಿ, ಆರೋಪಿಗಳಾದ ಮಹಮ್ಮದ್ ಸೈಫುದಿನ್, ಮಹಮ್ಮದ್ ಅರ್ಷಾದ್, ಅಬ್ದುಲ್ ರಹಿಮಾನ್ ಅಲಿಯಾಸ್ ಮುನ್ನಿ ಹಾಗೂ ಮಹಮ್ಮದ್ ಸವಾದ ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮಂಗಳೂರಿನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಜಗದೀಶ್ ವಿ.ಎನ್. ಅವರು 2026ರ ಅಕ್ಟೋಬರ್ 28ರಂದು ನಾಲ್ವರು ಆರೋಪಿಗಳಿಗೂ ತಲಾ 7 ವರ್ಷಗಳ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕಿ ಜ್ಯೋತಿ ನಾಯಕ್ ವಾದ ಮಂಡಿಸಿದ್ದರು.

ಅಪ್ರಾಪ್ತ ಬಾಲಕಿ ಅತ್ಯಾಚಾರ ಪ್ರಕರಣ ಆರೋಪಿಗೆ 20 ವರ್ಷ ಕಠಿಣ ಜೈಲು ಶಿಕ್ಷೆ

ಅಪ್ರಾಪ್ತ ಬಾಲಕಿಯನ್ನು ಕರೆದೊಯ್ದು ಅತ್ಯಾಚಾರವೆಸಗಿ, ಬೆದರಿಕೆ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗೆ ನ್ಯಾಯಾಲಯವು 20 ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ ಒಟ್ಟು 50 ಸಾವಿರ ರೂಪಾಯಿ ದಂಡ ವಿಧಿಸಿ ಆದೇಶಿಸಿದೆ. ಕಡಬ ಪೊಲೀಸ್ ಠಾಣೆಯಲ್ಲಿ 2018ರಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ನೆಲ್ಯಾಡಿ ನಿವಾಸಿ 32 ವರ್ಷ ಪ್ರಾಯದ ರವಿ ಅಲಿಯಾಸ್ ರವೀಂದ್ರ ಆಚಾರ್ಯ ಶಿಕ್ಷೆಗೊಳಗಾದ ಆರೋಪಿ. ಪ್ರಕರಣದ ತನಿಖೆ ನಡೆಸಿದ್ದ ಅಂದಿನ ಉಪ್ಪಿನಂಗಡಿ ಪೊಲೀಸ್ ವೃತ್ತ ನಿರೀಕ್ಷಕ ಡಿ. ಮಂಜುನಾಥ್ ಅವರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಮಂಗಳೂರಿನ 7ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ (ಪುತ್ತೂರು ಕಾರ್ಯವ್ಯಾಪ್ತಿ) ನ್ಯಾಯಾಧೀಶೆ ಅವರಾದ ಸುಮಂಗಲ ಅವರು ವಿಚಾರಣೆ ನಡೆಸಿ, ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಪೋಕ್ಸೊ ಕಾಯ್ದೆಯಡಿ 20 ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ 25 ಸಾವಿರ ರೂ. ದಂಡ ವಿಧಿಸಿದ್ದಾರೆ. ಐಪಿಸಿ ಸೆಕ್ಷನ್ 506ರಡಿ ಒಂದು ವರ್ಷ ಕಠಿಣ ಜೈಲು ಶಿಕ್ಷೆ ಮತ್ತು 25 ಸಾವಿರ ರೂ. ದಂಡವನ್ನೂ ವಿಧಿಸಿದ್ದಾರೆ. ಎರಡೂ ಶಿಕ್ಷೆಗಳನ್ನು ಏಕಕಾಲದಲ್ಲಿ ಅನುಭವಿಸುವಂತೆ ನ್ಯಾಯಾಲಯ ಆದೇಶಿಸಿದೆ. ಸರ್ಕಾರಿ ಅಭಿಯೋಜಕ ಪುಷ್ಪರಾಜ್ ಅಡಂತ್ಯಾಯ ಅವರು ಸರ್ಕಾರದ ಪರವಾಗಿ ಸಮರ್ಥ ವಾದ ಮಂಡಿಸಿದ್ದರು.

ಲೈಂಗಿಕ ದೌರ್ಜನ್ಯ - ಆರೋಪಿಗೆ 20 ವರ್ಷ ಜೈಲು

ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದಲ್ಲಿ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗೆ 20 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ಒಟ್ಟು 75,000 ದಂಡ ವಿಧಿಸಿ ಮಂಗಳೂರಿನ 7ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ (ಪುತ್ತೂರು ಕಾರ್ಯವ್ಯಾಪ್ತಿ) ತೀರ್ಪು ನೀಡಿದೆ. ಕಡಬ ಪೊಲೀಸ್ ಠಾಣೆಯಲ್ಲಿ 2019ರಲ್ಲಿ ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಡಬದ ನೂಜಿಬಾಳ್ತಿಲ ನಿವಾಸಿ 34 ವರ್ಷ ಪ್ರಾಯಾದ ಸದ್ದಾಂ ಶಿಕ್ಷೆಗೊಳಗಾದ ಆರೋಪಿ. ಆರೋಪಿಯು ಅಪ್ರಾಪ್ತ ಬಾಲಕಿಯ ಮನೆಗೆ ತೆರಳಿ ಆಕೆಯ ಇಚ್ಛೆಗೆ ವಿರುದ್ಧವಾಗಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂಬ ಆರೋಪದಡಿ ಕಡಬ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 24/2019ರಂತೆ ಪ್ರಕರಣ ದಾಖಲಾಗಿತ್ತು. ಅಂದಿನ ಉಪ್ಪಿನಂಗಡಿ ವೃತ್ತ ನಿರೀಕ್ಷಕ ನಾಗೇಶ್ ಕೆ. ಅವರು ಪ್ರಕರಣದ ತನಿಖೆ ನಡೆಸಿ, ಆರೋಪಿಯ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ 7ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಸುಮಂಗಲ ಚಕಲಬ್ಬಿ ಅವರು ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಶಿಕ್ಷೆ ಪ್ರಕಟಿಸಿದ್ದಾರೆ.

ಶಿಕ್ಷೆಯ ವಿವರ: ಪೋಕ್ಸೋ ಕಾಯ್ದೆಯ ಸೆಕ್ಷನ್ 5(ಎಲ್) ಮತ್ತು 5(ಜೆ)(ii) ಜೊತೆಗೆ ಸೆಕ್ಷನ್ 6ರ ಅಡಿಯಲ್ಲಿ 20 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 50,000 ದಂಡ ವಿಧಿಸಲಾಗಿದೆ. ದಂಡ ಪಾವತಿಸಲು ವಿಫಲವಾದರೆ ಹೆಚ್ಚುವರಿಯಾಗಿ ಒಂದು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಅನುಭವಿಸಬೇಕು. ಐಪಿಸಿ ಸೆಕ್ಷನ್ 506ರ ಅಡಿಯಲ್ಲಿ ಒಂದು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 25,000 ದಂಡ ವಿಧಿಸಲಾಗಿದೆ. ದಂಡ ಪಾವತಿಸಲು ವಿಫಲವಾದರೆ ಹೆಚ್ಚುವರಿಯಾಗಿ ಒಂದು ವರ್ಷ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಲಾಗಿದೆ. ಎರಡೂ ಶಿಕ್ಷೆಗಳು ಏಕಕಾಲದಲ್ಲಿ ಜಾರಿಯಾಗಲಿವೆ ಎಂದು ನ್ಯಾಯಾಲಯ ಆದೇಶಿಸಿದೆ.

ಆರೋಪಿಯ ವಿರುದ್ಧ ಹಲವು ಪ್ರಕರಣಗಳು ದಾಖಲು: ಶಿಕ್ಷೆಗೊಳಗಾದ ಸದ್ದಾಂ ಕಡಬ ಪೊಲೀಸ್ ಠಾಣೆಯಲ್ಲಿ ರೌಡಿಶೀಟರ್ ಆಗಿದ್ದು, ಆತನ ವಿರುದ್ಧ ಕಡಬ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 59/2011, 62/2020, 27/2021, 105/2021 ಹಾಗೂ ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ 101/2022ರಂತೆ ವಿವಿಧ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ. ಪ್ರಕರಣದಲ್ಲಿ ಸರ್ಕಾರಿ ಅಭಿಯೋಜಕರಾದ ಪುಷ್ಪರಾಜ್ ಅಡಂತ್ಯಾಯ ಅವರು ಸರ್ಕಾರದ ಪರವಾಗಿ ಸಮರ್ಥವಾಗಿ ವಾದ ಮಂಡಿಸಿದ್ದರು.

ಟಿಪ್ಪರ್ ಅಪಘಾತ - ಅಕ್ರಮ ಮಣ್ಣು ಸಾಗಾಟ, ಮೂವರ ಬಂಧನ

ಅತಿ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯಿಂದ ವಿದ್ಯಾರ್ಥಿಗಳ ಸ್ಕೂಟರ್‌ಗೆ ಟಿಪ್ಪರ್ ಲಾರಿ ಡಿಕ್ಕಿ ಹೊಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಟಿಪ್ಪರ್ ಚಾಲಕರು ಹಾಗೂ ಅಕ್ರಮವಾಗಿ ಮಣ್ಣು ತೆಗೆದ ಜಾಗದ ಮಾಲೀಕ ಸೇರಿದಂತೆ ಮೂವರನ್ನು ಕುಂದಾಪುರ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ. ಕುಂದಾಪುರ ತಾಲೂಕಿನ ಬಳ್ಕೂರು ಗ್ರಾಮದ ವಿಷ್ಣುಮೂರ್ತಿ ದೇವಸ್ಥಾನದ ಸಮೀಪ ರಾಜ್ಯ ಹೆದ್ದಾರಿ 52ರಲ್ಲಿ ಈ ಅಪಘಾತ ಸಂಭವಿಸಿತ್ತು. ಮಣ್ಣು ಸಾಗಿಸುತ್ತಿದ್ದ ಎರಡು ಟಿಪ್ಪರ್ ಲಾರಿಗಳು ಕುಂದಾಪುರ ಕಡೆಯಿಂದ ಅತಿ ವೇಗ ಹಾಗೂ ನಿರ್ಲಕ್ಷ್ಯದಿಂದ ಬರುತ್ತಿದ್ದವು. ಮುಂದೆ ಸಾಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನಿಂದಾಗಿ ಮೊದಲ ಟಿಪ್ಪರ್ ಚಾಲಕ ವೇಗ ಕಡಿಮೆ ಮಾಡಿದ್ದಾನೆ. ಈ ವೇಳೆ ಹಿಂದಿನಿಂದ ಬಂದ ಮತ್ತೊಂದು ಟಿಪ್ಪರ್ ಅದಕ್ಕೆ ಡಿಕ್ಕಿ ಹೊಡೆದಿದೆ. ಬಳಿಕ ಎರಡನೇ ಟಿಪ್ಪರ್ ಚಾಲಕ ವಾಹನವನ್ನು ರಸ್ತೆಯ ಬಲಭಾಗಕ್ಕೆ ತಿರುಗಿಸಿದ ಪರಿಣಾಮ, ಕಂಡ್ಲೂರಿನಿಂದ ಬಸ್ರೂರು ಕಡೆಗೆ ಕಾಲೇಜು ವಿದ್ಯಾರ್ಥಿಗಳನ್ನು ಕರೆದೊಯ್ಯುತ್ತಿದ್ದ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಇಬ್ಬರು ವಿದ್ಯಾರ್ಥಿಗಳು ಗಂಭೀರವಾಗಿ ಗಾಯಗೊಂಡಿದ್ದರು. ಪೊಲೀಸರ ತನಿಖೆಯಲ್ಲಿ ಅಪಘಾತಕ್ಕೆ ಕಾರಣವಾದ ಟಿಪ್ಪರ್ ಅಗತ್ಯ ಪರವಾನಗಿ ಇಲ್ಲದೆ ಮಣ್ಣು ಸಾಗಿಸುತ್ತಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಟಿಪ್ಪರ್ ಚಾಲಕರಾದ ನಾಗರಾಜ್ ಮತ್ತು ಖುತ್ಪಿಜ್ ಹಾಗೂ ಮಣ್ಣು ತೆಗೆದ ಸ್ಥಳದ ಮಾಲೀಕ ಅಜಿತ್ ಶೆಟ್ಟಿ ಅವರನ್ನು ಬಂಧಿಸಿದ್ದಾರೆ. ಅಕ್ರಮ ಮಣ್ಣು ಸಾಗಾಟ ಮತ್ತು ಅಪಘಾತಕ್ಕೆ ಸಂಬಂಧಿಸಿದಂತೆ ವಿವಿಧ ಕಾಯ್ದೆಗಳಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಭೀಕರ ಅಪಘಾತ - ಇಬ್ಬರು ಯುವಕರ ಸಾವು

ರಸ್ತೆ ಬದಿಯಲ್ಲಿ ನಿಲ್ಲಿಸಲಾಗಿದ್ದ ಲಾರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಯುವಕರು ದಾರುಣವಾಗಿ ಮೃತಪಟ್ಟ ಘಟನೆ ಪಡನ್ನಕ್ಕಾಡ್‌ನ ನೆಹರೂ ಕಾಲೇಜು ಮುಂಭಾಗದ ರಾಷ್ಟ್ರೀಯ ಹೆದ್ದಾರಿಯಲ್ಲಿ ಸೋಮವಾರ ರಾತ್ರಿ ನಡೆದಿದೆ. ಮೃತರನ್ನು ನೀಲೇಶ್ವರದ ಪಡಿಂಜಾಟಂ ಕೊಳುವಲ್ ನಿವಾಸಿಗಳಾದ 22 ವರ್ಷ ಪ್ರಾಯದ ಅನುರಾಗ್ ಮತ್ತು 24 ವರ್ಷ ಪ್ರಾಯದ ಆನಂದಕೃಷ್ಣನ್ ಎಂದು ಗುರುತಿಸಲಾಗಿದೆ. ಕಾಞಂಗಾಡ್‌ನ ತಿರುವತ್ತ್ ಅರಯಿಲ್ ಭಗವತಿ ದೇವಸ್ಥಾನದಲ್ಲಿ ನಡೆಯುತ್ತಿದ್ದ ತೆಯ್ಯಂ ವೀಕ್ಷಿಸಲು ಇಬ್ಬರೂ ನೀಲೇಶ್ವರದಿಂದ ಬೈಕ್‌ನಲ್ಲಿ ತೆರಳುತ್ತಿದ್ದರು. ರಾತ್ರಿ ಸುಮಾರು 9 ಗಂಟೆಗೆ ಪಡನ್ನಕ್ಕಾಡ್ ತಲುಪಿದಾಗ, ರಸ್ತೆ ಬದಿಯಲ್ಲಿ ನಿಲ್ಲಿಸಲಾಗಿದ್ದ ಲಾರಿಗೆ ಬೈಕ್ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಇಬ್ಬರೂ ಗಂಭೀರವಾಗಿ ಗಾಯಗೊಂಡಿದ್ದು, ತಕ್ಷಣ ಕಾಞಂಗಾಡ್ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಇಬ್ಬರೂ ಮೃತಪಟ್ಟಿದ್ದಾರೆ. ಮೃತದೇಹಗಳನ್ನು ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದೆ. ಮೃತ ಅನುರಾಗ್ ಅವರು ನೀಲೇಶ್ವರದ ವಸಂತ್ ಹೋಟೆಲ್‌ನಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದರು.

ಆಮಿಷವೊಡ್ಡಿ ವಂಚನೆ ಯತ್ನ - ಪ್ರಕರಣ ದಾಖಲು

ಬೆಂಗಳೂರಿನ ಫೌಂಡೇಶನ್ ಒಂದರ ಹೆಸರಿನಲ್ಲಿ ದೇಣಿಗೆ ಸಂಗ್ರಹಿಸುವ ನೆಪದಲ್ಲಿ ಮಕ್ಕಳನ್ನು ಕೊಡಿಸುವುದಾಗಿ ಹೇಳಿ ಹಣ ಸಂಗ್ರಹಿಸಲು ಯತ್ನಿಸಿದ ವ್ಯಕ್ತಿಯೊಬ್ಬನ ವಿರುದ್ಧ ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪುತ್ತೂರು ತಾಲೂಕಿನ ಕೊಡಿಂಬಾಡಿ ಗ್ರಾಮದ ಶಾಂತಿನಗರದಲ್ಲಿ ಈ ಘಟನೆ ನಡೆದಿದೆ. ಅಪರಿಚಿತ ವ್ಯಕ್ತಿಯೊಬ್ಬ ಮನೆಗೆ ಭೇಟಿ ನೀಡಿ, ಬೆಂಗಳೂರಿನ ಫೌಂಡೇಶನ್ ಹೆಸರಿನಲ್ಲಿ ದೇಣಿಗೆ ಕೇಳುತ್ತಾ ಮಕ್ಕಳನ್ನು ಕೊಡಿಸುವುದಾಗಿ ಹೇಳಿ ಹಣ ಸಂಗ್ರಹಿಸಲು ಮುಂದಾಗಿದ್ದಾನೆ ಎನ್ನಲಾಗಿದೆ. ಈ ಬಗ್ಗೆ ಸ್ಥಳೀಯರು ತಕ್ಷಣ 112 ತುರ್ತು ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಕರ್ತವ್ಯದಲ್ಲಿದ್ದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಆ ವ್ಯಕ್ತಿಯನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಿದ್ದಾರೆ. ವಿಚಾರಣೆ ವೇಳೆ ಆತ ಹಾಸನ ಜಿಲ್ಲೆಯ ಬೇಲೂರು ನಿವಾಸಿ 24 ವರ್ಷ ಪ್ರಾಯದ ಗಣೇಶ್ ಎಂದು ತಿಳಿದುಬಂದಿದೆ. ಘಟನೆ ಕುರಿತು ದೂರುದಾರರು ದೂರು ನೀಡಲು ನಿರಾಕರಿಸಿದ ಹಿನ್ನೆಲೆಯಲ್ಲಿ, ಗಣೇಶ್ ವಿರುದ್ಧ ಕರ್ನಾಟಕ ಪೊಲೀಸ್ ಕಾಯ್ದೆ 1965ರ ಕಲಂ 92ರ ಅಡಿಯಲ್ಲಿ ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಜಪ್ಪಿನಮೊಗರು ಅಪಘಾತ - ಚಾಲಕನ ವಿರುದ್ಧ ಕ್ರಮ

ಪಾದಚಾರಿಗೆ ಡಿಕ್ಕಿ ಹೊಡೆದು ನಿಲ್ಲಿಸದೆ ಪರಾರಿಯಾಗಿದ್ದ ಖಾಸಗಿ ಬಸ್ಸೊಂದನ್ನು ಮಂಗಳೂರು ಸಂಚಾರ ದಕ್ಷಿಣ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದು, ಬಸ್ ಚಾಲಕನ ವಿರುದ್ಧ ಕ್ರಮ ಕೈಗೊಂಡಿದ್ದಾರೆ. 2026ರ ಅಕ್ಟೋಬರ್ 22ರಂದು ರಾತ್ರಿ ಸುಮಾರು 7.50ರ ವೇಳೆಗೆ ಜಪ್ಪಿನಮೊಗರು ಎ.ಕೆ. ಲಾಡ್ಜ್ ಎದುರು ರಾಷ್ಟ್ರೀಯ ಹೆದ್ದಾರಿ-66ರ ಮಹಾಕಾಳಿಪಡ್ಪು ಕಡೆಗೆ ಸಾಗುವ ರಸ್ತೆಯ ಬದಿಯಲ್ಲಿ ಸುಮಾರು 30ರಿಂದ 35 ವರ್ಷ ವಯಸ್ಸಿನ ಅಪರಿಚಿತ ಯುವಕನೊಬ್ಬ ನಡೆದುಕೊಂಡು ಹೋಗುತ್ತಿದ್ದಾಗ, ಐಂ-19-ಂಂ-8499 ನೋಂದಣಿ ಸಂಖ್ಯೆಯ ಬಸ್ ಡಿಕ್ಕಿ ಹೊಡೆದಿತ್ತು. ಅಪಘಾತದ ಬಳಿಕ ಬಸ್ ನಿಲ್ಲಿಸದೆ ಚಾಲಕ ಸ್ಥಳದಿಂದ ಪರಾರಿಯಾಗಿದ್ದನು. ಡಿಕ್ಕಿಯ ರಭಸಕ್ಕೆ ರಸ್ತೆಯ ಬದಿಗೆ ಬಿದ್ದ ಯುವಕನ ತಲೆಗೆ ಗಂಭೀರ ಗಾಯವಾಗಿತ್ತು. ಸ್ಥಳೀಯರು ತಕ್ಷಣ ಗಾಯಾಳುವನ್ನು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಿದ್ದು, ಪರೀಕ್ಷಿಸಿದ ವೈದ್ಯರು ಆತ ಮೃತಪಟ್ಟಿರುವುದಾಗಿ ದೃಢಪಡಿಸಿದ್ದರು. ಈ ಕುರಿತು ಮಂಗಳೂರು ಸಂಚಾರ ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿತ್ತು. ತನಿಖೆಯ ಭಾಗವಾಗಿ ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ, 42ನೇ ರೂಟ್‌ನಲ್ಲಿ ಸಂಚರಿಸುವ 'ಶ್ರೀ ಕಟೀಲ್' ಹೆಸರಿನ ಬಸ್ಸು ಅಪಘಾತಕ್ಕೆ ಕಾರಣವಾಗಿರುವುದು ಪತ್ತೆಯಾಗಿದೆ. ಬಳಿಕ ಪೊಲೀಸರು ಬಸ್ಸನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಪ್ರಾಥಮಿಕ ತನಿಖೆಯ ಪ್ರಕಾರ, ಕಾಸರಗೋಡು ನಿವಾಸಿ 40 ವರ್ಷ ಪ್ರಾಯದ ಸುಧೀರ್ ಕೆ. ಬಸ್ಸು ಚಲಾಯಿಸುತ್ತಿದ್ದನು ಎಂಬುದು ತಿಳಿದುಬಂದಿದೆ. ಆತನ ಚಾಲನಾ ಪರವಾನಗಿ ಚಾಲ್ತಿಯಲ್ಲಿರುವುದೂ ದೃಢಪಟ್ಟಿದೆ. ಪ್ರಕರಣದ ಸಮಗ್ರ ತನಿಖೆ ಮುಂದುವರಿದಿದ್ದು, ಬಸ್ ಚಾಲಕ ಹಾಗೂ ಪ್ರಯಾಣಿಕರ ಮೊಬೈಲ್ ಲೊಕೇಶನ್ ವಿವರಗಳು, ಪ್ರಯಾಣಿಕರ ಹೇಳಿಕೆಗಳು ಸೇರಿದಂತೆ ಇತರ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಮಂಗಳೂರು ನಗರ ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ರಾಕೇಶ್ ಕೊಲೆ ಪ್ರಕರಣ - ಜೀವಾವಧಿ ಶಿಕ್ಷೆ

ಪ್ರೀತಿಯ ವಿಚಾರದಲ್ಲಿ ಉಂಟಾದ ದ್ವೇಷದ ಹಿನ್ನೆಲೆಯಲ್ಲಿ ಯುವಕನನ್ನು ತಲವಾರಿನಿಂದ ಕೊಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳೂರಿನ 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಮೂವರು ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದು, ನಾಲ್ವರು ಆರೋಪಿಗಳನ್ನು ದೋಷಿಗಳೆಂದು ಘೋಷಿಸಿದೆ. 2019ರ ಜನವರಿ 3ರಂದು ಪಂಜಿಮೊಗರು ಮಾಲಾಡಿ ರಸ್ತೆಯ ಎಂ.ವಿ. ಶೆಟ್ಟಿ ಕಾಲೇಜು ಸಮೀಪ ಈ ಕೊಲೆ ನಡೆದಿತ್ತು. ಪ್ರಕರಣದ ಮೊದಲ ಆರೋಪಿ ಸುನಿಲ್ ಕುಮಾರ್ ಅಲಿಯಾಸ್ ಕೌಟಿ ಅವರ ತಂಗಿಯನ್ನು ರಾಕೇಶ್ ಪ್ರೀತಿಸುತ್ತಿದ್ದ ಎಂಬ ಕಾರಣಕ್ಕೆ ಸುನಿಲ್ ಕುಮಾರ್ ಸೇರಿದಂತೆ ನಾಲ್ವರು ಆರೋಪಿಗಳು ಸೇರಿ ರಾಕೇಶ್‌ನನ್ನು ತಲವಾರಿನಿಂದ ಕಡಿದು ಕೊಲೆ ಮಾಡಿದ್ದರು. ಈ ಸಂಬಂಧ ಕಾವೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ಪೊಲೀಸ್ ನಿರೀಕ್ಷಕ ಕೆ.ಆರ್. ನಾಯ್ಕ್ ಅವರು ತನಿಖೆ ನಡೆಸಿ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರಾಜೇಶ್ ಮಾರುತಿ ಕಮಟೆ ಅವರು ನಾಲ್ವರು ಆರೋಪಿಗಳನ್ನು ದೋಷಿಗಳೆಂದು ಘೋಷಿಸಿ ತೀರ್ಪು ನೀಡಿದ್ದಾರೆ.

ಶಿಕ್ಷೆಯ ವಿವರ: ಮೊದಲನೇ ಆರೋಪಿ ಸುನಿಲ್ ಕುಮಾರ್ ಅಲಿಯಾಸ್ ಕೌಟಿ, ಎರಡನೇ ಆರೋಪಿ ಪ್ರವೀಣ್ ಪೂಜಾರಿ ಅಲಿಯಾಸ್ ಚೋಟು ಹಾಗೂ ಮೂರನೇ ಆರೋಪಿ ಪ್ರೀತಮ್ ಅಲಿಯಾಸ್ ಅಭಿಗೆ ಕೊಲೆ ಮತ್ತು ಸಂಚು ರೂಪಿಸಿದ ಅಪರಾಧಕ್ಕಾಗಿ ಜೀವಾವಧಿ ಶಿಕ್ಷೆ ಹಾಗೂ ತಲಾ 15 ಸಾವಿರ ರೂ. ದಂಡ ವಿಧಿಸಲಾಗಿದೆ. ನಾಲ್ವರು ಆರೋಪಿಗಳಿಗೂ ಸಾಕ್ಷ್ಯ ನಾಶಪಡಿಸಿದ ಅಪರಾಧಕ್ಕಾಗಿ ತಲಾ 3 ವರ್ಷಗಳ ಜೈಲು ಶಿಕ್ಷೆ ಹಾಗೂ 5 ಸಾವಿರ ರೂ. ದಂಡ ವಿಧಿಸಲಾಗಿದೆ. ನಾಲ್ಕನೇ ಆರೋಪಿ ರೋಹಿತ್ ಕುಮಾರ್ ಅಲಿಯಾಸ್ ಶೂಟರ್‌ಗೆ ಅಪರಾಧಿಗೆ ಆಶ್ರಯ ನೀಡಿದ ಅಪರಾಧಕ್ಕಾಗಿ ಹೆಚ್ಚುವರಿಯಾಗಿ 3 ವರ್ಷಗಳ ಜೈಲು ಶಿಕ್ಷೆ ಹಾಗೂ 5 ಸಾವಿರ ರೂ. ದಂಡ ವಿಧಿಸಲಾಗಿದೆ. ಒಟ್ಟು 70 ಸಾವಿರ ರೂ. ದಂಡದ ಪೈಕಿ 20 ಸಾವಿರ ರೂ. ಸರಕಾರಕ್ಕೆ ಹಾಗೂ 50 ಸಾವಿರ ರೂ. ಮೃತ ರಾಕೇಶ್ ಅವರ ತಂದೆಗೆ ನೀಡುವಂತೆ ನ್ಯಾಯಾಲಯ ಆದೇಶಿಸಿದೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಮೋತೀಲಾಲ್ ಚೌದರಿ ವಾದ ಮಂಡಿಸಿದ್ದರು.

ಐದು ವರ್ಷಗಳಿಂದ ತಲೆಮರೆಸಿಕೊಂಡಿದ್ದ ಕಳ್ಳತನದ ಆರೋಪಿ ಬಂಧನಕ್ಕೆ

ಕಡಬ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ನಾಲ್ಕು ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಳೆದ ಐದು ವರ್ಷಗಳಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಮಹಾರಾಷ್ಟ್ರ ಮೂಲದ ಆರೋಪಿ 30 ವರ್ಷ ಪ್ರಾಯದ ವಿಶಾಲ್ ಪೊಂಕೆ ಕೊನೆಗೂ ನ್ಯಾಯಾಲಯಕ್ಕೆ ಹಾಜರಾಗಿದ್ದು, ನ್ಯಾಯಾಲಯವು ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಕಡಬ ಪೊಲೀಸ್ ಠಾಣೆಯಲ್ಲಿ 2016ರಲ್ಲಿ ಭಾರತೀಯ ದಂಡ ಸಂಹಿತೆಯ ಕಲಂ 457 ಮತ್ತು 380ರ ಅಡಿಯಲ್ಲಿ ನಾಲ್ಕು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು. ಈ ಪ್ರಕರಣಗಳಲ್ಲಿ ದೊಡ್ಡಬಳ್ಳಾಪುರದ ನರಸಿಂಹ ಅಲಿಯಾಸ್ ರಾಜು, ಮಹಾರಾಷ್ಟ್ರದ ವಿಜಯ್ ಸುರೇಶ ಪೊಂಕೆ, ನವೀನ್ ಚಂದ್ರ ಸಿಂಗ್, ಉತ್ತರ ಕನ್ನಡದ ಚಂದ್ರಕಾಂತ್ ಪೂಜಾರಿ ಹಾಗೂ ಮಂಡ್ಯದ ಪ್ರಕಾಶ್ ಬಹದ್ದೂರ್ ಆರೋಪಿಗಳಾಗಿದ್ದರು. ಇವರಿಗೆ ಈಗಾಗಲೇ ಪುತ್ತೂರಿನ ಮಾನ್ಯ ACJ ಮತ್ತು JMFC ನ್ಯಾಯಾಲಯವು ಎರಡು ವರ್ಷಗಳ ಶಿಕ್ಷೆ ವಿಧಿಸಿತ್ತು. ಇದೇ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಮಹಾರಾಷ್ಟ್ರ ಮೂಲದ ವಿಶಾಲ್ ಪೊಂಕೆ ಕಳೆದ ಐದು ವರ್ಷಗಳಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ಆತನ ಪತ್ತೆಗಾಗಿ ಪೊಲೀಸರು ಪ್ರಯತ್ನ ನಡೆಸಿದ್ದು, ನ್ಯಾಯಾಲಯದಿಂದ ಆತನ ವಿರುದ್ಧ ಪ್ರೊಕ್ಲಮೇಶನ್ (ಹಾಜರಾಗುವಂತೆ ಪ್ರಕಟಣೆ) ಹೊರಡಿಸಲಾಗಿತ್ತು. ಅಂತಿಮವಾಗಿ ವಿಶಾಲ್ ಪೊಂಕೆ ನ್ಯಾಯಾಲಯಕ್ಕೆ ಹಾಜರಾಗಿದ್ದು, ಪುತ್ತೂರಿನ 2ನೇ ACJ ಮತ್ತು JMFC ನ್ಯಾಯಾಲಯ (ಸಂಚಾರಿ ನ್ಯಾಯಾಲಯ, ಕಡಬ) ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ವಿಶಾಲ್ ಪೊಂಕೆ ವಿರುದ್ಧ ಕಡಬ ಪೊಲೀಸ್ ಠಾಣೆಯಲ್ಲಿ MOB ತೆರೆಯಲಾಗಿತ್ತು. ಅಲ್ಲದೆ, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿಯೂ ಆತನ ವಿರುದ್ಧ 2016ರಲ್ಲಿ ಕಲಂ 457 ಮತ್ತು 380ರ ಅಡಿಯಲ್ಲಿ ಮತ್ತೊಂದು ಪ್ರಕರಣ ದಾಖಲಾಗಿದ್ದು, ವಿಚಾರಣೆಯಲ್ಲಿದೆ.

22 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿ ಬಂಧನ

ಸುಮಾರು 22 ವರ್ಷಗಳಿಂದ ಬಾಕಿ ಉಳಿದಿದ್ದ ಅಬಕಾರಿ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ದೀರ್ಘಕಾಲದಿಂದ ತಲೆಮರೆಸಿಕೊಂಡಿದ್ದ ಆರೋಪಿಯೊಬ್ಬರು ನ್ಯಾಯಾಲಯಕ್ಕೆ ಶರಣಾಗಿದ್ದು, ಅವರಿಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಉಳ್ಳಾಲದ ಹೆಬ್ಬಾರ್ ಗುತ್ತು ನಿವಾಸಿ ಜಾರ್ಜ್ ರಾಕೇಶ್ ಡಿಸೋಜ ವಿರುದ್ಧ 2004ರಲ್ಲಿ ಅಬಕಾರಿ ಪ್ರಕರಣ ದಾಖಲಾಗಿತ್ತು. ಬಳಿಕ ಹಲವು ವರ್ಷಗಳಿಂದ ಅವರು ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದರು. ಬಾಕಿ ಉಳಿದಿರುವ ಎಲ್‌ಪಿಸಿ (LPC) ಪ್ರಕರಣಗಳ ಆರೋಪಿಗಳನ್ನು ಪತ್ತೆಹಚ್ಚುವ ವಿಶೇಷ ಕಾರ್ಯಾಚರಣೆಯನ್ನು ಮಂಗಳೂರು ದಕ್ಷಿಣ ವಲಯ-2ರ ಅಬಕಾರಿ ನಿರೀಕ್ಷಕ ಮಿಲ್ಲರ್ ಡಿಸೋಜ ಅವರ ನೇತೃತ್ವದಲ್ಲಿ ಕೈಗೊಳ್ಳಲಾಗಿತ್ತು. ಉಪನಿರೀಕ್ಷಕ ಜಯಪ್ಪ ಲಮಾಣಿ ಹಾಗೂ ಸಿಬ್ಬಂದಿಗಳಾದ ಮಂಜಪ್ಪ ಮತ್ತು ಆನಂದ ಸತೀಶ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಅಬಕಾರಿ ಇಲಾಖೆಯ ಕಾರ್ಯಾಚರಣೆಯ ಹಿನ್ನೆಲೆಯಲ್ಲಿ ಆರೋಪಿ ಅಕ್ಟೋಬರ್ 29ರಂದು ನ್ಯಾಯಾಲಯಕ್ಕೆ ಶರಣಾಗಿದ್ದರು. ಈ ವೇಳೆ ಅವರ ಪರ ವಕೀಲರು ಮಧ್ಯಂತರ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಆದರೆ ಪ್ರಕರಣದ ಗಂಭೀರತೆ ಹಾಗೂ ಆರೋಪಿ ದೀರ್ಘಕಾಲ ನ್ಯಾಯಾಲಯಕ್ಕೆ ಹಾಜರಾಗದೆ ಇದ್ದುದನ್ನು ಪರಿಗಣಿಸಿದ ನ್ಯಾಯಾಧೀಶರು ಜಾಮೀನು ಅರ್ಜಿಯನ್ನು ವಜಾಗೊಳಿಸಿ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಆದೇಶಿಸಿದ್ದಾರೆ. ಇನ್ನೂ ಹಲವು ಬಾಕಿ ಎಲ್‌ಪಿಸಿ ಪ್ರಕರಣಗಳ ಆರೋಪಿಗಳನ್ನು ಪತ್ತೆಹಚ್ಚುವ ಕಾರ್ಯ ಮುಂದುವರಿದಿದ್ದು, ಸಂಬಂಧಪಟ್ಟ ಆರೋಪಿಗಳನ್ನು ಶೀಘ್ರದಲ್ಲೇ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಮಂಗಳೂರು ದಕ್ಷಿಣ ವಲಯ-2ರ ಅಬಕಾರಿ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಡ್ರಗ್ಸ್ ಪೂರೈಕೆ ಆರೋಪ - ಮಹಿಳೆ ಸೆರೆ

ಮಂಗಳೂರು ನಗರದಲ್ಲಿ ಯುವಕರು ಹಾಗೂ ವಿದ್ಯಾರ್ಥಿಗಳಿಗೆ ಮಾದಕ ವಸ್ತು ಪೂರೈಕೆ ಮಾಡುತ್ತಿದ್ದ ಆರೋಪದ ಮೇಲೆ 42 ವರ್ಷದ ಮಹಿಳೆಯೊಬ್ಬರನ್ನು ಮಂಗಳೂರು ಉತ್ತರ ಪೊಲೀಸರು ಬಂಧಿಸಿದ್ದಾರೆ. ಆರೋಪಿತೆಯ ವಾಸ್ತವ್ಯದ ಫ್ಲ್ಯಾಟ್ ಮೇಲೆ ದಾಳಿ ನಡೆಸಿದ ಪೊಲೀಸರು ಬರೋಬ್ಬರಿ 15.30 ಲಕ್ಷ ಮೌಲ್ಯದ 153 ಗ್ರಾಂ MDMA ಮಾದಕ ವಸ್ತುವನ್ನು ವಶಪಡಿಸಿಕೊಂಡಿದ್ದಾರೆ. ಬಂಧಿತೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಲಾಯಿಲದ ಗುರಿಂಗಾನ ಮನೆ ನಿವಾಸಿ 42 ವರ್ಷ ಪ್ರಾಯದ ನಸೀಮಾ ಅಲಿಯಾಸ್ ನಸೀಮ ಎಂದು ಗುರುತಿಸಲಾಗಿದೆ.

ಪಂಪ್‌ವೆಲ್‌ನ ಅಪಾರ್ಟ್‌ಮೆಂಟ್‌ನಲ್ಲಿ ಶೋಧ: ನವೆಂಬರ್ 1ರಂದು ಮಂಗಳೂರು ಉತ್ತರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಮಾದಕ ವಸ್ತು ಸೇವನೆ ಪ್ರಕರಣದ ತನಿಖೆ ಸಂದರ್ಭದಲ್ಲಿ, ಆರೋಪಿತರಿಗೆ ಮಾದಕ ವಸ್ತು ಪೂರೈಸುತ್ತಿದ್ದ ನಸೀಮಾ ಬಗ್ಗೆ ಪೊಲೀಸರಿಗೆ ಮಾಹಿತಿ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ಮಾದಕ ವಸ್ತು ಪೂರೈಕೆಯ ಜಾಲದ ಬಗ್ಗೆ ಪೊಲೀಸರು ತನಿಖೆ ಕೈಗೊಂಡಿದ್ದರು. ತನಿಖೆಯ ಆಧಾರದಲ್ಲಿ ಪಂಪ್‌ವೆಲ್‌ನ ಉಜ್ಜೋಡಿ ಸಮೀಪದ ರಾಧಾ ರೆಸಿಡೆನ್ಸಿ ಅಪಾರ್ಟ್‌ಮೆಂಟ್‌ನ ಮೊದಲ ಮಹಡಿಯಲ್ಲಿರುವ ಫ್ಲ್ಯಾಟ್ ಸಂಖ್ಯೆ 103ಕ್ಕೆ ಪೊಲೀಸರು ದಾಳಿ ನಡೆಸಿ ಶೋಧ ಕಾರ್ಯಾಚರಣೆ ನಡೆಸಿದರು. ಈ ವೇಳೆ ಸುಮಾರು 15,30,000 ಮೌಲ್ಯದ 153 ಗ್ರಾಂ MDMAಮಾದಕ ವಸ್ತುವನ್ನು ವಶಪಡಿಸಿಕೊಳ್ಳಲಾಗಿದೆ.

ಯುವಕರು ಮತ್ತು ವಿದ್ಯಾರ್ಥಿಗಳಿಗೆ ಮಾದಕ ವಸ್ತು ಪೂರೈಕೆ ಆರೋಪ: ಪೊಲೀಸರ ಪ್ರಾಥಮಿಕ ವಿಚಾರಣೆಯ ವೇಳೆ ಆರೋಪಿತೆಯು ಮಂಗಳೂರು ನಗರದ ವಿವಿಧ ಭಾಗಗಳಲ್ಲಿ ಯುವಕರು ಹಾಗೂ ವಿದ್ಯಾರ್ಥಿಗಳಿಗೆ ಮಾದಕ ವಸ್ತು ಮಾರಾಟ ಮಾಡುತ್ತಿದ್ದಳೆಂಬ ಮಾಹಿತಿ ತಿಳಿದುಬಂದಿದೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

ಬಂಧಿತೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ನ್ಯಾಯಾಂಗ ಬಂಧನ ವಿಧಿಸಿ ಆದೇಶಿಸಿದೆ.

ಪೂರೈಕೆ ಜಾಲದ ಇತರ ಆರೋಪಿಗಳಿಗಾಗಿ ಶೋಧ: ಈ ಪ್ರಕರಣದಲ್ಲಿ ಇನ್ನೂ ಕೆಲವರು ಭಾಗಿಯಾಗಿರುವ ಶಂಕೆಯಿದ್ದು, ಅವರ ಬಂಧನ ಬಾಕಿಯಿದೆ. ಮಾದಕ ವಸ್ತು ಪೂರೈಕೆಯ ಜಾಲದ ಇತರ ಸಂಪರ್ಕಗಳ ಪತ್ತೆಗಾಗಿ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಮಂಗಳೂರು ಉತ್ತರ ಪೊಲೀಸ್ ಠಾಣೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಆರೋಪಿತೆಯ ಬಂಧನ ಮತ್ತು ಮಾದಕ ವಸ್ತುಗಳ ಪತ್ತೆ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ನಗರದಲ್ಲಿ ಯುವಜನತೆ ಹಾಗೂ ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು ನಡೆಯುತ್ತಿರುವ ಮಾದಕ ವಸ್ತು ಪೂರೈಕೆಯ ಜಾಲದ ವಿರುದ್ಧ ಪೊಲೀಸ್ ಇಲಾಖೆ ತನಿಖೆ ಚುರುಕುಗೊಳಿಸಿದೆ.

ತಲೆಸ್ನಾನ ಪ್ರತಿದಿನ ಮಾಡಬೇಕೇ? ಕೂದಲಿನ ಆರೋಗ್ಯಕ್ಕೆ ಯಾವುದು ಉತ್ತಮ?



ಆರೋಗ್ಯಕರ ಕೂದಲು, ಸ್ವಚ್ಛವಾದ ನೆತ್ತಿ ಮತ್ತು ಆಕರ್ಷಕ ನೋಟವನ್ನು ಕಾಪಾಡಿಕೊಳ್ಳಲು ಕೂದಲಿನ ಆರೈಕೆ ಅತ್ಯಂತ ಮುಖ್ಯ. ಕೆಲವರು ಪ್ರತಿದಿನ ತಲೆಗೆ ಸ್ನಾನ ಮಾಡಿದರೆ ಮಾತ್ರ ಕೂದಲು ಸ್ವಚ್ಛವಾಗಿರುತ್ತದೆ ಎಂದು ಭಾವಿಸಿದರೆ, ಇನ್ನು ಕೆಲವರು ವಾರಕ್ಕೆ ಎರಡು ಅಥವಾ ಮೂರು ಬಾರಿ ತಲೆಸ್ನಾನ ಮಾಡಿದರೆ ಸಾಕು ಎನ್ನುತ್ತಾರೆ. ಹಾಗಾದರೆ ನಿಜವಾಗಿಯೂ ತಲೆಗೆ ಎಷ್ಟು ದಿನಕ್ಕೊಮ್ಮೆ ಸ್ನಾನ ಮಾಡಬೇಕು? ಪ್ರತಿದಿನ ಶಾಂಪು ಬಳಸುವುದರಿಂದ ಕೂದಲಿಗೆ ಹಾನಿಯಾಗುತ್ತದೆಯೇ?

ಆಯುರ್ವೇದದಲ್ಲಿ ತಲೆಸ್ನಾನ ಮತ್ತು ಕೂದಲಿನ ಆರೈಕೆಗೆ ಸಂಬಂಧಿಸಿದ ಕೆಲವು ಸಂಪ್ರದಾಯಬದ್ಧ ಸಲಹೆಗಳಿವೆ. ಆದರೆ ಆಧುನಿಕ ವೈದ್ಯಕೀಯ ದೃಷ್ಟಿಕೋನದ ಪ್ರಕಾರ ಎಲ್ಲರಿಗೂ ಒಂದೇ ರೀತಿಯ ನಿಯಮ ಅನ್ವಯಿಸುವುದಿಲ್ಲ. ವ್ಯಕ್ತಿಯ ಕೂದಲಿನ ಸ್ವಭಾವ, ನೆತ್ತಿಯ ಸ್ಥಿತಿ, ವಯಸ್ಸು, ಹವಾಮಾನ ಮತ್ತು ದೈನಂದಿನ ಚಟುವಟಿಕೆಗಳನ್ನು ಅವಲಂಬಿಸಿ ತಲೆಸ್ನಾನದ ಅವಧಿ ನಿರ್ಧಾರವಾಗುತ್ತದೆ.

ಆಯುರ್ವೇದದ ಪ್ರಕಾರ ತಲೆಸ್ನಾನದ ಮಹತ್ವ:

ಆಯುರ್ವೇದದಲ್ಲಿ ದೇಹದ ಸ್ವಚ್ಛತೆ ಮತ್ತು ಆರೋಗ್ಯದ ಕಾಳಜಿಗೆ ವಿಶೇಷ ಮಹತ್ವ ನೀಡಲಾಗಿದೆ. ತಲೆ ಮತ್ತು ಕೂದಲಿನ ಆರೈಕೆಯಲ್ಲಿಯೂ ಸೂಕ್ತ ಎಣ್ಣೆ ಹಚ್ಚುವುದು, ಮೃದುವಾಗಿ ಮಸಾಜ್ ಮಾಡುವುದು ಮತ್ತು ಸ್ವಚ್ಛವಾಗಿಟ್ಟುಕೊಳ್ಳುವಂತಹ ಕ್ರಮಗಳನ್ನು ಉಲ್ಲೇಖಿಸಲಾಗಿದೆ. ಕೆಲವು ಸಾಂಪ್ರದಾಯಿಕ ಆಯುರ್ವೇದ ಪದ್ಧತಿಗಳಲ್ಲಿ ವಾರಕ್ಕೆ ಎರಡು ಅಥವಾ ಮೂರು ಬಾರಿ ತಲೆಸ್ನಾನ ಮಾಡುವುದನ್ನು ಸೂಕ್ತವೆಂದು ಪರಿಗಣಿಸಲಾಗುತ್ತದೆ. ಆದರೆ ಇದು ಎಲ್ಲರಿಗೂ ಕಡ್ಡಾಯವಾದ ನಿಯಮವಲ್ಲ. ಆಯುರ್ವೇದದಲ್ಲಿಯೂ ವ್ಯಕ್ತಿಯ ಪ್ರಕೃತಿ, ಋತುಮಾನ ಮತ್ತು ಆರೋಗ್ಯದ ಸ್ಥಿತಿಗೆ ಅನುಗುಣವಾಗಿ ಆರೈಕೆಯ ವಿಧಾನ ಬದಲಾಗಬಹುದು.

ಪ್ರತಿದಿನ ತಲೆಸ್ನಾನ'ಮಾಡಿದರೆ ಕೂದಲು ಉದುರುತ್ತದೆಯೇ?

ಪ್ರತಿದಿನ ತಲೆಗೆ ನೀರು ಹಾಕುವುದರಿಂದಲೇ ಕೂದಲು ಉದುರುತ್ತದೆ ಎಂಬುದಕ್ಕೆ ವೈಜ್ಞಾನಿಕ ಆಧಾರವಿಲ್ಲ. ಆದರೆ ಪ್ರತಿದಿನ ಕಠಿಣವಾದ ಶಾಂಪುಗಳನ್ನು ಬಳಸುವುದು, ಅತಿಯಾಗಿ ಬಿಸಿನೀರು ಹಾಕುವುದು ಅಥವಾ ಕೂದಲನ್ನು ಬಲವಾಗಿ ಉಜ್ಜುವುದು ಕೆಲವು ಸಂದರ್ಭಗಳಲ್ಲಿ ಕೂದಲನ್ನು ಒಣಗಿಸಿ ಹಾನಿಗೊಳಿಸಬಹುದು. ಕೂದಲಿನ ನೆತ್ತಿಯಲ್ಲಿ ನೈಸರ್ಗಿಕವಾಗಿ ಉತ್ಪತ್ತಿಯಾಗುವ ಎಣ್ಣೆಯಂಶ ಕೂದಲಿಗೆ ತೇವಾಂಶ ಮತ್ತು ರಕ್ಷಣೆ ನೀಡುತ್ತದೆ. ಅತಿಯಾಗಿ ಶುದ್ಧೀಕರಿಸುವ ಉತ್ಪನ್ನಗಳನ್ನು ಬಳಸಿದರೆ ಈ ಎಣ್ಣೆಯಂಶ ಕಡಿಮೆಯಾಗಿ ಕೂದಲು ಒರಟಾಗಬಹುದು. ವಿಶೇಷವಾಗಿ ಒಣ ಕೂದಲಿರುವವರು ಮೃದುವಾದ ಶಾಂಪುಗಳನ್ನು ಆಯ್ಕೆ ಮಾಡುವುದು ಉತ್ತಮ.

ಕೂದಲಿನ ಸ್ವಭಾವಕ್ಕೆ ಅನುಗುಣವಾಗಿ ಎಷ್ಟು ಬಾರಿ ತಲೆಸ್ನಾನ ಮಾಡಬೇಕು?

ಎಣ್ಣೆಯುಕ್ತ ನೆತ್ತಿಯವರು: ನೆತ್ತಿಯಲ್ಲಿ ಬೇಗನೆ ಎಣ್ಣೆಯಂಶ ಹೆಚ್ಚಾಗುವವರು ಅಗತ್ಯಕ್ಕೆ ಅನುಗುಣವಾಗಿ ಪ್ರತಿದಿನ ಅಥವಾ ಒಂದು ದಿನ ಬಿಟ್ಟು ಒಂದು ದಿನ ಕೂದಲನ್ನು ತೊಳೆಯಬಹುದು. ಮೃದುವಾದ ಶಾಂಪು ಬಳಸುವುದು ಉತ್ತಮ.

ಒಣ ಕೂದಲಿರುವವರು: ಕೂದಲು ಒಣಗುವ ಅಥವಾ ಸುಲಭವಾಗಿ ಮುರಿಯುವ ಸ್ವಭಾವವಿದ್ದರೆ ಪ್ರತಿದಿನ ಶಾಂಪು ಬಳಸುವ ಅಗತ್ಯವಿಲ್ಲ. ವಾರಕ್ಕೆ ಎರಡು ಅಥವಾ ಮೂರು ಬಾರಿ ತೊಳೆಯುವುದು ಕೆಲವರಿಗೆ ಅನುಕೂಲಕರವಾಗಿರಬಹುದು.

ಸಾಮಾನ್ಯ ಕೂದಲಿರುವವರು: ನೆತ್ತಿಯಲ್ಲಿ ಹೆಚ್ಚು ಎಣ್ಣೆಯಂಶ ಅಥವಾ ಒಣತನ ಇಲ್ಲದವರು ತಮ್ಮ ಅನುಕೂಲಕ್ಕೆ ತಕ್ಕಂತೆ ಎರಡು ಅಥವಾ ಮೂರು ದಿನಗಳಿಗೊಮ್ಮೆ ತಲೆಸ್ನಾನ ಮಾಡಬಹುದು.

ವ್ಯಾಯಾಮ ಮಾಡುವವರು ಮತ್ತು ಹೆಚ್ಚು ಬೆವರುವವರು: ಹೆಚ್ಚು ಬೆವರುವಿಕೆ, ಧೂಳು ಅಥವಾ ಕೊಳಕು ತಲೆಯ ಮೇಲೆ ಸಂಗ್ರಹವಾದರೆ ಅಗತ್ಯಕ್ಕೆ ತಕ್ಕಂತೆ ಕೂದಲನ್ನು ತೊಳೆಯಬೇಕು. ಕೇವಲ ದಿನಗಳ ಲೆಕ್ಕಕ್ಕೆ ಸೀಮಿತವಾಗಬಾರದು.

ತಲೆಸ್ನಾನದ ಸರಿಯಾದ ವಿಧಾನ ಯಾವುದು?

ಅತಿಯಾಗಿ ಬಿಸಿನೀರು ಬಳಸಬೇಡಿ: ತುಂಬಾ ಬಿಸಿಯಾದ ನೀರು ಕೂದಲು ಮತ್ತು ನೆತ್ತಿಯ ನೈಸರ್ಗಿಕ ತೇವಾಂಶವನ್ನು ಕಡಿಮೆ ಮಾಡಬಹುದು. ಆದ್ದರಿಂದ ಹಿತವಾದ ಉಗುರುಬೆಚ್ಚಗಿನ ಅಥವಾ ಸಾಮಾನ್ಯ ತಾಪಮಾನದ ನೀರನ್ನು ಬಳಸುವುದು ಉತ್ತಮ.

ಮೃದುವಾದ ಶಾಂಪು ಆಯ್ಕೆಮಾಡಿ: ನಿಮ್ಮ ಕೂದಲಿನ ಸ್ವಭಾವಕ್ಕೆ ಹೊಂದುವ ಸೌಮ್ಯವಾದ ಶಾಂಪು ಬಳಸಿ. ಪ್ರತಿದಿನ ಶಾಂಪು ಬಳಸಬೇಕಾದ ಅಗತ್ಯವಿಲ್ಲದಿದ್ದರೆ ಅನಗತ್ಯವಾಗಿ ಬಳಸಬೇಡಿ.

ಕೂದಲನ್ನು ಬಲವಾಗಿ ಉಜ್ಜಬೇಡಿ: ತಲೆಸ್ನಾನದ ವೇಳೆ ಉಗುರುಗಳಿಂದ ನೆತ್ತಿಯನ್ನು ಕೆರೆಯುವುದು ಅಥವಾ ಕೂದಲನ್ನು ಬಲವಾಗಿ ಉಜ್ಜುವುದು ಬೇಡ. ಬೆರಳ ತುದಿಗಳಿಂದ ಮೃದುವಾಗಿ ಸ್ವಚ್ಛಗೊಳಿಸಿ.

ಕಂಡೀಷನರ್ ಬಳಸಿ: ಕೂದಲಿನ ಮಧ್ಯಭಾಗದಿಂದ ತುದಿಯವರೆಗೆ ಕಂಡೀಷನರ್ ಹಚ್ಚುವುದರಿಂದ ಒಣತನ ಮತ್ತು ಸಿಕ್ಕುಗಳನ್ನು ಕಡಿಮೆ ಮಾಡಲು ಸಹಾಯವಾಗಬಹುದು. ಸಾಮಾನ್ಯವಾಗಿ ನೆತ್ತಿಗೆ ನೇರವಾಗಿ ಹಚ್ಚುವ ಅಗತ್ಯವಿಲ್ಲ.

ಒದ್ದೆ ಕೂದಲನ್ನು ಎಚ್ಚರಿಕೆಯಿಂದ ನಿರ್ವಹಿಸಿ: ಒದ್ದೆಯಾಗಿರುವಾಗ ಕೂದಲು ಸುಲಭವಾಗಿ ಮುರಿಯಬಹುದು. ಆದ್ದರಿಂದ ಟವೆಲ್‌ನಿಂದ ಬಲವಾಗಿ ಉಜ್ಜದೆ ಮೃದುವಾಗಿ ಒರೆಸಿ. ಅಗತ್ಯವಿದ್ದರೆ ಅಗಲವಾದ ಹಲ್ಲುಗಳಿರುವ ಬಾಚಣಿಗೆ ಬಳಸಿ.

ಸೀಗೆಕಾಯಿ ಮತ್ತು ನೈಸರ್ಗಿಕ ಉತ್ಪನ್ನಗಳು ಉತ್ತಮವೇ?

ಸೀಗೆಕಾಯಿ ಸೇರಿದಂತೆ ಕೆಲವು ಸಾಂಪ್ರದಾಯಿಕ ಕೂದಲು ಸ್ವಚ್ಛಗೊಳಿಸುವ ಪದಾರ್ಥಗಳನ್ನು ಜನರು ಹಿಂದಿನಿಂದಲೂ ಬಳಸುತ್ತಿದ್ದಾರೆ. ಆದರೆ ನೈಸರ್ಗಿಕ ಉತ್ಪನ್ನವೆಂದ ಮಾತ್ರಕ್ಕೆ ಅದು ಎಲ್ಲರಿಗೂ ಸುರಕ್ಷಿತ ಅಥವಾ ಸೂಕ್ತ ಎಂದು ಹೇಳಲಾಗುವುದಿಲ್ಲ. ಕೆಲವು ಉತ್ಪನ್ನಗಳು ಅಲರ್ಜಿ, ತುರಿಕೆ ಅಥವಾ ಒಣತನ ಉಂಟುಮಾಡಬಹುದು. ಆದ್ದರಿಂದ ನಿಮ್ಮ ನೆತ್ತಿಗೆ ಹೊಂದುವ ಉತ್ಪನ್ನವನ್ನೇ ಬಳಸುವುದು ಮುಖ್ಯ.

ತಲೆಸ್ನಾನದಿಂದ ಕಣ್ಣಿನ ದೃಷ್ಟಿ ಸುಧಾರಿಸುತ್ತದೆಯೇ?

ಕೆಲವು ಸಾಂಪ್ರದಾಯಿಕ ನಂಬಿಕೆಗಳಲ್ಲಿ ತಲೆಸ್ನಾನದಿಂದ ಕಣ್ಣಿನ ಆರೋಗ್ಯಕ್ಕೂ ಪ್ರಯೋಜನವಿದೆ ಎಂದು ಹೇಳಲಾಗುತ್ತದೆ. ಆದರೆ ತಲೆಗೆ ನಿರ್ದಿಷ್ಟ ಅವಧಿಯಲ್ಲಿ ಸ್ನಾನ ಮಾಡುವುದರಿಂದ ಕಣ್ಣಿನ ದೃಷ್ಟಿ ಹೆಚ್ಚುತ್ತದೆ ಎಂಬುದಕ್ಕೆ ದೃಢವಾದ ವೈಜ್ಞಾನಿಕ ಪುರಾವೆಗಳಿಲ್ಲ. ಅದೇ ರೀತಿ ತಲೆಸ್ನಾನದಿಂದಲೇ ನೆಗಡಿ, ಸೈನಸ್ ಅಥವಾ ತಲೆನೋವು ಉಂಟಾಗುತ್ತದೆ ಎಂಬುದೂ ಸರಿಯಲ್ಲ. ಇಂತಹ ಸಮಸ್ಯೆಗಳಿಗೆ ಬೇರೆ ಕಾರಣಗಳಿರಬಹುದು.

ಕೂದಲು ಉದುರುವಿಕೆ ಹೆಚ್ಚಾದರೆ ನಿರ್ಲಕ್ಷಿಸಬೇಡಿ:

ತಲೆಸ್ನಾನದ ವೇಳೆ ಕೆಲವು ಕೂದಲುಗಳು ಉದುರುವುದು ಸಹಜ. ಆದರೆ ನಿರಂತರವಾಗಿ ಹೆಚ್ಚು ಕೂದಲು ಉದುರುವುದು, ನೆತ್ತಿಯಲ್ಲಿ ತುರಿಕೆ, ಕೆಂಪಾಗುವಿಕೆ, ತಲೆಹೊಟ್ಟು ಅಥವಾ ಗಾಯಗಳು ಕಂಡುಬಂದರೆ ವೈದ್ಯರನ್ನು ಸಂಪರ್ಕಿಸುವುದು ಉತ್ತಮ. ಕೂದಲು ಉದುರುವಿಕೆಗೆ ಪೌಷ್ಟಿಕಾಂಶದ ಕೊರತೆ, ಹಾರ್ಮೋನ್ ಬದಲಾವಣೆ, ಅನುವಂಶಿಕತೆ ಮತ್ತು ಕೆಲವು ಆರೋಗ್ಯ ಸಮಸ್ಯೆಗಳು ಕಾರಣವಾಗಿರಬಹುದು.

ನೆನಪಿಡಿ: ಪ್ರತಿದಿನ ತಲೆಸ್ನಾನ ಮಾಡುವುದು ತಪ್ಪು ಎಂದೂ, ಎರಡು ಅಥವಾ ಮೂರು ದಿನಕ್ಕೊಮ್ಮೆ ಮಾತ್ರ ಸ್ನಾನ ಮಾಡಬೇಕು ಎಂದೂ ಸಾರ್ವತ್ರಿಕ ನಿಯಮವಿಲ್ಲ. ನಿಮ್ಮ ಕೂದಲಿನ ಸ್ವಭಾವ ಮತ್ತು ನೆತ್ತಿಯ ಸ್ಥಿತಿಗೆ ಅನುಗುಣವಾಗಿ ತಲೆಸ್ನಾನದ ಅವಧಿಯನ್ನು ನಿರ್ಧರಿಸಿ. ಸ್ವಚ್ಛತೆ, ಸರಿಯಾದ ಉತ್ಪನ್ನಗಳ ಬಳಕೆ ಮತ್ತು ಸಮತೋಲಿತ ಆಹಾರ ಪದ್ಧತಿಯೇ ಆರೋಗ್ಯಕರ ಕೂದಲಿನ ಆರೈಕೆಗೆ ಮುಖ್ಯ.

ಮಾತ್ರೆ ನುಂಗುವಾಗ ಎಷ್ಟು ನೀರು ಕುಡಿಯಬೇಕು ತಿಳಿಯಿರಿ



ಜ್ವರ, ಶೀತ, ಕೆಮ್ಮು, ಮಧುಮೇಹ, ರಕ್ತದೊತ್ತಡ ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳಿಗೆ ಪ್ರತಿದಿನ ಅನೇಕರು ಮಾತ್ರೆಗಳನ್ನು ಸೇವಿಸುತ್ತಾರೆ. ಆದರೆ ಔಷಧಿಯನ್ನು ಯಾವ ಸಮಯದಲ್ಲಿ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಗಮನ ಹರಿಸುವಷ್ಟು, ಅದನ್ನು ಹೇಗೆ ನುಂಗಬೇಕು ಮತ್ತು ಎಷ್ಟು ನೀರು ಕುಡಿಯಬೇಕು ಎಂಬುದರ ಬಗ್ಗೆ ಹೆಚ್ಚಿನವರು ಕಾಳಜಿ ವಹಿಸುವುದಿಲ್ಲ. ಕೆಲವರು ಒಂದೆರಡು ಗುಟುಕು ನೀರು ಕುಡಿದು ಮಾತ್ರೆ ನುಂಗಿದರೆ, ಇನ್ನು ಕೆಲವರು ನೀರಿಲ್ಲದೆಯೇ ಮಾತ್ರೆ ಸೇವಿಸುತ್ತಾರೆ. ಈ ಅಭ್ಯಾಸ ಕೆಲವು ಸಂದರ್ಭಗಳಲ್ಲಿ ಗಂಟಲು ಮತ್ತು ಅನ್ನನಾಳಕ್ಕೆ ತೊಂದರೆ ಉಂಟುಮಾಡಬಹುದು. ಹಾಗಾದರೆ ಮಾತ್ರೆ ನುಂಗುವಾಗ ಎಷ್ಟು ನೀರು ಕುಡಿಯಬೇಕು? ಔಷಧಿ ಸೇವಿಸುವಾಗ ಯಾವ ಮುನ್ನೆಚ್ಚರಿಕೆಗಳನ್ನು ಪಾಲಿಸಬೇಕು?

ಒಂದು ಲೋಟ ನೀರು ಕುಡಿಯುವುದು ಉತ್ತಮ: ಸಾಮಾನ್ಯವಾಗಿ ಮಾತ್ರೆ ಅಥವಾ ಕ್ಯಾಪ್ಸೂಲ್‌ಗಳನ್ನು ಸಾದಾ ನೀರಿನೊಂದಿಗೆ ಸೇವಿಸುವುದು ಉತ್ತಮ. ವಯಸ್ಕರು ಮಾತ್ರೆ ನುಂಗುವಾಗ ಸುಮಾರು 200ರಿಂದ 250 ಮಿಲಿಲೀಟರ್‌ಗಳಷ್ಟು ನೀರು ಕುಡಿಯುವುದು ಅನೇಕ ಸಂದರ್ಭಗಳಲ್ಲಿ ಸೂಕ್ತ. ಅಂದರೆ, ಒಂದು ಮಧ್ಯಮ ಗಾತ್ರದ ಲೋಟ ನೀರು ಕುಡಿಯಬಹುದು. ಇದು ಮಾತ್ರೆ ಅನ್ನನಾಳದ ಮೂಲಕ ಸುಲಭವಾಗಿ ಹೊಟ್ಟೆ ತಲುಪಲು ನೆರವಾಗುತ್ತದೆ. ಆದರೆ ಎಲ್ಲ ಔಷಧಿಗಳಿಗೂ ಇದೇ ಪ್ರಮಾಣ ಅನ್ವಯಿಸುವುದಿಲ್ಲ. ಕೆಲವು ಔಷಧಿಗಳನ್ನು ಆಹಾರದೊಂದಿಗೆ ಅಥವಾ ನಿರ್ದಿಷ್ಟ ಪ್ರಮಾಣದ ನೀರಿನೊಂದಿಗೆ ಸೇವಿಸಬೇಕಾಗಬಹುದು. ಇನ್ನು ಕೆಲವು ಔಷಧಿಗಳಿಗೆ ವಿಶೇಷ ಸೂಚನೆಗಳಿರುತ್ತವೆ. ಆದ್ದರಿಂದ ವೈದ್ಯರು ನೀಡಿದ ಸಲಹೆ ಮತ್ತು ಔಷಧಿಯ ಲೇಬಲ್‌ನಲ್ಲಿರುವ ನಿರ್ದೇಶನಗಳನ್ನು ಪಾಲಿಸುವುದು ಅತ್ಯಂತ ಮುಖ್ಯ.

ಕಡಿಮೆ ನೀರು ಕುಡಿದರೆ ಏನಾಗಬಹುದು?

ಅನ್ನನಾಳದಲ್ಲಿ ಮಾತ್ರೆ ಸಿಲುಕುವ ಅಪಾಯ: ಮಾತ್ರೆ ನುಂಗುವಾಗ ಸಾಕಷ್ಟು ನೀರು ಕುಡಿಯದಿದ್ದರೆ, ಅದು ಗಂಟಲು ಅಥವಾ ಅನ್ನನಾಳದಲ್ಲಿ ಸಿಲುಕಿಕೊಳ್ಳಬಹುದು. ಇದರಿಂದ ಗಂಟಲಿನಲ್ಲಿ ಏನೋ ಸಿಲುಕಿದ ಅನುಭವ, ನೋವು, ಉರಿ ಅಥವಾ ನುಂಗಲು ತೊಂದರೆ ಉಂಟಾಗಬಹುದು. ಕೆಲವು ಔಷಧಿಗಳು ಅನ್ನನಾಳದ ಒಳಪದರಕ್ಕೆ ಕಿರಿಕಿರಿ ಉಂಟುಮಾಡಿ ಉರಿಯೂತ ಅಥವಾ ಹುಣ್ಣುಗಳಿಗೆ ಕಾರಣವಾಗಬಹುದು.

ಎದೆ ಉರಿ ಮತ್ತು ನೋವು ಕಾಣಿಸಿಕೊಳ್ಳಬಹುದು: ಮಾತ್ರೆ ಅನ್ನನಾಳದಲ್ಲಿ ಹೆಚ್ಚು ಸಮಯ ಉಳಿದರೆ ಎದೆಭಾಗದಲ್ಲಿ ಉರಿ, ನೋವು ಅಥವಾ ಅಸ್ವಸ್ಥತೆ ಉಂಟಾಗಬಹುದು. ಮಾತ್ರೆ ಸೇವಿಸಿದ ಬಳಿಕ ಇಂತಹ ಲಕ್ಷಣಗಳು ಕಾಣಿಸಿಕೊಂಡರೆ ನಿರ್ಲಕ್ಷಿಸಬಾರದು. ತೀವ್ರ ಎದೆನೋವು, ಉಸಿರಾಟದ ತೊಂದರೆ ಅಥವಾ ನುಂಗಲು ಸಾಧ್ಯವಾಗದ ಸ್ಥಿತಿ ಕಂಡುಬಂದರೆ ತಕ್ಷಣ ವೈದ್ಯಕೀಯ ನೆರವು ಪಡೆಯಬೇಕು.

ಔಷಧಿ ಸರಿಯಾಗಿ ಕರಗುವುದಕ್ಕೆ ಅಡ್ಡಿಯಾಗಬಹುದು: ಮಾತ್ರೆ ಸರಿಯಾಗಿ ಅನ್ನನಾಳದ ಮೂಲಕ ಹೊಟ್ಟೆ ತಲುಪುವುದು ಔಷಧಿ ಸೇವನೆಯ ಪ್ರಮುಖ ಭಾಗವಾಗಿದೆ. ನೀರು ಕಡಿಮೆ ಕುಡಿಯುವುದರಿಂದ ಕೆಲವು ಮಾತ್ರೆಗಳು ಸರಿಯಾದ ರೀತಿಯಲ್ಲಿ ಸಾಗದೆ ತೊಂದರೆ ಉಂಟಾಗಬಹುದು. ಔಷಧಿಯ ಕರಗುವಿಕೆ ಮತ್ತು ಹೀರಿಕೊಳ್ಳುವಿಕೆಯ ಮೇಲೆ ಪರಿಣಾಮ ಬೀರುತ್ತದೆಯೇ ಎಂಬುದು ಅದರ ವಿಧ ಮತ್ತು ತಯಾರಿಕೆಯ ವಿಧಾನವನ್ನು ಅವಲಂಬಿಸಿರುತ್ತದೆ.

ಮಾತ್ರೆ ಸೇವಿಸುವ ಸರಿಯಾದ ವಿಧಾನ ಯಾವುದು?

ಸಾದಾ ನೀರಿಗೆ ಆದ್ಯತೆ ನೀಡಿ: ವೈದ್ಯರು ಅಥವಾ ಔಷಧಿಯ ಸೂಚನೆ ಬೇರೆ ರೀತಿಯಲ್ಲಿರದಿದ್ದರೆ, ಮಾತ್ರೆಗಳನ್ನು ಸಾದಾ ನೀರಿನೊಂದಿಗೆ ಸೇವಿಸಿ. ಜ್ಯೂಸ್, ಚಹಾ, ಕಾಫಿ ಅಥವಾ ಹಾಲಿನೊಂದಿಗೆ ಔಷಧಿ ತೆಗೆದುಕೊಳ್ಳುವ ಮೊದಲು ಅದರ ಬಗ್ಗೆ ಇರುವ ಸೂಚನೆಗಳನ್ನು ಪರಿಶೀಲಿಸಿ. ಕುಳಿತುಕೊಂಡು ಅಥವಾ ನಿಂತುಕೊಂಡು ಮಾತ್ರೆ ನುಂಗಿ: ಸಾಮಾನ್ಯವಾಗಿ ಮಾತ್ರೆ ಸೇವಿಸುವಾಗ ನೇರವಾಗಿ ಕುಳಿತುಕೊಳ್ಳುವುದು ಅಥವಾ ನಿಂತಿರುವುದು ಉತ್ತಮ. ಮಲಗಿಕೊಂಡೇ ಮಾತ್ರೆ ನುಂಗುವುದನ್ನು ತಪ್ಪಿಸಿ.

ಮಾತ್ರೆ ಸೇವಿಸಿದ ತಕ್ಷಣ ಮಲಗಬೇಡಿ: ಕೆಲವು ಔಷಧಿಗಳು ಅನ್ನನಾಳಕ್ಕೆ ಕಿರಿಕಿರಿ ಉಂಟುಮಾಡಬಹುದು. ಇಂತಹ ಔಷಧಿಗಳನ್ನು ತೆಗೆದುಕೊಂಡ ಬಳಿಕ ನಿರ್ದಿಷ್ಟ ಸಮಯದವರೆಗೆ ನೇರವಾಗಿರಬೇಕಾಗುತ್ತದೆ. ಔಷಧಿಯ ಸೂಚನೆಯಂತೆ ಈ ನಿಯಮವನ್ನು ಪಾಲಿಸಿ.

ಮಾತ್ರೆಯನ್ನು ಪುಡಿ ಮಾಡಬೇಡಿ: ಕೆಲವು ಮಾತ್ರೆಗಳಿಗೆ ವಿಶೇಷ ಹೊರಪದರ ಅಥವಾ ನಿಧಾನವಾಗಿ ಔಷಧಿ ಬಿಡುಗಡೆ ಮಾಡುವ ವ್ಯವಸ್ಥೆ ಇರುತ್ತದೆ. ಇಂತಹ ಮಾತ್ರೆಗಳನ್ನು ಪುಡಿ ಮಾಡುವುದು ಅಥವಾ ಕ್ಯಾಪ್ಸೂಲ್‌ಗಳನ್ನು ತೆರೆಯುವುದು ಔಷಧಿಯ ಪರಿಣಾಮವನ್ನು ಬದಲಾಯಿಸಬಹುದು. ವೈದ್ಯರು ಅಥವಾ ಔಷಧ ತಜ್ಞರ ಸಲಹೆಯಿಲ್ಲದೆ ಹೀಗೆ ಮಾಡಬೇಡಿ. ಔಷಧಿಯ ಸೂಚನೆಗಳನ್ನು ಓದಿ: ಕೆಲವು ಔಷಧಿಗಳನ್ನು ಖಾಲಿ ಹೊಟ್ಟೆಯಲ್ಲಿ, ಇನ್ನು ಕೆಲವು ಆಹಾರದೊಂದಿಗೆ ಸೇವಿಸಬೇಕಾಗುತ್ತದೆ. ಔಷಧಿಯ ಸಮಯ, ಆಹಾರದೊಂದಿಗೆ ಅದರ ಸಂಬಂಧ ಮತ್ತು ನೀರಿನ ಪ್ರಮಾಣದ ಬಗ್ಗೆ ವೈದ್ಯರು ನೀಡಿದ ಸೂಚನೆಗಳನ್ನು ತಪ್ಪದೆ ಪಾಲಿಸಿ.

ಕೆಲವು ಔಷಧಿಗಳಿಗೆ ವಿಶೇಷ ಎಚ್ಚರಿಕೆ ಅಗತ್ಯ: ಕೆಲವು ಪ್ರತಿಜೀವಕಗಳು (ಆಂಟಿಬಯೋಟಿಕ್‌ಗಳು), ಆಸ್ಟಿಯೊಪೊರೋಸಿಸ್‌ಗೆ ನೀಡುವ ಔಷಧಿಗಳು ಮತ್ತು ಇತರ ಕೆಲವು ಮಾತ್ರೆಗಳು ಅನ್ನನಾಳಕ್ಕೆ ಕಿರಿಕಿರಿ ಉಂಟುಮಾಡಬಹುದು. ಇವುಗಳನ್ನು ಸಾಕಷ್ಟು ನೀರಿನೊಂದಿಗೆ ಸೇವಿಸುವುದು ಮತ್ತು ಸೇವಿಸಿದ ತಕ್ಷಣ ಮಲಗದಿರುವುದು ಮುಖ್ಯವಾಗಿರಬಹುದು. ಆದರೆ ಔಷಧಿಯ ಪ್ರಕಾರ ಸೂಚನೆಗಳು ಬದಲಾಗುವುದರಿಂದ, ಎಲ್ಲ ಔಷಧಿಗಳಿಗೂ ಒಂದೇ ನಿಯಮವನ್ನು ಅನ್ವಯಿಸಬಾರದು. ಹೃದಯ ಅಥವಾ ಮೂತ್ರಪಿಂಡದ ಕಾಯಿಲೆಗಳ ಕಾರಣದಿಂದ ವೈದ್ಯರು ನೀರಿನ ಸೇವನೆಗೆ ಮಿತಿ ವಿಧಿಸಿದ್ದರೆ, ಮಾತ್ರೆ ನುಂಗಲು ಹೆಚ್ಚುವರಿ ನೀರು ಕುಡಿಯುವ ಮೊದಲು ವೈದ್ಯರ ಸಲಹೆ ಪಡೆಯಬೇಕು.

ಮಾತ್ರೆ ನುಂಗಲು ತೊಂದರೆಯಾದರೆ ಏನು ಮಾಡಬೇಕು?

ಮಾತ್ರೆ ನುಂಗಲು ಪದೇಪದೇ ತೊಂದರೆಯಾಗುತ್ತಿದ್ದರೆ, ಅದನ್ನು ಬಲವಂತವಾಗಿ ನುಂಗಲು ಪ್ರಯತ್ನಿಸಬೇಡಿ. ವೈದ್ಯರು ಅಥವಾ ಔಷಧ ತಜ್ಞರನ್ನು ಸಂಪರ್ಕಿಸಿ. ಅಗತ್ಯವಿದ್ದರೆ ಅದೇ ಔಷಧಿಯ ದ್ರವ ರೂಪ ಅಥವಾ ಬೇರೆ ಸೂಕ್ತ ಪರ್ಯಾಯ ಲಭ್ಯವಿದೆಯೇ ಎಂಬುದನ್ನು ವಿಚಾರಿಸಬಹುದು.

ಔಷಧಿಯನ್ನು ಸರಿಯಾದ ಸಮಯಕ್ಕೆ ತೆಗೆದುಕೊಳ್ಳುವುದು ಎಷ್ಟು ಮುಖ್ಯವೋ, ಅದನ್ನು ಸರಿಯಾದ ವಿಧಾನದಲ್ಲಿ ಸೇವಿಸುವುದೂ ಅಷ್ಟೇ ಮುಖ್ಯ. ಮಾತ್ರೆ ನುಂಗುವಾಗ ಸೂಕ್ತ ಪ್ರಮಾಣದ ನೀರು ಕುಡಿಯಿರಿ, ಔಷಧಿಯ ಸೂಚನೆಗಳನ್ನು ಪಾಲಿಸಿ ಮತ್ತು ಸ್ವಯಂಪ್ರೇರಿತವಾಗಿ ಔಷಧಿಯ ವಿಧಾನವನ್ನು ಬದಲಾಯಿಸಬೇಡಿ. ಇವು ಸಣ್ಣ ಎಚ್ಚರಿಕೆಗಳು.

ಚಳಿಗಾಲದ ಬೆಳಗ್ಗೆ ಕಾಫಿ-ಟೀ ಬದಲು ಈ ಪಾನೀಯಗಳನ್ನು ಕುಡಿಯಿರಿ!



ಚಳಿಗಾಲ ಆರಂಭವಾಗುತ್ತಿದ್ದಂತೆ ಬೆಳಗಿನ ವಾತಾವರಣ ತಂಪಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಹಾಸಿಗೆಯಿಂದ ಎದ್ದ ತಕ್ಷಣ ಒಂದು ಕಪ್ ಬಿಸಿಬಿಸಿ ಚಹಾ ಅಥವಾ ಕಾಫಿ ಕುಡಿಯುವ ಅಭ್ಯಾಸ ಬಹುತೇಕರಿಗಿದೆ. ಆದರೆ ಪ್ರತಿದಿನ ಅದೇ ಪಾನೀಯಗಳನ್ನು ಸೇವಿಸುವ ಬದಲು ಮನೆಯಲ್ಲೇ ಸಿಗುವ ನೈಸರ್ಗಿಕ ಪದಾರ್ಥಗಳಿಂದ ತಯಾರಿಸಿದ ಬಿಸಿ ಪಾನೀಯಗಳನ್ನೂ ಆಯ್ಕೆ ಮಾಡಿಕೊಳ್ಳಬಹುದು. ಶುಂಠಿ, ನಿಂಬೆ, ಅರಿಶಿನ, ತುಳಸಿ, ಪುದೀನಾ ಮುಂತಾದ ಪದಾರ್ಥಗಳಿಂದ ತಯಾರಿಸುವ ಪಾನೀಯಗಳು ರುಚಿಯ ಜೊತೆಗೆ ದೇಹಕ್ಕೆ ದ್ರವದ ಪೂರೈಕೆಯನ್ನೂ ಮಾಡುತ್ತವೆ. ಕೆಲವು ಪದಾರ್ಥಗಳಲ್ಲಿ ಉತ್ಕರ್ಷಣ ನಿರೋಧಕ ಗುಣಗಳಿರುವ ಸಸ್ಯ ಸಂಯುಕ್ತಗಳೂ ಇವೆ. ಹಾಗಾದರೆ ಚಳಿಗಾಲದ ಬೆಳಗ್ಗೆ ಕುಡಿಯಬಹುದಾದ ಆರು ಸರಳ ಪಾನೀಯಗಳು ಯಾವುವು? ಅವುಗಳನ್ನು ಮನೆಯಲ್ಲಿ ಹೇಗೆ ತಯಾರಿಸಬಹುದು ಎಂಬುದನ್ನು ತಿಳಿದುಕೊಳ್ಳೋಣ.

ಶುಂಠಿ ಮತ್ತು ನಿಂಬೆ ಚಹಾ: ಶುಂಠಿಯು ಭಾರತೀಯ ಅಡುಗೆಮನೆಯಲ್ಲಿ ಸಾಮಾನ್ಯವಾಗಿ ಬಳಸುವ ಪದಾರ್ಥ. ಇದರಲ್ಲಿ ಜಿಂಜರಾಲ್‌ನಂತಹ ಸಸ್ಯ ಸಂಯುಕ್ತಗಳಿದ್ದು, ಉತ್ಕರ್ಷಣ ನಿರೋಧಕ ಮತ್ತು ಉರಿಯೂತ ನಿರೋಧಕ ಗುಣಗಳ ಕುರಿತು ಅಧ್ಯಯನಗಳು ನಡೆದಿವೆ. ಬಿಸಿಯಾದ ಶುಂಠಿ ಪಾನೀಯವು ಗಂಟಲಿಗೆ ಆರಾಮ ನೀಡಬಹುದು. ನಿಂಬೆಹಣ್ಣಿನಲ್ಲಿ ವಿಟಮಿನ್ ಸಿ ಇರುವುದರಿಂದ ಆಹಾರದ ಮೂಲಕ ಈ ಪೋಷಕಾಂಶವನ್ನು ಪಡೆಯಲು ಸಹಾಯವಾಗುತ್ತದೆ.

ಅರಿಶಿನ ಹಾಲು: ಅರಿಶಿನ ಹಾಲು ಭಾರತೀಯ ಮನೆಗಳಲ್ಲಿ ಹಿಂದಿನಿಂದಲೂ ಬಳಕೆಯಲ್ಲಿರುವ ಪಾನೀಯ. ಅರಿಶಿನದಲ್ಲಿರುವ ಕರ್ಕ್ಯುಮಿನ್ ಎಂಬ ಸಸ್ಯ ಸಂಯುಕ್ತದ ಕುರಿತು ಉತ್ಕರ್ಷಣ ನಿರೋಧಕ ಮತ್ತು ಉರಿಯೂತ ನಿರೋಧಕ ಗುಣಗಳ ಸಂಶೋಧನೆಗಳು ನಡೆದಿವೆ. ಬಿಸಿಯಾದ ಹಾಲು ದೇಹಕ್ಕೆ ಆರಾಮ ನೀಡುವುದರ ಜೊತೆಗೆ ಪ್ರೋಟೀನ್ ಮತ್ತು ಕ್ಯಾಲ್ಸಿಯಂನಂತಹ ಪೋಷಕಾಂಶಗಳನ್ನೂ ಒದಗಿಸುತ್ತದೆ.

ತಯಾರಿಸುವ ವಿಧಾನ: ಒಂದು ಲೋಟ ಹಾಲನ್ನು ಬಿಸಿ ಮಾಡಿ ಅದಕ್ಕೆ ಕಾಲು ಅಥವಾ ಅರ್ಧ ಚಮಚ ಅರಿಶಿನ ಪುಡಿ ಸೇರಿಸಿ. ಇಷ್ಟವಿದ್ದರೆ ಸ್ವಲ್ಪ ಕರಿಮೆಣಸಿನ ಪುಡಿ ಸೇರಿಸಬಹುದು. ಚೆನ್ನಾಗಿ ಮಿಶ್ರಣ ಮಾಡಿ ಬೆಚ್ಚಗಿರುವಾಗ ಕುಡಿಯಿರಿ.

ದಾಲ್ಚಿನ್ನಿ ನೀರು: ದಾಲ್ಚಿನ್ನಿಗೆ ವಿಶಿಷ್ಟವಾದ ಪರಿಮಳವಿದ್ದು, ಇದರಲ್ಲಿ ವಿವಿಧ ಉತ್ಕರ್ಷಣ ನಿರೋಧಕ ಸಸ್ಯ ಸಂಯುಕ್ತಗಳಿವೆ. ಇದನ್ನು ಬೆಚ್ಚಗಿನ ನೀರಿನಲ್ಲಿ ಬೆರೆಸಿ ಕುಡಿಯುವುದರಿಂದ ಸುವಾಸನೆಯುಕ್ತ ಪಾನೀಯ ಸಿದ್ಧವಾಗುತ್ತದೆ. ಆದರೆ ದಾಲ್ಚಿನ್ನಿ ನೀರು ಮಧುಮೇಹ ಅಥವಾ ತೂಕದ ಸಮಸ್ಯೆಗಳನ್ನು ಗುಣಪಡಿಸುತ್ತದೆ ಎಂದು ಭಾವಿಸಬಾರದು. ತಯಾರಿಸುವ ವಿಧಾನ: ಒಂದು ಲೋಟ ನೀರಿಗೆ ಸಣ್ಣ ದಾಲ್ಚಿನ್ನಿ ಚಕ್ಕೆ ಹಾಕಿ ಕೆಲವು ನಿಮಿಷ ಕುದಿಸಿ. ನಂತರ ಸೋಸಿ ಬೆಚ್ಚಗಿರುವಾಗ ಕುಡಿಯಿರಿ. ಸಿಹಿ ಬೇಕಿದ್ದರೆ ಸ್ವಲ್ಪ ಜೇನುತುಪ್ಪ ಸೇರಿಸಬಹುದು. ಪ್ರತಿದಿನ ಹೆಚ್ಚಿನ ಪ್ರಮಾಣದಲ್ಲಿ ದಾಲ್ಚಿನ್ನಿ ಸೇವಿಸುವುದನ್ನು ತಪ್ಪಿಸಿ.

ಕ್ಯಾಮೊಮೈಲ್ ಚಹಾ: ದಿನವಿಡೀ ಕೆಲಸದ ಒತ್ತಡದಿಂದ ದಣಿದವರಿಗೆ ಕ್ಯಾಮೊಮೈಲ್ ಚಹಾ ಒಂದು ಹಿತವಾದ ಬಿಸಿ ಪಾನೀಯವಾಗಬಹುದು. ಇದನ್ನು ವಿಶ್ರಾಂತಿ ಮತ್ತು ನಿದ್ರೆಗೆ ನೆರವಾಗುವ ಪಾನೀಯವಾಗಿ ಕೆಲವರು ಬಳಸುತ್ತಾರೆ. ಆದರೆ ನಿದ್ರಾಹೀನತೆಗೆ ಇದು ಖಚಿತ ಪರಿಹಾರವಲ್ಲ. ತಯಾರಿಸುವ ವಿಧಾನ: ಒಂದು ಕಪ್ ಬಿಸಿ ನೀರಿಗೆ ಒಂದು ಚಮಚ ಒಣಗಿಸಿದ ಕ್ಯಾಮೊಮೈಲ್ ಹೂವುಗಳನ್ನು ಸೇರಿಸಿ, 5 ನಿಮಿಷ ಮುಚ್ಚಿಡಿ. ನಂತರ ಸೋಸಿ ಕುಡಿಯಿರಿ. ಕ್ಯಾಮೊಮೈಲ್‌ಗೆ ಅಲರ್ಜಿ ಇರುವವರು ಅಥವಾ ಕೆಲವು ಔಷಧಿಗಳನ್ನು ಸೇವಿಸುವವರು ಬಳಸುವ ಮೊದಲು ವೈದ್ಯರ ಸಲಹೆ ಪಡೆಯುವುದು ಉತ್ತಮ.

ನಿಂಬೆ ಮತ್ತು ಜೇನುತುಪ್ಪದ ಬೆಚ್ಚಗಿನ ನೀರು: ಬೆಳಗ್ಗೆ ಎದ್ದ ನಂತರ ದೇಹಕ್ಕೆ ನೀರಿನ ಪೂರೈಕೆ ಮಾಡುವುದು ಮುಖ್ಯ. ನಿಂಬೆ ರಸ ಮತ್ತು ಸ್ವಲ್ಪ ಜೇನುತುಪ್ಪ ಬೆರೆಸಿದ ಬೆಚ್ಚಗಿನ ನೀರು ಸರಳ ಹಾಗೂ ರುಚಿಕರವಾದ ಆಯ್ಕೆಯಾಗಿದೆ. ನಿಂಬೆ ವಿಟಮಿನ್ ಸಿ ಒದಗಿಸಿದರೆ, ಜೇನುತುಪ್ಪ ಪಾನೀಯಕ್ಕೆ ಸಿಹಿ ನೀಡುತ್ತದೆ. ತಯಾರಿಸುವ ವಿಧಾನ: ಒಂದು ಲೋಟ ಉಗುರುಬೆಚ್ಚಗಿನ ನೀರಿಗೆ ಅರ್ಧ ನಿಂಬೆಹಣ್ಣಿನ ರಸ ಮತ್ತು ಒಂದು ಚಿಕ್ಕ ಚಮಚ ಜೇನುತುಪ್ಪ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ಕುಡಿಯಿರಿ. ಎದೆಯುರಿ ಅಥವಾ ಆಸಿಡಿಟಿ ಹೆಚ್ಚಾಗುವವರು ನಿಂಬೆ ರಸವನ್ನು ಕಡಿಮೆ ಮಾಡುವುದು ಅಥವಾ ಬಿಡುವುದು ಸೂಕ್ತ.

ತುಳಸಿ ಮತ್ತು ಪುದೀನಾ ಪಾನೀಯ: ತುಳಸಿ ಮತ್ತು ಪುದೀನಾ ಎರಡೂ ಪರಿಮಳಯುಕ್ತ ಸಸ್ಯಗಳು. ಇವುಗಳ ಎಲೆಗಳಲ್ಲಿ ವಿವಿಧ ಸಸ್ಯಜನ್ಯ ಸಂಯುಕ್ತಗಳಿದ್ದು, ಪಾನೀಯಕ್ಕೆ ಉತ್ತಮ ಸುವಾಸನೆ ಮತ್ತು ರುಚಿ ನೀಡುತ್ತವೆ. ಬಿಸಿಯಾಗಿ ಸೇವಿಸುವ ಈ ಪಾನೀಯವು ಚಳಿಗಾಲದ ಬೆಳಗ್ಗೆ ತಾಜಾತನದ ಅನುಭವ ನೀಡಬಹುದು.

ಚಳಿಗಾಲದಲ್ಲಿ ಬಿಸಿ ಪಾನೀಯ ಸೇವಿಸುವಾಗ ಈ ಅಂಶಗಳನ್ನು ಮರೆಯಬೇಡಿ: ಪಾನೀಯವನ್ನು ಅತಿಯಾಗಿ ಬಿಸಿಯಾಗಿರುವಾಗ ಕುಡಿಯಬೇಡಿ. ಬೆಚ್ಚಗಿನ ಅಥವಾ ಹಿತವಾದ ತಾಪಮಾನದಲ್ಲಿರುವಾಗ ಸೇವಿಸಿ. ಸಕ್ಕರೆ ಮತ್ತು ಜೇನುತುಪ್ಪವನ್ನು ಮಿತವಾಗಿ ಬಳಸಿ. ಜೇನುತುಪ್ಪವೂ ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ಹೆಚ್ಚಿಸಬಹುದು. ಮಧುಮೇಹ ಇರುವವರು ಸಿಹಿ ಸೇರಿಸಿದ ಪಾನೀಯಗಳ ಪ್ರಮಾಣದ ಬಗ್ಗೆ ಎಚ್ಚರಿಕೆ ವಹಿಸಬೇಕು. ಆಸಿಡಿಟಿ ಅಥವಾ ಎದೆಯುರಿ ಇರುವವರಿಗೆ ನಿಂಬೆ ಮತ್ತು ಶುಂಠಿಯಂತಹ ಪದಾರ್ಥಗಳು ಕೆಲವೊಮ್ಮೆ ಅಸ್ವಸ್ಥತೆ ಉಂಟುಮಾಡಬಹುದು. ಗರ್ಭಿಣಿಯರು, ಹಾಲುಣಿಸುವ ತಾಯಂದಿರು ಮತ್ತು ನಿಯಮಿತವಾಗಿ ಔಷಧಿ ಸೇವಿಸುವವರು ಗಿಡಮೂಲಿಕೆಗಳ ಸಾಂದ್ರ ಕಷಾಯಗಳನ್ನು ನಿಯಮಿತವಾಗಿ ಸೇವಿಸುವ ಮೊದಲು ವೈದ್ಯರ ಸಲಹೆ ಪಡೆಯಬೇಕು. ದಿನವಿಡೀ ಸಾಕಷ್ಟು ಸಾಮಾನ್ಯ ನೀರನ್ನೂ ಕುಡಿಯಬೇಕು.

ಆರೋಗ್ಯಕರ ಬೆಳಗಿನ ಆರಂಭಕ್ಕೆ ಸರಳ ಆಯ್ಕೆ: ಚಳಿಗಾಲದಲ್ಲಿ ಬಿಸಿ ಪಾನೀಯ ಕುಡಿಯುವುದರಿಂದ ದೇಹಕ್ಕೆ ಬೆಚ್ಚಗಿನ ಅನುಭವ ಮತ್ತು ದ್ರವದ ಪೂರೈಕೆ ದೊರೆಯುತ್ತದೆ. ಆದರೆ ಈ ಆರು ಪಾನೀಯಗಳು ಯಾವುದೇ ಕಾಯಿಲೆಗೆ ಔಷಧಿಯಲ್ಲ ಅಥವಾ ರೋಗನಿರೋಧಕ ಶಕ್ತಿಯನ್ನು ತಕ್ಷಣ ಹೆಚ್ಚಿಸುವ ಮಂತ್ರವಲ್ಲ. ಸಮತೋಲಿತ ಆಹಾರ, ಸಾಕಷ್ಟು ನಿದ್ರೆ, ನಿಯಮಿತ ವ್ಯಾಯಾಮ ಮತ್ತು ವೈಯಕ್ತಿಕ ಆರೋಗ್ಯಕ್ಕೆ ತಕ್ಕ ಆಹಾರ ಪದ್ಧತಿಯೇ ಉತ್ತಮ ಆರೋಗ್ಯದ ಆಧಾರ. ನಿಮ್ಮ ದೇಹಕ್ಕೆ ಹೊಂದುವ ಪಾನೀಯವನ್ನು ಆಯ್ಕೆಮಾಡಿ, ಸಕ್ಕರೆಯನ್ನು ಕಡಿಮೆ ಬಳಸಿ ಮತ್ತು ಚಳಿಗಾಲದ ಬೆಳಗ್ಗೆಯನ್ನು ಆರೋಗ್ಯಕರವಾಗಿ ಆರಂಭಿಸಿ.

ಇರುಳಾಯ್ತು ಹಗಲು




ಹಲವು ಮನೆಗಳಿಗೆ ಬೆಳಕಾದ ಆ ತಂತಿ
ಒಂದು ಮನೆಗೆ ಶಾಶ್ವತ ಕತ್ತಲಾಯಿತು
ಹಲವು ಪಕ್ಷಿಗಳಿಗೆ ಆಶ್ರಯವಾದ ಆ ತಂತಿ
ಎರಡು ಜೀವಗಳ ಪ್ರಾಣಪಕ್ಷಿ ಕಸಿದುಕೊಂಡಿತು

ಸದಾ ಸಹಾಯಹಸ್ತ ಆಗಿದ್ದ ಆ ತಂತಿ
ಇಂದು ಉಗ್ರರೂಪಿಯಾಯಿತು
ಸದಾ ಮೌನವಾಗಿದ್ದ ಆ ತಂತಿ
ಇಂದು ಮಾತಾಡಿ ಇಡೀ ಊರ ಮೌನವಾಗಿಸಿತು

ಹಲವು ಕುಟುಂಬಗಳ ಸಂಬಂಧ ಪಡೆದ ಆ ತಂತಿ
ತಾಯಿ, ಮಗನ ಸಂಬಂಧಕ್ಕೆ ಬೆಲೆ ನೀಡಿತು
ಒಂಟಿಯಾಗಿ ಕೊರಗುತ್ತಿದ್ದ ಆ ತಂತಿ
ಹೆತ್ತಬ್ಬೆಗೆ ಒಂಟಿ ಜೀವನ ನಿರಾಕರಿಸಿತು

ಹಲವರ ಪಯಣಕ್ಕೆ ದೀಪವಾದ ಆ ತಂತಿ
ಇಬ್ಬರ ಜೀವನ ಪಯಣಕ್ಕೆ ಮಂಗಳ ಹಾಡಿತು
ದಾಸನಾಗಲಿ, ಅರಸನಾಗಲಿ ಭೇಧವಿಲ್ಲದ ಆ ತಂತಿ
ಜೀವನ ಕ್ಷಣಿಕವೆಂಬ ಪಾಠವ ಕಲಿಸಿತು

(ದಿವಂಗತ ಮರ್ಸಿ ಹಾಗೂ ಶೋನ್ ಮಸ್ಕರೇನಸ್ ಇವರ ಆತ್ಮಕ್ಕೆ ಚಿರಶಾಂತಿ ಬೇಡುತ್ತಾ ಈ ಕವಿತೆ ಸಮರ್ಪಿಸುತ್ತೇನೆ)



– ವಿಲ್ಲಿ ಅಲ್ಲಿಪಾದೆ

ಗಡಿನಾಡಿನ ಪತ್ರಕರ್ತ ಸಾಹಿತಿ ಗಿರೀಶ್ ಪಿ.ಎಂ. ಚಿತ್ತಾರಿ ಅವರಿಗೆ ರಾಜ್ಯೋತ್ಸವದ ಗೌರವ



ಗಡಿನಾಡಿನಲ್ಲಿ ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಯ ಬೆಳವಣಿಗೆಗೆ ಕೊಡುಗೆ ನೀಡುತ್ತಿರುವ ಪತ್ರಕರ್ತ ಮತ್ತು ಸಾಹಿತಿ ಗಿರೀಶ್ ಪಿ.ಎಂ. ಚಿತ್ತಾರಿ ಅವರನ್ನು 71ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಗೌರವಿಸಿ ಸನ್ಮಾನಿಸಲಾಯಿತು. ಕನ್ನಡ ಸಂಘ (ನೋಂ.), ಬೆಂಗಳೂರು, ವಾಣಿಜ್ಯ ತೆರಿಗೆಗಳ ಇಲಾಖೆ ಹಾಗೂ ಕಾಸರಗೋಡಿನ ನುಳ್ಳಿಪ್ಪಾಡಿಯ ಕನ್ನಡ ಭವನ ಮತ್ತು ಗ್ರಂಥಾಲಯದ ಸಹಯೋಗದಲ್ಲಿ ನವೆಂಬರ್ 1ರಂದು ಕನ್ನಡ ಭವನದ ಸಭಾಂಗಣದಲ್ಲಿ ಆಯೋಜಿಸಲಾದ ರಾಜ್ಯೋತ್ಸವ ಸಮಾರಂಭದಲ್ಲಿ ಈ ಗೌರವ ಸಲ್ಲಿಸಲಾಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಕನ್ನಡ ಭವನದ ಸಂಸ್ಥಾಪಕ ಡಾ. ವಾಮನ್‌ರಾವ್ ಬೇಕಲ್ ಮಾತನಾಡಿ, ಕನ್ನಡ ಭಾಷೆ ಮತ್ತು ಸಾಹಿತ್ಯವು ನಿಂತ ನೀರಾಗದೆ ನಿರಂತರವಾಗಿ ಹರಿಯುವ ನದಿಯಂತೆ ಬೆಳೆಯಬೇಕು. ವಿಶ್ವದ ಯಾವುದೇ ಭಾಗದಲ್ಲಿರುವ ಕನ್ನಡಿಗರ ಮನಸ್ಸುಗಳನ್ನು ಕನ್ನಡದ ಮೂಲಕ ಬೆಸೆಯುವ ಕಾರ್ಯ ನಡೆಯಬೇಕು. ಕನ್ನಡಿಗನಾಗಿ ನಮ್ಮ ಭಾಷೆ ಮತ್ತು ಸಂಸ್ಕೃತಿಯ ಉಳಿವಿಗಾಗಿ ನಾವೇನು ಮಾಡಬಹುದು ಎಂಬ ಚಿಂತನೆ ಪ್ರತಿಯೊಬ್ಬರಲ್ಲೂ ಇರಬೇಕು ಎಂದು ಕರೆ ನೀಡಿದರು.

ಒಬ್ಬ ವ್ಯಕ್ತಿಯಿಂದಲೇ ಇಷ್ಟೊಂದು ಕನ್ನಡಪರ ಕಾರ್ಯಗಳನ್ನು ಮಾಡಲು ಸಾಧ್ಯವಾಗುವುದಾದರೆ, ಕನ್ನಡ ಸಾಹಿತ್ಯ ಪರಿಷತ್‌ನಂತಹ ಸಂಸ್ಥೆಗಳು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬಹುದು ಎಂದು ಅಭಿಪ್ರಾಯಪಟ್ಟರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತ ಟಿ.ಆರ್. ಕೃಷ್ಣಕುಮಾರ್ ಮಾತನಾಡಿ, ಕಾಸರಗೋಡು ಕೇರಳದ ಆಡಳಿತ ವ್ಯಾಪ್ತಿಯಲ್ಲಿದ್ದರೂ ಭಾವನಾತ್ಮಕವಾಗಿ ಕನ್ನಡಿಗರೊಂದಿಗೆ ಬೆಸೆದುಕೊಂಡಿದೆ. ಗಡಿನಾಡಿನಲ್ಲಿ ಕನ್ನಡವನ್ನು ಉಳಿಸಿ ಬೆಳೆಸುವಲ್ಲಿ ಹಲವು ಸವಾಲುಗಳಿವೆ. ಇಂದಿನ ಪೀಳಿಗೆಯ ಮಕ್ಕಳು ಕನ್ನಡ ಭಾಷೆಯಿಂದ ದೂರವಾಗುತ್ತಿರುವುದು ಆತಂಕದ ಸಂಗತಿಯಾಗಿದೆ ಎಂದು ಹೇಳಿದರು. ಕನ್ನಡ ಭವನವು 20 ಸಾವಿರಕ್ಕೂ ಅಧಿಕ ಪುಸ್ತಕಗಳನ್ನು ಸಂಗ್ರಹಿಸಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಕಂಪನ್ನು ಪಸರಿಸುತ್ತಿರುವುದು ಶ್ಲಾಘನೀಯ. ಇಂತಹ ಸಂಸ್ಥೆಗಳ ಸೇವೆ ಮುಂದಿನ ಪೀಳಿಗೆಗೆ ಪ್ರೇರಣೆಯಾಗಲಿ ಎಂದು ಹಾರೈಸಿದರು. ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಗೌರವ ಸನ್ಮಾನ: ಸಮಾರಂಭದಲ್ಲಿ ಕನ್ನಡ ಸಂಘದ ವತಿಯಿಂದ ಮೂವರಿಗೆ ಅಂತರ್‌ರಾಜ್ಯ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕನ್ನಡ ಭವನದ ವತಿಯಿಂದ ವಾಣಿಜ್ಯ ತೆರಿಗೆ ಇಲಾಖೆಯ ಕನ್ನಡ ಸಂಘದ ಎಂಟು ಮಂದಿಗೆ ಗೌರವ ಸನ್ಮಾನ ಹಾಗೂ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಗಡಿನಾಡಿನ ಹತ್ತು ಮಂದಿ ಸಾಧಕರನ್ನು ಗೌರವಿಸಲಾಯಿತು. ಡಾ. ಕೆ.ಎನ್. ವೆಂಕಟ್ರಮಣ ಹೊಳ್ಳ, ಡಾ. ಸುರೇಶ್ ನೆಗಳಗುಳಿ, ಪ್ರದೀಪ್ ಬೇಕಲ್, ವಸಂತ ಕೆರೆಮನೆ, ಜಗನ್ನಾಥ ಶೆಟ್ಟಿ ಪಿ.ಕೆ., ಅಖಿಲೇಶ್ ನಗುಮುಗಮ್, ವಸಂತ ಭಾರದ್ವಜ, ಗುರುರಾಜ್ ಕಾಸರಗೋಡು, ಗಿರೀಶ್ ಪಿ.ಎಂ. ಚಿತ್ತಾರಿ ಹಾಗೂ ಮುರಳಿ ಪಾರೆಕಟ್ಟೆ ಸನ್ಮಾನ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರಾದ ಪದ್ಮಾಕರ ಆರ್. ಕುಲಕರ್ಣಿ, ರಮೇಶ್ ಕುಮಾರ್, ಎ. ಕುಮಾರ್, ಸಹಾಯಕ ಆಯುಕ್ತರಾದ ಕೆ. ದೊರೈ, ಕೆ.ಸಿ. ಮಂಜುನಾಥ್, ಕೆ.ಎನ್. ನವೀನ್, ರಾಕೇಶ್ ರಾಥೋಡ್, ಪ್ರಮುಖರಾದ ಶೋಭಾ, ಸಂಧ್ಯಾರಾಣಿ ಟೀಚರ್, ರಾಜೇಶ್ ಹಾಗೂ ಸತೀಶ್ ಕೂಡ್ಲು ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಕನ್ನಡ ನಾಡು–ನುಡಿಯ ಕಲರವ ಮೂಡಿಸಿದ ಸಾಂಸ್ಕೃತಿಕ ವೈಭವ: ರಾಜ್ಯೋತ್ಸವದ ಅಂಗವಾಗಿ ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ (ರಿ.), ಕಾಸರಗೋಡು ವತಿಯಿಂದ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಗುರುರಾಜ್ ಕಾಸರಗೋಡು ಮತ್ತು ತಂಡದವರು ಕನ್ನಡ ನಾಡು–ನುಡಿಗೆ ಸಂಬಂಧಿಸಿದ ಸಂಗೀತ, ನೃತ್ಯ ಹಾಗೂ ಯಕ್ಷಗಾನ ಪ್ರದರ್ಶನಗಳ ಮೂಲಕ ಪ್ರೇಕ್ಷಕರ ಗಮನ ಸೆಳೆದರು. ಗಡಿನಾಡಿನಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಕನ್ನಡಿಗರ ಅಭಿಮಾನವನ್ನು ಉಳಿಸಿ ಬೆಳೆಸುವ ಸಂದೇಶ ಸಾರಿದ 71ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭವು ಕನ್ನಡಪರ ಒಗ್ಗಟ್ಟು ಹಾಗೂ ಸಾಂಸ್ಕೃತಿಕ ಸಂಭ್ರಮಕ್ಕೆ ಸಾಕ್ಷಿಯಾಯಿತು.

ಸಾಕು ನಾಯಿ ಮಾಲೀಕರಿಗೆ ಪಾಲಿಕೆ ಎಚ್ಚರಿಕೆ - ನಿಯಮ ಉಲ್ಲಂಘನೆಗೆ 50 ಸಾವಿರ ದಂಡ



ಸಾಕು ನಾಯಿಗಳನ್ನು ಸಾಕುವ ಮಾಲೀಕರು ಇನ್ನು ಮುಂದೆ ಹೆಚ್ಚಿನ ಜವಾಬ್ದಾರಿಯಿಂದ ವರ್ತಿಸಬೇಕು. ನಾಯಿಗಳಿಗೆ ಕಡ್ಡಾಯ ಲಸಿಕೆ ಹಾಕಿಸುವುದರಿಂದ ಹಿಡಿದು ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡುವವರೆಗೆ ಹಲವು ನಿಯಮಗಳನ್ನು ಪಾಲಿಸುವಂತೆ ಮಂಗಳೂರು ಮಹಾನಗರ ಪಾಲಿಕೆ ಸೂಚನೆ ನೀಡಿದೆ. ನಿಯಮ ಉಲ್ಲಂಘಿಸಿದರೆ ದಂಡದ ಜೊತೆಗೆ ಕಾನೂನು ಕ್ರಮವನ್ನೂ ಎದುರಿಸಬೇಕಾಗುತ್ತದೆ ಎಂದು ಪಾಲಿಕೆ ಆಯುಕ್ತರು ಎಚ್ಚರಿಸಿದ್ದಾರೆ. ಸರ್ವೋಚ್ಚ ನ್ಯಾಯಾಲಯದ ಆದೇಶಗಳು, ಪ್ರಾಣಿ ಜನನ ನಿಯಂತ್ರಣ ನಿಯಮಗಳು – 2023, ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ 1960 ಹಾಗೂ ಇತರ ಸಂಬಂಧಿತ ಕಾನೂನುಗಳನ್ವಯ ಈ ಸೂಚನೆಗಳನ್ನು ಹೊರಡಿಸಲಾಗಿದೆ.

ನಾಯಿಗಳಿಗೆ ಲಸಿಕೆ ಕಡ್ಡಾಯ: ಎಲ್ಲಾ ಸಾಕು ನಾಯಿಗಳಿಗೆ ರೇಬೀಸ್ ನಿರೋಧಕ ಲಸಿಕೆ ಸೇರಿದಂತೆ ಪಶುವೈದ್ಯರು ಶಿಫಾರಸು ಮಾಡುವ ಲಸಿಕೆಗಳನ್ನು ಹಾಕಿಸಬೇಕು. ಅಗತ್ಯವಿರುವಂತೆ ಬೂಸ್ಟರ್ ಡೋಸ್ ನೀಡಬೇಕು. ಪಾಲಿಕೆ ಅಧಿಕಾರಿಗಳು ತಪಾಸಣೆ ನಡೆಸಿದಾಗ ಲಸಿಕೆ ಹಾಕಿಸಿರುವುದಕ್ಕೆ ಸಂಬಂಧಿಸಿದ ಮಾನ್ಯ ಪ್ರಮಾಣಪತ್ರವನ್ನು ಮಾಲೀಕರು ಹಾಜರುಪಡಿಸಬೇಕು.

ಸಾರ್ವಜನಿಕ ಸ್ಥಳಗಳಲ್ಲಿ ಬಾರು ಬಳಸಲೇಬೇಕು: ಸಾಕು ನಾಯಿಗಳಿಗೆ ಪೌಷ್ಟಿಕ ಆಹಾರ, ಶುದ್ಧ ನೀರು, ಸುರಕ್ಷಿತ ಆಶ್ರಯ ಮತ್ತು ಸೂಕ್ತ ಪಶುವೈದ್ಯಕೀಯ ಚಿಕಿತ್ಸೆ ಒದಗಿಸುವುದು ಮಾಲೀಕರ ಜವಾಬ್ದಾರಿಯಾಗಿದೆ. ನಾಯಿಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತವಾಗಿ ಬಿಡುವಂತಿಲ್ಲ. ಹೊರಗೆ ಕರೆದೊಯ್ಯುವಾಗ ಬಾರು (Leash)ಬಳಸುವುದು ಕಡ್ಡಾಯ.

ನಾಯಿಗಳು ಸಾರ್ವಜನಿಕ ಸ್ಥಳಗಳಲ್ಲಿ ಮಲವಿಸರ್ಜನೆ ಮಾಡಿದರೆ, ಮಾಲೀಕರೇ ತಕ್ಷಣ ಸ್ವಚ್ಛಗೊಳಿಸಬೇಕು. ತಪ್ಪಿದಲ್ಲಿ ಘನತ್ಯಾಜ್ಯ ನಿರ್ವಹಣಾ ಉಪನಿಯಮಗಳಡಿ 1,000ರಿಂದ 5,000ವರೆಗೆ ದಂಡ ವಿಧಿಸಬಹುದಾಗಿದೆ ಎಂದು ಪಾಲಿಕೆ ತಿಳಿಸಿದೆ.

ಸಂತಾನಹರಣ ಮತ್ತು ನೋಂದಣಿಗೆ ಒತ್ತು: ಸಂಬಂಧಿತ ನಿಯಮಗಳ ವ್ಯಾಪ್ತಿಗೆ ಒಳಪಡುವ ಸಾಕು ನಾಯಿಗಳಿಗೆ ಅಧಿಕೃತ ಪಶುವೈದ್ಯರ ಮೂಲಕ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿಸಬೇಕು. ಶ್ವಾನಗಳ ಸಂತಾನೋತ್ಪತ್ತಿ ಅಥವಾ ಮರಿಗಳ ಮಾರಾಟದಲ್ಲಿ ತೊಡಗಿರುವ ವ್ಯಕ್ತಿಗಳು ಮತ್ತು ಸಂಸ್ಥೆಗಳು ಅನ್ವಯಿಸುವ ನಿಯಮಗಳ ಪ್ರಕಾರ ಕರ್ನಾಟಕ ರಾಜ್ಯ ಪ್ರಾಣಿ ಕಲ್ಯಾಣ ಮಂಡಳಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು. ನೋಂದಣಿ ಇಲ್ಲದೆ ಶ್ವಾನ ಸಂತಾನೋತ್ಪತ್ತಿ ಮತ್ತು ಮಾರಾಟ ನಡೆಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಪಾಲಿಕೆ ಸೂಚಿಸಿದೆ. ಮಾರಾಟವಾಗದ ಮರಿಗಳಿಗೆ ಮಾನ್ಯತೆ ಪಡೆದ ಪ್ರಾಣಿ ಕಲ್ಯಾಣ ಸಂಸ್ಥೆಗಳ ಮೂಲಕ ಪುನರ್ವಸತಿ ಕಲ್ಪಿಸಬೇಕು.

ನಾಯಿಗಳನ್ನು ಬೀದಿಗೆ ಬಿಡುವವರಿಗೆ ಕಾನೂನು ಕ್ರಮ: ಸಾಕು ನಾಯಿಗಳನ್ನು ಅಥವಾ ಅವುಗಳ ಮರಿಗಳನ್ನು ರಸ್ತೆ, ಖಾಲಿ ನಿವೇಶನ, ಕಸದ ರಾಶಿ ಹಾಗೂ ಇತರ ಸಾರ್ವಜನಿಕ ಸ್ಥಳಗಳಲ್ಲಿ ತ್ಯಜಿಸುವುದು ಕಾನೂನುಬಾಹಿರ. ಇಂತಹ ಪ್ರಕರಣಗಳಲ್ಲಿ ಅನ್ವಯಿಸುವ ಕಾನೂನುಗಳ ಅಡಿಯಲ್ಲಿ ದಂಡ ಹಾಗೂ ಇತರ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಪ್ರಾಣಿಗಳಿಗೆ ಹಾನಿ ಉಂಟಾದರೆ ಅಥವಾ ನಿರ್ಲಕ್ಷ್ಯದಿಂದ ಮಾನವ ಜೀವಕ್ಕೆ ಅಪಾಯ ಎದುರಾದರೆ ಸಂಬಂಧಿತ ಕಾನೂನುಗಳ ಪ್ರಕಾರ ಕ್ರಮ ಜರುಗಿಸಲಾಗುತ್ತದೆ. ನಿಯಮ ಉಲ್ಲಂಘನೆ ಮತ್ತು ಪ್ರಾಣಿಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ತ್ಯಜಿಸುವ ಪ್ರಕರಣಗಳಲ್ಲಿ 50,000ವರೆಗೆ ದಂಡ ವಿಧಿಸುವುದಾಗಿ ಪಾಲಿಕೆ ಎಚ್ಚರಿಸಿದೆ. ತ್ಯಜಿಸಲಾದ ಪ್ರಾಣಿಗಳ ಆರೈಕೆ ಮತ್ತು ನಿರ್ವಹಣೆಗೆ ತಗಲುವ ವೆಚ್ಚವನ್ನು ಕಾನೂನುಬದ್ಧವಾಗಿ ಮಾಲೀಕರಿಂದ ವಸೂಲಿ ಮಾಡುವುದರ ಜೊತೆಗೆ, ಸೂಕ್ತ ಸಾಕ್ಷ್ಯಾಧಾರಗಳಿದ್ದಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಸಾರ್ವಜನಿಕರಿಗೆ ದೂರು ನೀಡಲು ಮನವಿ:

ಸಾಕು ನಾಯಿಗಳನ್ನು ಅಥವಾ ಅವುಗಳ ಮರಿಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ತಂದು ತ್ಯಜಿಸುವುದು ಕಂಡುಬಂದರೆ, ಸಾರ್ವಜನಿಕರು ಫೋಟೋ ಅಥವಾ ವಿಡಿಯೋ ಸಾಕ್ಷ್ಯಗಳೊಂದಿಗೆ ಮಂಗಳೂರು ಮಹಾನಗರಪಾಲಿಕೆಯ ಸಹಾಯವಾಣಿ 9449007722ಕ್ಕೆ ಮಾಹಿತಿ ನೀಡಬಹುದು. ಸಾರ್ವಜನಿಕ ದೂರುಗಳಿಗಾಗಿ ರಾಜ್ಯದ ಸಹಾಯವಾಣಿ 1902ನ್ನೂ ಬಳಸಬಹುದು ಎಂದು ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಾಕು ಪ್ರಾಣಿಗಳ ಆರೈಕೆ ಮಾಲೀಕರ ಜವಾಬ್ದಾರಿ. ನಿಯಮ ಪಾಲನೆಯ ಮೂಲಕ ಪ್ರಾಣಿಗಳ ಸುರಕ್ಷತೆ, ಸಾರ್ವಜನಿಕ ಸ್ವಚ್ಛತೆ ಮತ್ತು ನಾಗರಿಕರ ಹಿತವನ್ನು ಕಾಪಾಡಲು ಸಹಕರಿಸುವಂತೆ ಪಾಲಿಕೆ ಮನವಿ ಮಾಡಿದೆ.

3D ಪ್ರಿಂಟಿಂಗ್ ಮೂಲಕ ಮರುಬಳಕೆ ರಾಕೆಟ್ ಮಾದರಿ ನಿರ್ಮಿಸಿದ ಬೆಳ್ತಂಗಡಿಯ ಯುವ ಸಂಶೋಧಕ ದೀಪಕ್



ವಿಜ್ಞಾನ ಮತ್ತು ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದಲ್ಲಿ ಸ್ವದೇಶಿ ಸಂಶೋಧನೆಯ ಕನಸು ಹೊತ್ತಿರುವ ಬೆಳ್ತಂಗಡಿಯ ಯುವ ಸಂಶೋಧಕ ದೀಪಕ್ ಎ.ಎಸ್. ಅವರು 3ಆ ಪ್ರಿಂಟಿಂಗ್ ತಂತ್ರಜ್ಞಾನ ಬಳಸಿ 'INVISION ROCKET-1' (ಇನ್ವಿಷನ್ ರಾಕೆಟ್–1) ಎಂಬ ಮರುಬಳಕೆ ಮಾಡಬಹುದಾದ ಉಡಾವಣಾ ವಾಹನದ ಪರಿಕಲ್ಪನಾ ಮಾದರಿಯನ್ನು ನಿರ್ಮಿಸಿದ್ದಾರೆ. ಭಾರತ್ ದೀಪಾ ಡಿಫೆನ್ಸ್ ಅಂಡ್ ಸ್ಪೇಸ್ R&D ಸಂಸ್ಥೆಯ ಸಂಸ್ಥಾಪಕರಾಗಿರುವ ದೀಪಕ್, ಸುಮಾರು 300 ಮಿ.ಮೀ. ಉದ್ದ ಹಾಗೂ 20–25 ಮಿ.ಮೀ. ವ್ಯಾಸದ ಈ ರಾಕೆಟ್ ಮಾದರಿಯನ್ನು PLA (ಪಾಲಿಲ್ಯಾಕ್ಟಿಕ್ ಆಸಿಡ್) ವಸ್ತುವಿನಿಂದ FDM (ಫ್ಯೂಸ್ಡ್ ಡಿಪೋಸಿಷನ್ ಮಾಡೆಲಿಂಗ್) ಮಾದರಿಯ 3D ಪ್ರಿಂಟಿಂಗ್ ತಂತ್ರಜ್ಞಾನದ ಮೂಲಕ ತಯಾರಿಸಿದ್ದಾರೆ.

ಕೃತಿಸ್ವಾಮ್ಯಕ್ಕೆ ಅರ್ಜಿ, ISRO ವೇದಿಕೆಗೆ ಪರಿಕಲ್ಪನೆ: 'INVISION ROCKET-1' ಮಾದರಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ಕೃತಿಸ್ವಾಮ್ಯ ಕಚೇರಿಗೆ ಅಧಿಕೃತ ಅರ್ಜಿ ಸಲ್ಲಿಸಿರುವುದಾಗಿ ದೀಪಕ್ ತಿಳಿಸಿದ್ದಾರೆ. ಭಾರತದ ಸಾಂಸ್ಕೃತಿಕ ಪರಂಪರೆ, ಜ್ಞಾನ ಮತ್ತು ನಾವೀನ್ಯತೆಯ ಮನೋಭಾವದಿಂದ ಪ್ರೇರಿತವಾದ 'INVISION' ಪರಿಕಲ್ಪನೆಯು ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ದೇಶಕ್ಕೆ ಕೊಡುಗೆ ನೀಡುವ ಅವರ ಆಶಯವನ್ನು ಪ್ರತಿಬಿಂಬಿಸುತ್ತದೆ. ಈ ಯೋಜನೆಯ ಪ್ರಸ್ತಾವನೆಯನ್ನು Young Indian Scientist Pvt. Ltd. ಸಂಸ್ಥೆಗೆ ಸಲ್ಲಿಸಿದ್ದು, ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ (CEO) ಪ್ರಸೋಭ್ ಚಂದ್ರನ್ ಅವರು ಅಕ್ಟೋಬರ್ 28ರಂದು ಇಮೇಲ್ ಮೂಲಕ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ದೀಪಕ್ ಅವರ ಪ್ರಯತ್ನವನ್ನು ಶ್ಲಾಘಿಸಿರುವ ಅವರು, ಯೋಜನೆಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಲು ಬೆಂಬಲ ನೀಡುವ ಆಸಕ್ತಿ ವ್ಯಕ್ತಪಡಿಸಿ, ಹೆಚ್ಚಿನ ಅಧ್ಯಯನ ನಡೆಸಿ ಪ್ರಗತಿಯ ಮಾಹಿತಿಯನ್ನು ಹಂಚಿಕೊಳ್ಳುವಂತೆ ಸಲಹೆ ನೀಡಿದ್ದಾರೆ. ಅಲ್ಲದೆ, 'INVISION ROCKET-1' ಪರಿಕಲ್ಪನೆ ಯನ್ನು ISROಯ ANTRIKSH NAVACHAR / Space Innovation ವೇದಿಕೆಯ ಮೂಲಕ ISRO STEM ಕಾರ್ಯಕ್ರಮಕ್ಕೂ ಸಲ್ಲಿಸಲಾಗಿದೆ. ಈ ಯೋಜನೆಯನ್ನು ವಿಷಯ ತಜ್ಞರು ಪರಿಶೀಲಿಸಲಿದ್ದಾರೆ ಎಂದು ತಿಳಿಸಲಾಗಿದೆ.

ಭವಿಷ್ಯದ ಬಾಹ್ಯಾಕಾಶ ತಂತ್ರಜ್ಞಾನದ ಕನಸು: ಪ್ರಸ್ತುತ 'INVISION ROCKET-1' ಕೇವಲ 3D ಪ್ರಿಂಟಿಂಗ್ ಮೂಲಕ ನಿರ್ಮಿಸಿದ ಪರಿಕಲ್ಪನಾ ಹಾಗೂ ಪ್ರದರ್ಶನ ಮಾದರಿಯಾಗಿದೆ. ಇದು ಕಾರ್ಯನಿರ್ವಹಿಸುವ ಉಡಾವಣಾ ರಾಕೆಟ್ ಅಥವಾ ಪರೀಕ್ಷಿತ ಮರುಬಳಕೆ ವ್ಯವಸ್ಥೆಯಲ್ಲ. ಮುಂದಿನ ದಿನಗಳಲ್ಲಿ ತಾಂತ್ರಿಕ ಅಧ್ಯಯನ, ತಜ್ಞರ ಮಾರ್ಗದರ್ಶನ, ಎಂಜಿನಿಯರಿಂಗ್ ಅಭಿವೃದ್ಧಿ ಮತ್ತು ಅಗತ್ಯ ಪರೀಕ್ಷೆಗಳ ಮೂಲಕ ಈ ಪರಿಕಲ್ಪನೆಯನ್ನು ಪ್ರಾಯೋಗಿಕವಾಗಿ ಅಭಿವೃದ್ಧಿಪಡಿಸುವುದು ದೀಪಕ್ ಅವರ ಗುರಿಯಾಗಿದೆ. ಉಪಗ್ರಹಗಳು ಹಾಗೂ ವೈಜ್ಞಾನಿಕ ಉಪಕರಣಗಳನ್ನು ಬಾಹ್ಯಾಕಾಶಕ್ಕೆ ಸಾಗಿಸುವುದು, ಭವಿಷ್ಯದ ಬಾಹ್ಯಾಕಾಶ ಕಾರ್ಯಾಚರಣೆಗಳು ಮತ್ತು ಮರುಬಳಕೆ ಮಾಡಬಹುದಾದ ರಾಕೆಟ್ ತಂತ್ರಜ್ಞಾನದ ಕುರಿತು ಅರಿವು ಮೂಡಿಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ. ಯುವಜನರಲ್ಲಿ ವೈಜ್ಞಾನಿಕ ಚಿಂತನೆ, ಸೃಜನಶೀಲತೆ ಮತ್ತು ಸ್ವದೇಶಿ ತಂತ್ರಜ್ಞಾನದ ಬಗ್ಗೆ ಆಸಕ್ತಿ ಬೆಳೆಸುವುದೂ ಅವರ ಆಶಯವಾಗಿದೆ. ಈ ಮಾದರಿಯ ನಿರ್ಮಾಣಕ್ಕೆ ಉಮೇಶ್ ಮಲುವೇಲು ಅವರು ಪ್ರಾಯೋಜಕತ್ವದ ಬೆಂಬಲ ನೀಡಿದ್ದಾರೆ. ಯುವ ಸಂಶೋಧಕರ ಪ್ರಯತ್ನಕ್ಕೆ ದೊರೆತ ಈ ಪ್ರೋತ್ಸಾಹವು ಯೋಜನೆಯ ಮುಂದಿನ ಬೆಳವಣಿಗೆಗೆ ನೆರವಾಗುವ ನಿರೀಕ್ಷೆಯಿದೆ. 'ಭಾರತದ ನೆಲದಿಂದ 'INVISION ROCKET-1' ಉಡಾವಣೆಗೊಂಡು, ಉಪಗ್ರಹವೊಂದನ್ನು ಬಾಹ್ಯಾಕಾಶ ಕಕ್ಷೆಗೆ ಸೇರಿಸಿ, ಬಳಿಕ ಸುರಕ್ಷಿತವಾಗಿ ಮರಳಿ ಭಾರತದ ನೆಲದಲ್ಲೇ ಇಳಿಯುವ ದಿನವನ್ನು ಕಾಣುವುದು ನನ್ನ ಕನಸು. ಇಂದಿನ ಪರಿಕಲ್ಪನೆಯೇ ನಾಳೆಯ ತಂತ್ರಜ್ಞಾನಕ್ಕೆ ಆರಂಭವಾಗಬಹುದು. ಈ ಕನಸನ್ನು ನನಸಾಗಿಸಲು ಮುಂದಿನ ಹಂತಗಳಲ್ಲಿ ತಾಂತ್ರಿಕ ಅಧ್ಯಯನ ಮತ್ತು ತಜ್ಞರ ಮಾರ್ಗದರ್ಶನದೊಂದಿಗೆ ಶ್ರಮಿಸುತ್ತೇನೆ' ಎಂದು ದೀಪಕ್ ಎ.ಎಸ್. ತಿಳಿಸಿದ್ದಾರೆ.

ಕೋ-ಆಪರೇಟಿವ್ ಆಡಿಟ್ ಡಿಪ್ಲೊಮಾಕ್ಕೆ ಅರ್ಜಿ ಆಹ್ವಾನ

ಸಹಕಾರ ಸಂಸ್ಥೆಗಳಲ್ಲಿ ಲೆಕ್ಕಪರಿಶೋಧಕರಾಗಿ ಕಾರ್ಯನಿರ್ವಹಿಸಲು ಆಸಕ್ತಿ ಹೊಂದಿರುವ ಅಭ್ಯರ್ಥಿಗಳಿಗಾಗಿ ಆರು ತಿಂಗಳ ಅವಧಿಯ 'ಡಿಪ್ಲೊಮಾ ಇನ್ ಕೋ–ಆಪರೇಟಿವ್ ಆಡಿಟ್' ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಖಾಸಗಿ ಅಭ್ಯರ್ಥಿಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಬಿಪಿಎಲ್ ವರ್ಗದ ಅಭ್ಯರ್ಥಿಗಳು ಈ ತರಬೇತಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ನವೆಂಬರ್ 14 ಕೊನೆಯ ದಿನವಾಗಿದೆ. ಖಾಸಗಿ ಅಭ್ಯರ್ಥಿಗಳಿಗೆ 10,000 ಪ್ರವೇಶ ಶುಲ್ಕ ನಿಗದಿಪಡಿಸಲಾಗಿದೆ. ಆದರೆ ಬಿಪಿಎಲ್ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವೇಶ ಶುಲ್ಕದಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ. ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಸರ್ಕಾರದಿಂದ ಪರವಾನಗಿ ನೀಡಲಾಗುತ್ತದೆ. ಪರವಾನಗಿ ಪಡೆದವರು ಸಹಕಾರ ಸಂಸ್ಥೆಗಳಲ್ಲಿ ಲೆಕ್ಕಪರಿಶೋಧಕರಾಗಿ ಕಾರ್ಯನಿರ್ವಹಿಸಲು ಹಾಗೂ ನೇಮಕಾತಿ ಪಡೆಯಲು ಅವಕಾಶವಿದೆ. ಆಸಕ್ತ ಅಭ್ಯರ್ಥಿಗಳು ನವೆಂಬರ್ 14ರೊಳಗೆ ಅರ್ಜಿ ಸಲ್ಲಿಸಿ ಈ ತರಬೇತಿಯ ಸದುಪಯೋಗ ಪಡೆದುಕೊಳ್ಳಬಹುದು. ಪ್ರವೇಶಾತಿ, ಅರ್ಜಿ ಸಲ್ಲಿಕೆ ವಿಧಾನ ಹಾಗೂ ಇತರ ವಿವರಗಳಿಗಾಗಿ ಮೂಡುಬಿದಿರೆಯ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ಅನ್ನು 7022429440, 8971361396 ಅಥವಾ 7259729104 ಸಂಖ್ಯೆಗಳ ಮೂಲಕ ಸಂಪರ್ಕಿಸಬಹುದು ಎಂದು ತಿಳಿಸಲಾಗಿದೆ.

ತುಳುವ ಮಹಾಸಭಾ ಶತಮಾನೋತ್ಸವಕ್ಕೆ ಪೇಜಾವರ ಶ್ರೀಗಳ ಆಶೀರ್ವಾದ

2028ರಲ್ಲಿ ನಡೆಯಲಿರುವ ತುಳುವ ಮಹಾಸಭಾದ ಶತಮಾನೋತ್ಸವ ಆಚರಣೆಗೆ ಪೇಜಾವರ ಮಠದ ಪರಮಪೂಜ್ಯ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಆಶೀರ್ವಾದ ಹಾಗೂ ಮಾರ್ಗದರ್ಶನ ನೀಡುವ ಭರವಸೆ ನೀಡಿದ್ದಾರೆ. ತುಳುವ ಮಹಾಸಭಾ ಇಂಟರ್‌ನ್ಯಾಷನಲ್ ಹಾಗೂ ತುಳುವರ್ಲ್ಡ್ ಫೌಂಡೇಶನ್‌ನ ನಿಯೋಗವು ಅಕ್ಟೋಬರ್ 29ರಂದು ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಪೇಜಾವರ ಶ್ರೀಗಳನ್ನು ಭೇಟಿಯಾಗಿ ಶತಮಾನೋತ್ಸವದ ಕುರಿತು ಮನವಿ ಸಲ್ಲಿಸಿತು. ನಿಯೋಗದ ಮನವಿಯನ್ನು ಪ್ರೀತಿಯಿಂದ ಸ್ವೀಕರಿಸಿದ ಶ್ರೀಗಳು, ತುಳು ಭಾಷೆ, ಸಂಸ್ಕೃತಿ ಹಾಗೂ ತುಳುವರ ಒಗ್ಗಟ್ಟಿನ ಪ್ರಯತ್ನಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು.

ಶತಮಾನೋತ್ಸವಕ್ಕೆ ಸಿದ್ಧತೆ: ಈ ಸಂದರ್ಭದಲ್ಲಿ ತುಳುವ ಮಹಾಸಭಾದ ಕರ್ನಾಟಕ ರಾಜ್ಯ ಅಧ್ಯಕ್ಷ ದೇವೇಂದ್ರ ಹೆಗ್ಡೆ ಕೊಕ್ರಾಡಿ ಅವರು ಸಂಘಟನೆಯ ಆರಂಭಿಕ ಇತಿಹಾಸ, ಜಾಗತಿಕ ವಿಸ್ತರಣೆ ಹಾಗೂ ವಿವಿಧ ದೇಶ ಮತ್ತು ರಾಜ್ಯಗಳಲ್ಲಿ ನಡೆಯುತ್ತಿರುವ ಚಟುವಟಿಕೆಗಳ ಕುರಿತು ಶ್ರೀಗಳಿಗೆ ಮಾಹಿತಿ ನೀಡಿದರು. 2028ರ ಸೆಪ್ಟೆಂಬರ್ 23ರಂದು ನಡೆಯಲಿರುವ ಶತಮಾನೋತ್ಸವದ ಸಿದ್ಧತೆ ಮತ್ತು ಯೋಜನೆಗಳ ಬಗ್ಗೆಯೂ ವಿವರಿಸಿದರು. ತುಳುವ ಮಹಾಸಭಾದ ಸ್ಥಾಪಕ ದಿವಂಗತ ಶ್ರೀ ಶ್ರೀನಿವಾಸ ಉಪಾಧ್ಯಾಯ ಪಣಿಯಾಡಿ ಅವರು ಉಡುಪಿಯವರಾಗಿರುವ ಹಿನ್ನೆಲೆಯಲ್ಲಿ, ಅವರ ಸ್ಮರಣಾರ್ಥ ಶತಮಾನೋತ್ಸವವನ್ನು ಉಡುಪಿಯಲ್ಲಿ ಆಯೋಜಿಸುವುದು ಸೂಕ್ತವೆಂದು ನಿಯೋಗ ಅಭಿಪ್ರಾಯಪಟ್ಟಿತು. ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಗೌರವ ಸಲಹೆಗಾರರು ಹಾಗೂ ಮಾರ್ಗದರ್ಶಕರಾಗಿ ನೇತೃತ್ವ ವಹಿಸುವಂತೆ ಪೇಜಾವರ ಶ್ರೀಗಳಲ್ಲಿ ವಿನಂತಿಸಿತು.

ಶ್ರೀಮಠದ ಸಹಕಾರದ ಭರವಸೆ: ನಿಯೋಗದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಪೇಜಾವರ ಶ್ರೀಗಳು, ಉಡುಪಿಯಲ್ಲಿ ನಡೆಯಲಿರುವ ಶತಮಾನೋತ್ಸವ ಕಾರ್ಯಕ್ರಮಕ್ಕೆ ಶ್ರೀಮಠದ ಸಂಪೂರ್ಣ ಸಹಕಾರ ಹಾಗೂ ಮಾರ್ಗದರ್ಶನ ನೀಡುವುದಾಗಿ ಭರವಸೆ ನೀಡಿದರು. ಬಳಿಕ ಪದಾಧಿಕಾರಿಗಳಿಗೆ ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು. ಈ ಸಂದರ್ಭದಲ್ಲಿ ತುಳುವ ಮಹಾಸಭಾ ಇಂಟರ್‌ನ್ಯಾಷನಲ್‌ನ ರಾಜ್ಯ ಅಧ್ಯಕ್ಷ ದೇವೇಂದ್ರ ಹೆಗ್ಡೆ ಕೊಕ್ರಾಡಿ, ಪ್ರಧಾನ ಕಾರ್ಯದರ್ಶಿ ಹರ್ಷೇಂದ್ರ ಜೈನ್ ಮಾಳ, ಪ್ರಧಾನ ಸಂಚಾಲಕ ಅಭಿಷೇಕ್ ಕೆ. ಕಾರ್ಕಳ, ಬೆಂಗಳೂರು ವಲಯ ಅಧ್ಯಕ್ಷ ಪುರುಷೋತ್ತಮ ಚೇಂಡ್ಲಾ, ಕಾರ್ಯದರ್ಶಿ ಶಾಂತಾರಾಮ್ ವಿ. ಶೆಟ್ಟಿ, ಪ್ರಧಾನ ಸಂಚಾಲಕ ಶಿವಾನಂದ ಸಾಲ್ಯಾನ್ ಹಾಗೂ ಜ್ಯೋತಿಷಿ ಬಿ.ಎಲ್. ಸುಭಾಷ್‌ಚಂದ್ರ ಜೈನ್ ಉಪಸ್ಥಿತರಿದ್ದರು.

ಅನಿತಾ ನಾಯಕ್‌ಗೆ ತುಳುವ ಮಹಾಸಭೆಯ ಅಧ್ಯಕ್ಷ ಪಟ್ಟ



ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿರುವ ತುಳು ಭಾಷೆ ಮತ್ತು ಸಂಸ್ಕೃತಿಯ ಅಭಿಮಾನಿ, ಸಮಾಜಸೇವಕಿ ಅನಿತಾ ನಾಯಕ್ ಅವರು ತುಳುವ ಮಹಾಸಭೆಯ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ತಂತ್ರಜ್ಞಾನ ಕ್ಷೇತ್ರದಲ್ಲಿ ವೃತ್ತಿಜೀವನದ ಸಾಧನೆಯೊಂದಿಗೆ ಕಳೆದ ಮೂರು ದಶಕಗಳಿಂದ ಸಮಾಜಸೇವೆ ಹಾಗೂ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ಅವರು, ಇದೀಗ ಜಾಗತಿಕ ಮಟ್ಟದಲ್ಲಿ ತುಳುವರ ಸಂಘಟನೆಯನ್ನು ಮುನ್ನಡೆಸುವ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳಲ್ಲಿ ಸಾಫ್ಟ್‌ವೇರ್ ಎಂಜಿನಿಯರಿಂಗ್ ಉತ್ಪನ್ನಗಳಿಗೆ ಸಂಬಂಧಿಸಿದ ಜಾಗತಿಕ ತಂತ್ರಜ್ಞಾನ ಯೋಜನೆಗಳ ನೇತೃತ್ವ ವಹಿಸಿರುವ ಅನಿತಾ ನಾಯಕ್, ಅಮೆರಿಕದ ಶಿಕ್ಷಣ, ಸಮುದಾಯ ಆರೋಗ್ಯ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಗೆ ಸಂಬಂಧಿಸಿದ ಲಾಭರಹಿತ ಸಂಸ್ಥೆಗಳ ಕಾರ್ಯಕಾರಿ ಮತ್ತು ವಿವಿಧ ಸಮಿತಿಗಳಲ್ಲಿಯೂ ಸೇವೆ ಸಲ್ಲಿಸಿದ್ದಾರೆ. ಪ್ರಮಾಣೀಕೃತ ಯೋಗ ಶಿಕ್ಷಕಿ ಹಾಗೂ ಆಯುರ್ವೇದ ಜೀವನಶೈಲಿ ಸಲಹೆಗಾರ್ತಿಯಾಗಿರುವ ಅವರು, ಸಮಗ್ರ ಆರೋಗ್ಯ ಮತ್ತು ಕ್ಷೇಮ ಜೀವನಶೈಲಿಯನ್ನು ಉತ್ತೇಜಿಸುವ ಸಂಸ್ಥೆಯೊಂದನ್ನೂ ಸ್ಥಾಪಿಸಿದ್ದಾರೆ.

ತುಳು ಭಾಷೆ–ಸಂಸ್ಕೃತಿಯ ಉಳಿವಿಗೆ ವಿಶೇಷ ಕಾಳಜಿ: ತುಳು ಭಾಷೆ ಮತ್ತು ಸಂಸ್ಕೃತಿಯನ್ನು ಅಮೆರಿಕದಲ್ಲಿ ಬೆಳೆಸಿ, ಮುಂದಿನ ಪೀಳಿಗೆಗೆ ತಲುಪಿಸುವ ಉದ್ದೇಶದಿಂದ 2021ರಲ್ಲಿ ಕ್ಯಾಲಿಫೋರ್ನಿಯಾದಲ್ಲಿ 'ತುಳಸಿ ತುಳು ಕೂಟ' (Tulsi Tulu Koota) ಸಂಸ್ಥೆಯನ್ನು ಸ್ಥಾಪಿಸಿದರು. ಅವರ ನಾಯಕತ್ವದಲ್ಲಿ 270ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿರುವ ಈ ಸಂಸ್ಥೆಯು ಬಿಸು, ಕೊರಲ್ ಪರ್ಬ, ಪುದ್ದರ್ ಸೇರಿದಂತೆ ತುಳುನಾಡಿನ ಸಾಂಪ್ರದಾಯಿಕ ಹಬ್ಬ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಅನಿತಾ ನಾಯಕ್ ಅವರು ಆಲ್ ಅಮೆರಿಕಾ ತುಳು ಅಸೋಸಿಯೇಷನ್ (AATA) ಸಂಸ್ಥೆಯ ಮಾಜಿ ಕ್ಯಾಲಿಫೋರ್ನಿಯಾ ರಾಯಭಾರಿಯಾಗಿದ್ದು, ಪ್ರಸ್ತುತ ಆಡಳಿತ ಮಂಡಳಿಯ ಸದಸ್ಯೆಯಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ವಿಶ್ವದ ಮೊಟ್ಟಮೊದಲ ಆನ್‌ಲೈನ್ ತುಳು ಗ್ರಂಥಾಲಯವೆಂದು ಗುರುತಿಸಲಾದ 'ರಾಣಿ ಅಬ್ಬಕ್ಕ ಗೇಣದ ಚಾವಡಿ' ಯೋಜನೆಯ ಪರಿಕಲ್ಪನೆ ರೂಪಿಸಿ, ಅದರ ಅನುಷ್ಠಾನದಲ್ಲಿಯೂ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಈ ಯೋಜನೆಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಹಾಗೂ ನಿಟ್ಟೆ ವಿಶ್ವವಿದ್ಯಾಲಯದ ತುಳು ಕೇಂದ್ರದ ಸಹಕಾರ ಪಡೆಯುವಲ್ಲಿ ಶ್ರಮಿಸಿದ್ದಾರೆ.

ಅನಿತಾ ನಾಯಕ್ ಅವರ ನೇಮಕಕ್ಕೆ ತುಳುವರ್ಲ್ಡ್ ಫೌಂಡೇಶನ್‌ನ ಗೌರವಾಧ್ಯಕ್ಷ ಶ್ರೀ ಶ್ರೀಹರಿನಾರಾಯಣದಾಸ ಅಸ್ರಣ್ಣ ಕಟೀಲ್, ಅಧ್ಯಕ್ಷೆ ಭಾನುಮತಿ ಶೆಟ್ಟಿ ಕಕ್ಕಗುತ್ತು, ಪ್ರಧಾನ ಕಾರ್ಯದರ್ಶಿ ವಸಂತ ರೈ ಕುತ್ತೆತ್ತೂರು, ನಿರ್ದೇಶಕ ಡಾ. ರಾಜೇಶ್ ಕೃಷ್ಣ ಆಳ್ವ, ತುಳುವ ಮಹಾಸಭೆ ಇಂಟರ್‌ನ್ಯಾಷನಲ್‌ನ ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ದೇವೇಂದ್ರ ಹೆಗ್ಗಡೆ ಕೊಕ್ರಾಡಿ, ಕೇಂದ್ರೀಯ ಸಮಿತಿ ಅಧ್ಯಕ್ಷ ಡಾ. ಅವಿನ್ ಬಿ.ಆರ್. ಆಳ್ವ ಹಾಗೂ ಪ್ರಧಾನ ಸಂಚಾಲಕ ವಿಶ್ವನಾಥ ಆಚಾರ್ಯ ಅವರು ಅಭಿನಂದಿಸಿ ಶುಭ ಹಾರೈಸಿದ್ದಾರೆ.

ನೂತನ ಅಧ್ಯಕ್ಷರಿಗೆ ಅಭಿನಂದನೆ: ಅನಿತಾ ನಾಯಕ್ ಅವರ ನೇಮಕಕ್ಕೆ ತುಳುವರ್ಲ್ಡ್ ಫೌಂಡೇಶನ್‌ನ ಗೌರವಾಧ್ಯಕ್ಷ ಶ್ರೀ ಶ್ರೀಹರಿನಾರಾಯಣದಾಸ ಅಸ್ರಣ್ಣ ಕಟೀಲ್, ಅಧ್ಯಕ್ಷೆ ಭಾನುಮತಿ ಶೆಟ್ಟಿ ಕಕ್ಕಗುತ್ತು, ಪ್ರಧಾನ ಕಾರ್ಯದರ್ಶಿ ವಸಂತ ರೈ ಕುತ್ತೆತ್ತೂರು, ನಿರ್ದೇಶಕ ಡಾ. ರಾಜೇಶ್ ಕೃಷ್ಣ ಆಳ್ವ, ತುಳುವ ಮಹಾಸಭೆ ಇಂಟರ್‌ನ್ಯಾಷನಲ್‌ನ ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ದೇವೇಂದ್ರ ಹೆಗ್ಗಡೆ ಕೊಕ್ರಾಡಿ, ಕೇಂದ್ರೀಯ ಸಮಿತಿ ಅಧ್ಯಕ್ಷ ಡಾ. ಅವಿನ್ ಬಿ.ಆರ್. ಆಳ್ವ ಹಾಗೂ ಪ್ರಧಾನ ಸಂಚಾಲಕ ವಿಶ್ವನಾಥ ಆಚಾರ್ಯ ಅವರು ಅಭಿನಂದಿಸಿ ಶುಭ ಹಾರೈಸಿದ್ದಾರೆ.

ನಿರ್ಮಲಾ ಸೀತಾರಾಮನ್‌ರಿಂದ ಡಾ. ರಾಮಕೃಷ್ಣ ಆಚಾರ್ ಜೀವನಗಾಥೆ ಅನಾವರಣ



ಗ್ರಾಮೀಣ ಪರಿಸರದಲ್ಲಿ ಬದುಕು ಆರಂಭಿಸಿ ಭತ್ತ ಸಂಸ್ಕರಣಾ ತಂತ್ರಜ್ಞಾನ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಮೂಡುಬಿದಿರೆಯ ಉದ್ಯಮಿ ಡಾ. ಜಿ. ರಾಮಕೃಷ್ಣ ಆಚಾರ್ ಅವರ ಸಾಧನೆಯ ಪಯಣವನ್ನು ಪರಿಚಯಿಸುವ 'Village Boy to Global Rice Techie' ಜೀವನಚರಿತ್ರೆ ಕೃತಿಯನ್ನು ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮುಂಬಯಿಯ ಐಟಿಸಿ ಗ್ರ್ಯಾಂಡ್ ಸೆಂಟ್ರಲ್‌ನಲ್ಲಿ ನಡೆದ ಸಮಾರಂಭದಲ್ಲಿ ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ನಿರ್ಮಲಾ ಸೀತಾರಾಮನ್ ಅವರು, ಕೃಷಿ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹೊಸ ಸಾಧ್ಯತೆಗಳನ್ನು ಅನ್ವೇಷಿಸುವವರಿಗೆ, ಉದ್ಯಮಶೀಲತೆಯ ಕನಸು ಕಾಣುವ ಯುವಜನತೆಗೆ ಹಾಗೂ ಸಾಧನೆಯ ಹಾದಿಯಲ್ಲಿ ಮುನ್ನಡೆಯುತ್ತಿರುವವರಿಗೆ ಈ ಕೃತಿ ಸ್ಫೂರ್ತಿದಾಯಕ ದಾಖಲೆಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಗ್ರಾಮೀಣ ಬದುಕಿನಿಂದ ಜಾಗತಿಕ ಉದ್ಯಮದವರೆಗೆ ಯಶಸ್ಸಿನ ಪಯಣ: 'Village Boy to Global Rice Techie' ಕೃತಿಯು ಸಾಮಾನ್ಯ ಗ್ರಾಮೀಣ ಹಿನ್ನೆಲೆಯಿಂದ ಉದ್ಯಮ ಕ್ಷೇತ್ರಕ್ಕೆ ಪ್ರವೇಶಿಸಿ, ಭತ್ತ ಸಂಸ್ಕರಣಾ ತಂತ್ರಜ್ಞಾನದಲ್ಲಿ ಜಾಗತಿಕ ಮನ್ನಣೆ ಗಳಿಸಿದ ಡಾ. ಜಿ. ರಾಮಕೃಷ್ಣ ಆಚಾರ್ ಅವರ ಅಸಾಧಾರಣ ಸಾಧನೆಯ ಪಯಣವನ್ನು ಅನಾವರಣಗೊಳಿಸುತ್ತದೆ. ಅವರ ಉದ್ಯಮಶೀಲತೆಯ ದೂರದೃಷ್ಟಿ, ತಾಂತ್ರಿಕ ಆವಿಷ್ಕಾರಗಳು, ವೃತ್ತಿಜೀವನದಲ್ಲಿ ಎದುರಿಸಿದ ಸವಾಲುಗಳು ಹಾಗೂ ಯಶಸ್ಸಿನ ಮೈಲಿಗಲ್ಲುಗಳನ್ನು ಈ ಕೃತಿ ಸಮಗ್ರವಾಗಿ ದಾಖಲಿಸಿದೆ.

ಯುವ ಉದ್ಯಮಿಗಳಿಗೆ ಪ್ರೇರಣೆಯಾಗುವ ಜೀವನಗಾಥೆ: ಸಾಮಾನ್ಯ ಗ್ರಾಮೀಣ ಪರಿಸರದಿಂದ ಬದುಕು ಆರಂಭಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಡಾ. ಆಚಾರ್ ಅವರ ಜೀವನವು ಪರಿಶ್ರಮ, ಛಲ, ಆತ್ಮವಿಶ್ವಾಸ ಮತ್ತು ದೂರದೃಷ್ಟಿಗೆ ಸಾಕ್ಷಿಯಾಗಿದೆ. ಪ್ರತಿಕೂಲ ಪರಿಸ್ಥಿತಿಗಳನ್ನು ಮೆಟ್ಟಿನಿಂತು ಸವಾಲುಗಳನ್ನೇ ಯಶಸ್ಸಿನ ಅವಕಾಶಗಳನ್ನಾಗಿ ಪರಿವರ್ತಿಸಿದ ಅವರ ಸಾಧನೆಯ ಹಾದಿ ಯುವ ಉದ್ಯಮಿಗಳಿಗೆ ಮಹತ್ವದ ಪ್ರೇರಣೆಯಾಗಿದೆ. ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನ ಅಳವಡಿಕೆ, ಹೊಸ ಆವಿಷ್ಕಾರಗಳು ಹಾಗೂ ಉದ್ಯಮಶೀಲತೆಯ ಮೂಲಕ ಜಾಗತಿಕ ಮಟ್ಟದಲ್ಲಿ ಸಾಧನೆ ಮಾಡಲು ಬಯಸುವವರಿಗೆ ಈ ಕೃತಿ ಮಾರ್ಗದರ್ಶಕವಾಗುವ ನಿರೀಕ್ಷೆಯಿದೆ. ಒಂದು ಸಾಮಾನ್ಯ ಹಳ್ಳಿಯಿಂದ ಆರಂಭವಾದ ಬದುಕಿನ ಪಯಣ ಜಾಗತಿಕ ಸಾಧನೆಯ ಮಟ್ಟಕ್ಕೆ ತಲುಪಿದ ಕಥೆಯನ್ನು ಸಾರುವ 'Village Boy to Global Rice Techie' ಕೃತಿ, ಪರಿಶ್ರಮ ಮತ್ತು ಸಾಧನೆಗೆ ಗ್ರಾಮೀಣ ಹಿನ್ನೆಲೆ ಎಂದಿಗೂ ಅಡ್ಡಿಯಾಗುವುದಿಲ್ಲ ಎಂಬ ಸಂದೇಶವನ್ನು ಸಾರುತ್ತದೆ.

ಭ್ರಷ್ಟಾಚಾರದ ವಿರುದ್ಧ SBI - ಲೋಕಾಯುಕ್ತ ಜಾಗೃತಿ ವಾಕಥಾನ್ ಕಾರ್ಯಕ್ರಮ

ಭ್ರಷ್ಟಾಚಾರದ ವಿರುದ್ಧ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಭಾರತೀಯ ಸ್ಟೇಟ್ ಬ್ಯಾಂಕ್ (SBI), ಮಂಗಳೂರು ಹಾಗೂ ಕರ್ನಾಟಕ ಲೋಕಾಯುಕ್ತ ಪೊಲೀಸ್ ಇಲಾಖೆ ಸಹಯೋಗದಲ್ಲಿ ಜಾಗೃತಿ ವಾಕಥಾನ್ ಕಾರ್ಯಕ್ರಮ ಆಯೋಜಿಸಲಾಯಿತು. ಭ್ರಷ್ಟಾಚಾರ ಜಾಗೃತಿ ಅರಿವು ಸಪ್ತಾಹ–2026ರ ಅಂಗವಾಗಿ ನಡೆದ ವಾಕಥಾನ್‌ಗೆ ಮಂಗಳೂರಿನ SBI ಕಚೇರಿಯಿಂದ ಚಾಲನೆ ನೀಡಲಾಯಿತು. ಮಂಗಳೂರು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರಾದ ಸುರೇಶ್ ಕುಮಾರ್ ಅವರು ಹಸಿರು ನಿಶಾನೆ ತೋರುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಎಸ್‌ಬಿಐ ಮಂಗಳೂರು ವಿಭಾಗದ ಉಪ ಪ್ರಧಾನ ವ್ಯವಸ್ಥಾಪಕ ಕೃಷ್ಣ ಮೋಹನ್, ಲೋಕಾಯುಕ್ತ ಪೊಲೀಸ್ ನಿರೀಕ್ಷಕಿ ಭಾರತಿ, SBI ವಿಜಿಲೆನ್ಸ್ ವಿಭಾಗದ ಉಪ ಪ್ರಧಾನ ವ್ಯವಸ್ಥಾಪಕ ಬಿ.ಎಂ.ಪಿ.ಎಲ್. ನಾರಾಯಣ ರಾವ್ ಸೇರಿದಂತೆ ಲೋಕಾಯುಕ್ತ ಸಿಬ್ಬಂದಿ, ಬ್ಯಾಂಕ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು. ವಾಕಥಾನ್ ಮೂಲಕ ಭ್ರಷ್ಟಾಚಾರ ತಡೆಗಟ್ಟುವಿಕೆ, ಪ್ರಾಮಾಣಿಕತೆ, ಪಾರದರ್ಶಕತೆ ಮತ್ತು ನೈತಿಕ ಮೌಲ್ಯಗಳ ಮಹತ್ವವನ್ನು ಸಾರ್ವಜನಿಕರಿಗೆ ಸಾರಲಾಯಿತು. ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣದಲ್ಲಿ ಪ್ರತಿಯೊಬ್ಬರೂ ಜವಾಬ್ದಾರಿಯುತವಾಗಿ ಪಾಲ್ಗೊಳ್ಳಬೇಕು ಎಂಬ ಸಂದೇಶವನ್ನು ಕಾರ್ಯಕ್ರಮ ನೀಡಿತು.

‘ಅವಳ ಶಾಲೆ ಬದಲಾಯಿಸಿದೆವು? ಆದರೆ ಅವಳ ನಗುವನ್ನೇ ಕಳೆದುಕೊಂಡೆವು!’

ಬಹಳ ಭಾರವಾದ ಹೃದಯದಿಂದ ಈ ಲೇಖನವನ್ನು ಬರೆಯುತಿದ್ದಿನಿ. ನಾವು ಪ್ರತಿ ದಿನ ಒಳ್ಳೆ ಅಪ್ಪ ಅಮ್ಮ ಆಗಲು ಪ್ರಯತ್ನ ಪಡುತೇವೆ. ಆದರೆ ನಮಗೆ ಸರಿ ಅನಿಸಿದ್ದುದನ್ನು ನಾವು ನಮ್ಮ ಮಕ್ಕಳ ಮೇಲೆ ಹೇರಿ ಬಿಡುತೇವೆ. ಇದನ್ನು ಹಳೆಯ ಕಾಲದ ಮನಸ್ಥಿತಿ ಅನ್ನಬಹುದೇನೋ! ಕೆಲವೊಮ್ಮೆ ನಮಗೆ ಸಲಹೆ ಕೊಡುವವರು ಕೂಡ ಹಾಗೆ ಇರುತ್ತಾರೆ! ಮಕ್ಕಳನ್ನು ಏನು ಕೇಳೋದು? ನಮ್ಮ ನಿರ್ಧಾರವನ್ನು ಅವರು ಪಾಲಿಸಬೇಕು. ಸರಿ ತಪ್ಪು ಅವರಿಗೇನು ಗೊತ್ತಿರುತ್ತೆ ಅನ್ನುವ ಮಾತು ಕೇಳಿ ಬರುತ್ತೆ. ಆದರೆ ನಾವು ಮರೆತು ಬಿಡುತೇವೆ ಕಾಲ ಬದಲಾಗಿದೆ ಅಂತ. ನಾವಿನ್ನು ಹಳೆಯ ಮನಸ್ಥಿತಿಯಲ್ಲಿದ್ದರೆ ಅದು ನಮ್ಮ ತಪ್ಪು. ಈಗಿನ ಮಕ್ಕಳು ತುಂಬಾ ಬುದ್ಧಿವಂತರು ಕಣ್ರೀ! ಅಗಾಧವಾದ ಬುದ್ಧಿಮತ್ತೆ ಅವರಲ್ಲಿದೆ. ಇದು ನನ್ನ ಪುಟ್ಟ ಮಗಳ ಕಥೆ. ನಮ್ಮ ಒಂದು ನಿರ್ಧಾರ ಇವತ್ತು ತಪ್ಪು ಅಂತ ಅನಿಸ್ಲಿಕ್ಕೆ ಶುರುವಾಗಿದೆ. ನನ್ನ ಹತ್ತು ವರ್ಷದ ಮಗಳಿಗೆ ಅವಳ ಶಾಲೆ ಅಂದ್ರೆ ಪಂಚ ಪ್ರಾಣ. ಮನೆಯಲ್ಲಿ ಕುಳಿತು ಕೊಳ್ಳೋದಂದ್ರೆ ಅವಳಿಗೆ ನೀರಸವಾದ ವಿಷಯ. ಅವಳು ಯಾವಾಗಲೂ ಖುಷಿಯಿಂದ, ಲವಲವಿಕೆಯಿಂದ ಇರುವ ಮಗು. ಯಾವುದೇ ವಯಸ್ಸಿನವರೊಂದಿಗೂ ಸುಲಭವಾಗಿ ಬೆರೆತು ಸ್ನೇಹ ಬೆಳೆಸಿಕೊಳ್ಳುವ ಸ್ವಭಾವ ಅವಳದ್ದು. ಶಾಲೆಯಲ್ಲಿಯೂ ತುಂಬಾ ಚಟುವಟಿಕೆಯಿಂದಿದ್ದು, ವಿವಿಧ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಾಳೆ. ಕಳೆದ ನಾಲ್ಕು ವರ್ಷಗಳಿಂದ ಸತತವಾಗಿ ಶಾಲೆಯಲ್ಲಿ ಪ್ರಥಮ ಸ್ಥಾನ ಪಡೆಯುತ್ತಾ ಬಂದಿದ್ದಾಳೆ. ಅವಳು ತನ್ನ ಶಾಲೆಯ ಪ್ರಾಂಶುಪಾಲರು ಸೇರಿದಂತೆ ಎಲ್ಲಾ ಶಿಕ್ಷಕರ ಅಚ್ಚುಮೆಚ್ಚಿನ ವಿದ್ಯಾರ್ಥಿನಿ.. ಶಾಲೆಯ ವಾರ್ಷಿಕೋತ್ಸವ ಸಮಾರಂಭಗಳಲ್ಲಿ ನಿರೂಪಕಿಯಾಗಿ ತನ್ನ ಅದ್ಭುತ ಮಾತುಗಾರಿಕೆ ಮತ್ತು ಆತ್ಮವಿಶ್ವಾಸದಿಂದ ಎಲ್ಲರ ಮೆಚ್ಚುಗೆ ಗಳಿಸಿದ್ದಾಳೆ. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳೆರಡರಲ್ಲೂ ಅದ್ಭುತವಾದ ಸಾಧನೆ ಮಾಡಿ, ಅನೇಕ ಪ್ರಶಸ್ತಿಗಳು, ಟ್ರೋಫಿಗಳು ಮತ್ತು ಗೌರವಗಳನ್ನು ತನ್ನದಾಗಿಸಿಕೊಂಡಿದ್ದಾಳೆ. ಇತರ ಸಹಪಾಠಿಗಳಿಗೆ ಅವಳು ಅಚ್ಚು ಮೆಚ್ಚು. ಪುಸ್ತಕದ ಬದನೇಕಾಯಿ ಖಂಡಿತ ಅಲ್ಲ. ಶಾಲೆಯಲ್ಲಿ ಕಲಿತದ್ದೇ ಸಾಕು ಅವಳಿಗೆ. ಮತ್ತೆ ಮತ್ತೆ ಓದಿ ಮನನ ಮಾಡೋ ಅಭ್ಯಾಸ ಅವಳಲ್ಲಿ ಇಲ್ಲವೇ ಇಲ್ಲ. ಅವಳೆಲ್ಲಿ ಇರುತ್ತಾಳೋ ಅಲ್ಲಿ ನಗುವಿಗೆ ಕೊರತೆ ಇಲ್ಲ.

ಆದರೆ ನಮ್ಮ ಒಂದು ನಿರ್ಧಾರ ಎಲ್ಲವನ್ನು ಬದಲಿಸಿಬಿಟ್ಟಿದೆ. ನಾನು ಈ ವಿಷಯವನ್ನು ಯಾಕೆ ಇಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ ಅಂದ್ರೆ ಎಷ್ಟೋ ಬಾರಿ ಮಕ್ಕಳಿಗೆ ಭಾವನೆ ಅನ್ನೋದು ಇರುತ್ತೆ ಅನ್ನೋದನ್ನು ನಾವು ಮರೆತು ಬಿಡುತೇವೆ. ಹಲವು ಕಾರಣಗಳಿಗಾಗಿ, ಅವಳ ಮುಂದಿನ ಭವ್ಯ ಭವಿಷ್ಯವನ್ನು ಮನದಲ್ಲಿಟ್ಟುಕೊಂಡು ಅವಳ ಶಾಲೆಯನ್ನು ಬದಲಾಯಿಸಿದ್ವಿ. ಅವಳಿಗೆ ಆ ಶಾಲೆಯನ್ನು ಬಿಟ್ಟು ಬೇರೆ ಶಾಲೆಗೆ ಹೋಗಲು ಸ್ವಲ್ಪವೂ ಇಷ್ಟವಿರಲಿಲ್ಲ. ಆದರೆ ಹೇಗೋ ನಾವು ಅವಳ ಮನವೊಲಿಸಿ, ಹೊಸ ಶಾಲೆಗೆ ಸೇರಲು ಒಪ್ಪಿಸುವಲ್ಲಿ ಯಶಸ್ವಿಯಾದೆವು.

ಆದರೆ ಅವಳಿಗೆ ತನ್ನ ಹಿಂದಿನ ಶಾಲೆಯೊಂದಿಗೆ ಎಷ್ಟೊಂದು ಆಳವಾದ ಭಾವನಾತ್ಮಕ ಬಾಂಧವ್ಯವಿತ್ತು ಎಂಬುದನ್ನು ಅರ್ಥಮಾಡಿಕೊಳ್ಳುವಲ್ಲಿ ನಾವು ವಿಫಲರಾದೆವು. ಆ ಶಾಲೆಯಲ್ಲಿ ಅವಳು ನಿಜಕ್ಕೂ ರಾಣಿಯಂತೆ ಇದ್ದಳು. ಅಲ್ಲಿನ ಪ್ರತಿಯೊಬ್ಬರಿಗೂ ಅವಳ ಹೆಸರು ತಿಳಿದಿತ್ತು. ಶಿಕ್ಷಕರು, ವಿದ್ಯಾರ್ಥಿಗಳು ಎಲ್ಲರಿಗೂ ಅವಳು ಚಿರಪರಿಚಿತಳಾಗಿದ್ದಳು. ಶಾಲೆಯಲ್ಲಿ ಅವಳಿಗೆ ವಿಶೇಷವಾದ ಗುರುತಿಸುವಿಕೆ ಮತ್ತು ಗೌರವವಿತ್ತು.

ಅವಳು ಕೇವಲ ಓದು, ಪರೀಕ್ಷೆಗಳಿಗೆ ಮಾತ್ರ ಸೀಮಿತವಾಗಿರುವ ಸಾಮಾನ್ಯ ವಿದ್ಯಾರ್ಥಿನಿಯಲ್ಲ. ಅವಳಿಗೆ ಯಾವಾಗಲೂ ನಾಯಕತ್ವದ ಜವಾಬ್ದಾರಿಗಳನ್ನು ವಹಿಸಿಕೊಳ್ಳಬೇಕು ಎಂಬ ಆಸೆ. ತರಗತಿಯ ಮಾನಿಟರ್ ಆಗಬೇಕು, ಹೆಡ್ ಗರ್ಲ್ ಆಗಬೇಕು, ವಿದ್ಯಾರ್ಥಿ ಪರಿಷತ್ತಿನಲ್ಲಿ ಸ್ಥಾನ ಪಡೆಯಬೇಕು, ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು, ಶಾಲೆಯ ಪ್ರತಿಯೊಂದು ಚಟುವಟಿಕೆಯಲ್ಲೂ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂಬುದು ಅವಳ ಕನಸು.

ಆದರೆ ಹೊಸ ಶಾಲೆಯಲ್ಲಿ ಅವಳು ಎಲ್ಲರಿಗೂ ಅಪರಿಚಿತಳು. ಅವಳ ಪ್ರತಿಭೆ, ಸಾಮರ್ಥ್ಯ, ಹಿಂದಿನ ಸಾಧನೆಗಳು ಹಾಗೂ ನಾಯಕತ್ವದ ಗುಣಗಳ ಬಗ್ಗೆ ಅಲ್ಲಿನ ಶಿಕ್ಷಕರಿಗೆ ಇನ್ನೂ ಸರಿಯಾಗಿ ತಿಳಿದಿಲ್ಲ.

ಇದರಿಂದಾಗಿ ಅವಳು ಪ್ರತಿದಿನ ಅಳಲು ಪ್ರಾರಂಭಿಸಿದಳು.

"ನನಗೆ ಈ ಶಾಲೆ ಬೇಡ. ನಾನು ನನ್ನ ಹಳೆಯ ಶಾಲೆಗೇ ವಾಪಸ್ ಹೋಗಬೇಕು" ಎಂದು ಪದೇ ಪದೇ ಹೇಳತೊಡಗಿದಳು. ಅಷ್ಟೇ ಅಲ್ಲ, ಹೊಸ ಶಾಲೆಯನ್ನು ತನ್ನ ಹಿಂದಿನ ಶಾಲೆಯೊಂದಿಗೆ ಹೋಲಿಸಲು ಪ್ರಾರಂಭಿಸಿದಳು. ನನ್ನ ಹಳೆಯ ಶಾಲೆಯಲ್ಲಿ ಹೀಗಿರಲಿಲ್ಲ. ಅಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ತಮ್ಮ ಪ್ರತಿಭೆಯನ್ನು ತೋರಿಸಲು ಅವಕಾಶ ಕೊಡುತ್ತಿದ್ದರು. ಎಲ್ಲರನ್ನೂ ಪ್ರೋತ್ಸಾಹಿಸುತ್ತಿದ್ದರು. ಆದರೆ ಇಲ್ಲಿ ಕೆಲವೇ ವಿದ್ಯಾರ್ಥಿಗಳಿಗೆ ಅವಕಾಶ ಸಿಗುತ್ತದೆ. ಇದು ಸರಿಯಲ್ಲ, ಇದು ನ್ಯಾಯವಲ್ಲ" ಎಂದು ತನ್ನ ಅಸಮಾಧಾನವನ್ನು ವ್ಯಕ್ತಪಡಿಸತೊಡಗಿದಳು.

ಒಂದು ಕಾಲದಲ್ಲಿ ಶಾಲೆಗೆ ಹೋಗುವುದೆಂದರೆ ಅಪಾರ ಸಂತೋಷಪಡುತ್ತಿದ್ದ, ಎಲ್ಲರೊಂದಿಗೆ ಬೆರೆತು ನಗುನಗುತ್ತಾ ಇರುತ್ತಿದ್ದ ನಮ್ಮ ಮಗಳು, ಈಗ ಪ್ರತಿದಿನ ತನ್ನ ಹಳೆಯ ಶಾಲೆಯನ್ನು ನೆನಪಿಸಿಕೊಂಡು ಕಣ್ಣೀರು ಹಾಕುತ್ತಿರುವುದನ್ನು ನೋಡುವುದು ಪೋಷಕರಾದ ನಮಗೆ ತುಂಬಾ ನೋವಿನ ಸಂಗತಿಯಾಗಿದೆ.ಬಹುಶಃ ನಾವು ಶಾಲೆಯನ್ನು ಬದಲಾಯಿಸುವಾಗ ಅವಳ ವಿದ್ಯಾಭ್ಯಾಸ ಮತ್ತು ಭವಿಷ್ಯದ ಬಗ್ಗೆ ಯೋಚಿಸಿದೆವೇ ಹೊರತು, ಆ ಶಾಲೆಯೊಂದಿಗೆ ಅವಳು ಬೆಳೆಸಿಕೊಂಡಿದ್ದ ಆತ್ಮೀಯ ಸಂಬಂಧ, ಅವಳಿಗೆ ದೊರೆಯುತ್ತಿದ್ದ ಮನ್ನಣೆ, ನಾಯಕತ್ವದ ಅವಕಾಶಗಳು ಮತ್ತು ಅವಳ ಮನಸ್ಸಿನ ಭಾವನೆಗಳಿಗೆ ಎಷ್ಟು ಮಹತ್ವವಿದೆ ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಂಡಿರಲಿಲ್ಲ.



ಈಗ ಅವಳು ನಗುವುದನ್ನೇ ಮರೆತಂತಾಗಿದೆ. ಹಿಂದೆ ಯಾವಾಗಲೂ ನಗುನಗುತ್ತಾ, ಲವಲವಿಕೆಯಿಂದ ಇರುತ್ತಿದ್ದ ನಮ್ಮ ಮಗಳು ಈಗ ಯಾವುದೋ ಐಎಎಸ್‌ನಂತಹ ದೊಡ್ಡ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿರುವಂತೆ ಸದಾ ಪುಸ್ತಕಗಳಲ್ಲೇ ಮುಳುಗಿರುತ್ತಾಳೆ. ಓದಿನ ಹೊರತಾಗಿ ಬೇರೆ ಯಾವುದರಲ್ಲೂ ಆಸಕ್ತಿ ತೋರಿಸುತ್ತಿಲ್ಲ. ಯಾಕೆ ಇಷ್ಟೊಂದು ಓದುತ್ತೀಯಾ? ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ಸಂತೋಷವಾಗಿರು" ಎಂದು ನಾವು ಕೇಳಿದಾಗ, ಅವಳು ನೀಡುವ ಉತ್ತರ ನಮ್ಮ ಮನಸ್ಸಿಗೆ ತುಂಬಾ ನೋವುಂಟುಮಾಡುತ್ತದೆ.

"ನಾನು ಒಳ್ಳೆಯ ಅಂಕಗಳನ್ನು ಗಳಿಸಿದರೆ ಮಾತ್ರ ಈ ಶಾಲೆಯಲ್ಲಿ ನನ್ನನ್ನು ಗುರುತಿಸುತ್ತಾರೆ. ಆಗ ಮಾತ್ರ ಶಿಕ್ಷಕರಿಗೆ ನನ್ನ ಸಾಮರ್ಥ್ಯ ಗೊತ್ತಾಗುತ್ತದೆ" ಎಂದು ಹೇಳುತ್ತಾಳೆ. ಅವಳ ಈ ಮಾತು ಕೇಳಿದಾಗ, ತನ್ನನ್ನು ತಾನು ಸಾಬೀತುಪಡಿಸಿಕೊಳ್ಳಲು ಅವಳು ಎಷ್ಟೊಂದು ಮಾನಸಿಕ ಒತ್ತಡವನ್ನು ಅನುಭವಿಸುತ್ತಿದ್ದಾಳೆ ಎಂಬುದು ನಮಗೆ ಅರ್ಥವಾಗುತ್ತದೆ.

ಇದರ ಜೊತೆಗೆ, ಆ ಶಾಲೆಯಲ್ಲಿ ಮೊದಲಿನಿಂದಲೂ ಓದುತ್ತಿರುವ ಕೆಲವು ವಿದ್ಯಾರ್ಥಿಗಳು ಅವಳ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಕಂಡು ಅಸೂಯೆಪಡುತ್ತಿರುವಂತೆ ನಮಗೆ ಅನಿಸುತ್ತದೆ. ಕೆಲವರು ಅವಳನ್ನು ಹೀಯಾಳಿಸುವುದು, ಕೀಟಲೆ ಮಾಡುವುದು ಹಾಗೂ ಬೆದರಿಸುವಂತಹ ವರ್ತನೆಗಳನ್ನು ತೋರಿಸಲು ಪ್ರಾರಂಭಿಸಿದ್ದಾರೆ.ಹೊಸ ಶಾಲೆಯಲ್ಲಿ ಸ್ನೇಹಿತರನ್ನು ಮಾಡಿಕೊಂಡು, ಎಲ್ಲರೊಂದಿಗೆ ಬೆರೆತು ಸಂತೋಷದಿಂದ ಇರಬೇಕಾದ ನಮ್ಮ ಮಗಳು, ಈಗ ತನ್ನ ಪ್ರತಿಭೆಯನ್ನು ಸಾಬೀತುಪಡಿಸಿಕೊಳ್ಳುವ ಒತ್ತಡದ ಜೊತೆಗೆ ಇಂತಹ ಅಹಿತಕರ ಅನುಭವಗಳನ್ನೂ ಎದುರಿಸುತ್ತಿದ್ದಾಳೆ.

ನಮಗೆ ನಮ್ಮ ಮಗಳು ಶಾಲೆಯಲ್ಲಿ ಪ್ರಥಮ ಸ್ಥಾನ ಪಡೆಯಬೇಕು, ಹೆಡ್ ಗರ್ಲ್ ಆಗಬೇಕು ಅಥವಾ ಪ್ರತಿಯೊಂದು ಸ್ಪರ್ಧೆಯಲ್ಲೂ ಗೆಲ್ಲಬೇಕು ಎಂಬ ಹಠವಿಲ್ಲ. ಅವಳು ಮೊದಲಿನಂತೆ ನಗುನಗುತ್ತಾ, ಆತ್ಮವಿಶ್ವಾಸದಿಂದ, ಸಂತೋಷವಾಗಿ ಶಾಲೆಗೆ ಹೋಗಬೇಕು ಎಂಬುದಷ್ಟೇ ನಮ್ಮ ದೊಡ್ಡ ಆಸೆ.ಅವಳಿಗೆ ಬೇಕಾಗಿರುವುದು ವಿಶೇಷವಾದ ಸೌಲಭ್ಯಗಳಲ್ಲ. ತನ್ನ ಪ್ರತಿಭೆಯನ್ನು ಪ್ರದರ್ಶಿಸಲು ಒಂದು ನ್ಯಾಯಯುತ ಅವಕಾಶ, ಶಿಕ್ಷಕರಿಂದ ಸ್ವಲ್ಪ ಪ್ರೋತ್ಸಾಹ, ಸಹಪಾಠಿಗಳಿಂದ ಸ್ನೇಹ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ, ತಾನೂ ಈ ಶಾಲೆಯ ಒಂದು ಭಾಗ ಎಂಬ ಆತ್ಮೀಯ ಭಾವನೆ.

ಆದರೆ ನಮ್ಮ ಮಗಳು ಮಾನಸಿಕವಾಗಿ ತುಂಬಾ ಗಟ್ಟಿಗಿತ್ತಿ. ಇತರರು ಮಾಡುವ ಕೀಟಲೆ, ಹೀಯಾಳಿಕೆ ಅಥವಾ ಬೆದರಿಕೆಗಳಿಗೆ ಸುಲಭವಾಗಿ ಹೆದರುವ ಹುಡುಗಿ ಅವಳಲ್ಲ. ಇಂತಹ ಸಂದರ್ಭಗಳನ್ನು ಧೈರ್ಯದಿಂದ ಎದುರಿಸುವ ಸಾಮರ್ಥ್ಯ ಅವಳಿಗಿದೆ.ಆದರೂ, ಅವಳು ಮೊದಲಿನಂತಿಲ್ಲ ಎಂಬುದು ನಮಗೆ ಸ್ಪಷ್ಟವಾಗಿ ಕಾಣಿಸುತ್ತಿದೆ.

ಅವಳ ಮುಖದಲ್ಲಿದ್ದ ಆ ಸುಂದರ ನಗು ಈಗ ಕಾಣುತ್ತಿಲ್ಲ. ಅವಳ ಸಹಜವಾದ ಲವಲವಿಕೆ, ಉತ್ಸಾಹ ಮತ್ತು ಸಂತೋಷ ಎಲ್ಲೋ ಕಳೆದುಹೋದಂತಿದೆ.ಹಿಂದೆ ವಾರಾಂತ್ಯ ಬಂದರೆ ಸಾಕು, ಇಡೀ ದಿನ ಸ್ಕೇಟಿಂಗ್ ಮಾಡುತ್ತಾ ಸಂತೋಷದಿಂದ ಕಾಲ ಕಳೆಯುತ್ತಿದ್ದಳು. ಸ್ಕೇಟಿಂಗ್ ಅವಳ ನೆಚ್ಚಿನ ಹವ್ಯಾಸಗಳಲ್ಲಿ ಒಂದಾಗಿತ್ತು. ಆದರೆ ಈಗ ವಾರಾಂತ್ಯದಲ್ಲಿಯೂ ಪುಸ್ತಕಗಳನ್ನು ಹಿಡಿದು ಓದುತ್ತಲೇ ಇರುತ್ತಾಳೆ. ಆಟ, ಮನರಂಜನೆ ಮತ್ತು ತನ್ನ ನೆಚ್ಚಿನ ಹವ್ಯಾಸಗಳಿಗಿಂತ ಓದಿಗೇ ಹೆಚ್ಚಿನ ಸಮಯ ಮೀಸಲಿಡುತ್ತಿದ್ದಾಳೆ.

ಓದಿನಲ್ಲಿ ಆಸಕ್ತಿ ತೋರಿಸುವುದು ಒಳ್ಳೆಯ ವಿಷಯವೇ. ಆದರೆ ತನ್ನನ್ನು ಇತರರು ಗುರುತಿಸಬೇಕು, ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಬೇಕು ಎಂಬ ಒತ್ತಡದಿಂದ ಅವಳು ತನ್ನ ಬಾಲ್ಯದ ಸಂತೋಷವನ್ನೇ ಕಳೆದುಕೊಳ್ಳುತ್ತಿರುವಳೇ ಎಂಬ ಆತಂಕ ನಮ್ಮನ್ನು ಕಾಡುತ್ತಿದೆ. ಪೋಷಕರಾಗಿ ನಾವು ಅವಳ ಪ್ರತಿಯೊಂದು ಬದಲಾವಣೆಯನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ಅವಳೊಂದಿಗೆ ಹೆಚ್ಚು ಸಮಯ ಕಳೆಯಲು, ಅವಳ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವಳಿಗೆ ಅಗತ್ಯವಾದ ಪ್ರೀತಿ, ಧೈರ್ಯ ಹಾಗೂ ಬೆಂಬಲ ನೀಡಲು ನಮ್ಮಿಂದಾದ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದೇವೆ.

ಆದರೆ ಇದೇ ಪರಿಸ್ಥಿತಿ ಮುಂದುವರಿದರೆ, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಅವಳನ್ನು ಮತ್ತೆ ಅವಳ ನೆಚ್ಚಿನ ಹಳೆಯ ಶಾಲೆಗೆ ಸೇರಿಸಲು ನಾವು ಖಂಡಿತವಾಗಿಯೂ ಯೋಚಿಸುತ್ತೇವೆ. ಏಕೆಂದರೆ ನಮಗೆ ಅವಳ ಅಂಕಗಳಿಗಿಂತ, ಪ್ರಶಸ್ತಿಗಳಿಗಿಂತ ಮತ್ತು ಸಾಧನೆಗಳಿಗಿಂತ ಅವಳ ಸಂತೋಷ, ಆತ್ಮವಿಶ್ವಾಸ ಮತ್ತು ಮಾನಸಿಕ ನೆಮ್ಮದಿಯೇ ಹೆಚ್ಚು ಮುಖ್ಯ. ಈ ಇಡೀ ಅನುಭವ ಪೋಷಕರಾದ ನಮಗೆ ಒಂದು ಬಹುದೊಡ್ಡ ಜೀವನಪಾಠ ಕಲಿಸಿದೆ.

ಮಕ್ಕಳು ಚಿಕ್ಕವರು ಎಂಬ ಕಾರಣಕ್ಕೆ ಅವರ ಭಾವನೆಗಳೂ ಚಿಕ್ಕವು ಎಂದು ಭಾವಿಸಬಾರದು. ನಾವು ಪೋಷಕರು ಎಂಬ ಕಾರಣಕ್ಕೆ ಮಕ್ಕಳ ಭವಿಷ್ಯದ ಬಗ್ಗೆ ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರವೂ ಸರಿಯಾಗಿರುತ್ತದೆ ಎಂದೇನಿಲ್ಲ. ಕೆಲವೊಮ್ಮೆ ಅವರ ಒಳ್ಳೆಯದಕ್ಕಾಗಿ ನಾವು ತೆಗೆದುಕೊಳ್ಳುವ ನಿರ್ಧಾರಗಳೇ ಅವರಿಗೆ ನೋವುಂಟುಮಾಡಬಹುದು. ಮಕ್ಕಳಿಗೆ ಯಾವುದು ಒಳ್ಳೆಯದು ಎಂಬುದನ್ನು ನಿರ್ಧರಿಸುವ ಮೊದಲು, ಅವರಿಗೆ ಏನು ಬೇಕು, ಅವರು ಏನು ಯೋಚಿಸುತ್ತಿದ್ದಾರೆ, ಯಾವುದರಲ್ಲಿ ಸಂತೋಷ ಕಾಣುತ್ತಿದ್ದಾರೆ ಎಂಬುದನ್ನೂ ಅರ್ಥಮಾಡಿಕೊಳ್ಳಬೇಕು. ಮಕ್ಕಳ ಭವಿಷ್ಯವನ್ನು ರೂಪಿಸುವ ಜವಾಬ್ದಾರಿ ನಮ್ಮದಾಗಿರಬಹುದು. ಆದರೆ ಆ ಭವಿಷ್ಯದಲ್ಲಿ ಬದುಕಬೇಕಾದವರು ಅವರೇ ಎಂಬುದನ್ನು ನಾವು ಮರೆಯಬಾರದು. ಎಲ್ಲಕ್ಕಿಂತ ಮುಖ್ಯವಾಗಿ, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದು ಮಾತ್ರ ಪೋಷಕರ ಕರ್ತವ್ಯವಲ್ಲ. ಅವರ ಬಾಲ್ಯದ ಸಂತೋಷವನ್ನು ಕಾಪಾಡುವುದು ಕೂಡ ಅಷ್ಟೇ ದೊಡ್ಡ ಜವಾಬ್ದಾರಿ.

ಒಂದು ಶಾಲೆಯನ್ನು ಬದಲಾಯಿಸುವುದು ಸುಲಭ. ಆದರೆ ಆ ಶಾಲೆಯೊಂದಿಗೆ ಮಗುವಿನ ಮನಸ್ಸು ಬೆಳೆಸಿಕೊಂಡಿರುವ ಭಾವನಾತ್ಮಕ ಸಂಬಂಧವನ್ನು ಬದಲಾಯಿಸುವುದು ಅಷ್ಟು ಸುಲಭವಲ್ಲ. ಇಂದು ನಮ್ಮ ಮಗಳ ಅನುಭವದಿಂದ ನಾವು ಕಲಿತ ಅತ್ಯಂತ ದೊಡ್ಡ ಪಾಠ ಒಂದೇ: ಮಕ್ಕಳ ಭಾವನೆಗಳಿಗೆ ಗೌರವ ಕೊಡಿ. ಅವರ ಮಾತುಗಳನ್ನು ಆಲಿಸಿ. ಏಕೆಂದರೆ ಮಕ್ಕಳಿಗೂ ಅವರದೇ ಆದ ಪುಟ್ಟ ಪ್ರಪಂಚವಿದೆ. ಆ ಪ್ರಪಂಚದಲ್ಲಿ ಅವರ ಸಂತೋಷ, ಸ್ನೇಹ, ಕನಸುಗಳು ಮತ್ತು ಭಾವನೆಗಳಿಗೆ ಅಪಾರವಾದ ಮಹತ್ವವಿದೆ.




ಪ್ರಕಾಶ್ ಮಲೆಬೆಟ್ಟು



ನಾ ಓದಿದ ಪುಸ್ತಕ

ಮೂರು ತಲೆಮಾರು





ಲೇ: ಗಿರಿಮನೆ ಶ್ಯಾಮರಾವ್
ಪ್ರ: ಗಿರಿಮನೆ ಪ್ರಕಾಶನ, ಸಕಲೇಶಪುರ, ಹಾಸನ
ಬೆಲೆ: ರೂ. 250.00

‘ಮಲೆನಾಡಿನ ರೋಚಕ ಕತೆಗಳು’ ಸರಣಿಯ 14ನೇ ಪುಸ್ತಕ –‘ಮೂರು ತಲೆಮಾರು’. ಎಂದಿನಂತೆ ಲೇಖಕರಾದ ಗಿರಿಮನೆ ಶ್ಯಾಮರಾಯರು ಹೊಸ ಕತೆಯೊಂದನ್ನು ಮಲೆನಾಡಿನ ಸುಂದರ ಪರಿಸರದ ಹಿನ್ನಲೆಯಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಈ ಕಾದಂಬರಿಯಲ್ಲಿ ಬರುವ ಪ್ರಮುಖ ಪಾತ್ರ ಕಾವೇರಿ ಎನ್ನುವ ಅಡುಗೆ ಕೆಲಸ ಮಾಡುವ ಮಹಿಳೆ. ಇಲ್ಲಿ ಆಕೆಯ ಮೂರು ತಲೆಮಾರಿನ ನೆನಪುಗಳನ್ನು ಬಹಳ ಸೊಗಸಾಗಿ ವರ್ಣನೆ ಮಾಡಿದ್ದಾರೆ. ಆಕೆಯ ಬಾಲ್ಯದ ಕಷ್ಟದ ದಿನಗಳು, ಸಣ್ಣ ಪ್ರಾಯದಲ್ಲಾದ ಮದುವೆ ನಂತರ ಮಗು, ಸಣ್ಣ ಪ್ರಾಯದಲ್ಲೇ ವಿಧವಾ ಯೋಗ, ಬೇರೆಯವರ ಮನೆಯಲ್ಲಿ ಅಡಿಗೆಯಾಳಾಗಿ ದುಡಿಮೆ' ಹೀಗೆ ಕಷ್ಟದ ದಿನಗಳನ್ನೇ ಕಂಡ ಕಾವೇರಿ ನಂತರ ಸ್ವ ಸಾಮರ್ಥ್ಯದಿಂದ ತನ್ನ ಮಗನನ್ನು ಬೆಳೆಸುತ್ತಾಳೆ. ಉತ್ತಮ ವಿದ್ಯಾಭ್ಯಾಸ ಪಡೆದು ಬೆಳೆದು ನಿಂತು ಉತ್ತಮ ಕೆಲಸವನ್ನು ಸಂಪಾದಿಸಿದ ಮಗನಿಂದಾದರೂ ನೆಮ್ಮದಿಯ ಬಾಳು ಪಡೆಯುತ್ತಾಳೆ ಎಂದು ಊಹಿಸಿದರೆ ಅದೂ ತಪ್ಪಾಗುತ್ತದೆ. ಮಗ ತನ್ನವನೇ ಆದರೂ ಬಂದ ಸೊಸೆ ತನ್ನನ್ನು ಅಮ್ಮನಂತೆ ಆದರಿಸದೇ ಇದ್ದಾಗ ಮೌನವಾಗಿ ಅಲ್ಲಿಂದ ಹೊರಬರುತ್ತಾಳೆ. ಮಗನ ಮಗಳು ಅಂದರೆ ಮೊಮ್ಮಗಳ ಪ್ರೀತಿಯನ್ನು ಗಳಿಸಲೂ ಸೊಸೆ ಬಿಡುವುದಿಲ್ಲ. ತನ್ನಷ್ಟಕ್ಕೇ ನಿರ್ಲಿಪ್ತವಾಗಿ ಬದುಕುವ ಕಾವೇರಿಗೆ ನೋವು, ಸಂಕಟ, ದುಃಖ ಯಾವುದೂ ಹೊಸತ್ತಾಗಿರುವುದಿಲ್ಲ. ನೊಂದ ಜೀವಕ್ಕೆ ಮತ್ತೊಂದು ಹೊಡೆತ ಎಂಬಂತೆ ಕಾವೇರಿಯ ಪ್ರೀತಿಯ ಮೊಮ್ಮಗಳು ಚೈತ್ರ ತಾನು ಪ್ರೀತಿಸಿದ ಅನ್ಯ ಧರ್ಮೀಯ ಯುವಕನನ್ನು ಮದುವೆಯಾಗಿ ಮನೆಯಿಂದ ಹೊರಗೆ ಬರುತ್ತಾಳೆ. ಆದರೆ ಆಕೆ ಮದುವೆಯಾದ ಮುಸ್ಲಿಂ ಮನೆಯ ಆಚಾರ ವಿಚಾರಗಳಿಂದ ವಿಚಲಿತಳಾಗಿ, ಅಲ್ಲಿ ಬಾಳು ಸಾಧ್ಯವಿಲ್ಲವೆಂದು ತಿಳಿದು ಆ ಯುವಕನಿಂದ ಡೈವೋರ್ಸ್ ಪಡೆದುಕೊಂಡು ಅಮೇರಿಕ ಹೋಗುತ್ತಾಳೆ. ಆರು ವರ್ಷಗಳ ನಂತರ ಹಿಂದೆ ಮರಳಿ ಬಂದಾಗ ಆಕೆಗೆ ಇದ್ದ ಒಂದೇ ನಂಬಿಕೆ ಎಂದರೆ ಅಪ್ಪ ಅಮ್ಮ ನನ್ನನ್ನು ಮನೆಯೊಳಗೆ ಕರೆಯದಿದ್ದರೂ ಅಜ್ಜಿ ಕರೆಯುತ್ತಾಳೆ ಎಂದು.

ತಮ್ಮ ‘ಮೂರು ತಲೆಮಾರು’ ಕಾದಂಬರಿಯ ಬಗ್ಗೆ ಮುನ್ನುಡಿಯಲ್ಲಿ ಗಿರಿಮನೆ ಶ್ಯಾಮರಾಯರು ಬಹಳ ಚೆನ್ನಾಗಿ ಬರೆದಿದ್ದಾರೆ. ಅವರು ಬರೆಯುತ್ತಾರೆ ‘ತಲೆಮಾರು ಎಂದರೆ ಒಬ್ಬ ವ್ಯಕ್ತಿಯ ಜೀವಿತಾವಧಿಯ ಅಳತೆಗೋಲಲ್ಲ. ಒಂದು ಪೀಳಿಗೆ ಅಷ್ಟೆ ಸುಮಾರು ಒಂದೇ ವಯಸ್ಸಿನವರು ತಮ್ಮ ಮೂವತ್ತು ವರ್ಷದ ಆಸುಪಾಸಿನಲ್ಲಿ ಮಕ್ಕಳಿಗೆ ಜನ್ಮ ನೀಡಿದರೆ ನಂತರದ ಕಾಲವನ್ನು ಅವರ ಮಕ್ಕಳ ಪೀಳಿಗೆ ಎಂದು ಕರೆಯಬೇಕಾಗುತ್ತದೆ. ಒಬ್ಬ ವ್ಯಕ್ತಿ ತೊಂಭತ್ತು ವರ್ಷ ಬದುಕಿದರೆ ಅವನು ತನ್ನದೂ ಸೇರಿ ಮೂರು ತಲೆಮಾರನ್ನು ಕಂಡಿರುತ್ತಾನೆ. ಅದನ್ನೇ ಇಂಗ್ಲೀಷಿನಲ್ಲಿ ಜನರೇಷನ್ ಎನ್ನುವುದು. ಬದಲಾವಣೆಗಳನ್ನು ನೋಡುತ್ತಾ ವ್ಯಕ್ತಿ ಆಯಾಕಾಲಕ್ಕೆ ಹೊಂದಿಕೊಂಡರೆ ಪ್ರಬುದ್ಧತೆ ಮೂಡುತ್ತದೆ. ಅದಿಲ್ಲದೆ ಹೋದರೆ ತನ್ನ ಬದುಕಿನ ಕೊನೆಗಾಗುವಾಗ ತಾನೆಲ್ಲಿ ನಿಂತಿರುತ್ತಾನೋ ಅಲ್ಲೇ ಇದ್ದು ‘ಜನರೇಷನ್ ಗ್ಯಾಪ್’ ನಿರ್ಮಾಣವಾಗಿರುತ್ತದೆ. ಆಯಾಕಾಲಕ್ಕೆ ಹೊಂದಿಕೊಂಡರೆ ಗ್ಯಾಪ್ ಕಾಣಿಸದೆ ವ್ಯತ್ಯಾಸದೊಂದಿಗೇ ಮಿಳಿತವಾಗಿ ಬದುಕು ಸಾಗುತ್ತದೆ. ಅದಕ್ಕೆ ನಮ್ಮ ಸುತ್ತಲಿನ ವಾತಾವರಣ, ನಮಗೆ ಸಿಕ್ಕಿದ ಬದುಕು, ತಿಳಿಯಬೇಕೆಂಬ ನಮ್ಮ ಹಂಬಲ, ಅನಿವಾರ್ಯತೆ ಎಲ್ಲವೂ ಕಾರಣವಾಗಿರುತ್ತದೆ.

ಏರಿಳಿತಗಳ ಬದುಕು ನಮ್ಮದು. ಯಾರಿಗೆ, ಯಾವಾಗ ಏನಾಗುತ್ತದೋ ಎಂದು ಯಾವ ಜ್ಯೋತಿಷಿಗೂ ಹೇಳಲು ಸಾಧ್ಯವಿಲ್ಲ. ನಮಗೆ ಸಿಕ್ಕಿದ ಬದುಕನ್ನು ಹೇಗೆ ಸುಂದರವಾಗಿಸಬಹುದು ಎನ್ನುವುದನ್ನೇ ನಾವು ನೋಡಬೇಕಾದ್ದು. 1973–74ರಲ್ಲಿ ಸರಕಾರ "ಉಳುವವನಿಗೇ ಭೂಮಿ' ಎಂಬ ಕಾನೂನು ಜಾರಿಗೆ ತಂದಾಗ ಬಹಳಷ್ಟು ಜನರ ಬದುಕು ಏರುಪೇರಾದವು. ಅದರ ಪರಿಣಾಮ ದ.ಕನ್ನಡದಲ್ಲೇ ಹೆಚ್ಚು. ಆಗೆಲ್ಲಾ ಅಲ್ಲಿ ಸಾವಿರ, ಒಂದೂವರೆ ಸಾವಿರ ಎಕರೆಯವರೆಗೆ ಕೆಲವೇ ಜಮೀನ್ದಾರರ ಒಡೆತನವಿತ್ತು. ಭತ್ತದ ಬೆಳೆಯೇ ಪ್ರಧಾನ.

ಕೆ.ಜಿ.ಲೆಕ್ಕ ಬರುವ ಮೊದಲು ಮುಡಿಲೆಕ್ಕದಲ್ಲಿ ಭತ್ತವನ್ನು ಅಳತೆ ಮಾಡಲಾಗುತ್ತಿತ್ತು. ಒಂದು ಮಟ್ಟಿಗೆ ಅದು ಆಗ ದ.ಕನ್ನಡದಲ್ಲಿ ನಡೆದ ಕ್ರಾಂತಿಯೇ. ಅಲ್ಲಿದ್ದ ದೊಡ್ಡ ಜಮೀನ್ದಾರಿಕೆ ಕೊನೆಗೊಂಡು ಜಮೀನು, ಗೇಣಿದಾರರಿಗೂ ಹಂಚಿಕೆಯಾಗಿ ದುರ್ಲಭವಾದ ಜಮೀನಿನ ಒಡೆತನ ಉಳುವವನಿಗೆ ಸುಲಭವಾಗಿ ಒದಗಿ ಬಂತು. ಆಕಾಶದಲ್ಲಿದ್ದವರು ತಳ ಸೇರಿದಾಗ ತಮಗಿನ್ನು ಬದುಕೇ ಇಲ್ಲ ಎಂದು ಕೆಲವರು ತಪ್ಪಾಗಿ ಭಾವಿಸಿದರೆ ಮತ್ತೆ ಕೆಲವರು ಹೊಸ ಬದುಕಿಗೆ ತಮ್ಮನ್ನು ತಾವು ತೆರೆದುಕೊಂಡರು. ಒಂದು ಮಟ್ಟಕ್ಕೆ ಸಮಾನತೆ ಎಲ್ಲರ ಮನಸ್ಸಿನಲ್ಲೂ ಮೂಡತೊಡಗಿ ಅಲ್ಲಿಂದ ಮುಂದೆ ಎಲ್ಲಾ ಜಾತಿಯ ಜನಗಳಿಗೂ ಬದುಕಿನ ಅವಕಾಶ ತೆರೆದುಕೊಂಡಿತು. ಆದರೂ ಅಲ್ಲಿನ ಮೂಲನಿವಾಸಿಗಳಾದ ಕೊರಗರಂಥಾ ಜನಾಂಗದವರಿಗೆ ಜಮೀನು ಸಿಗಲಿಲ್ಲ. ವ್ಯಾಪಾರ ವ್ಯವಹಾರದಲ್ಲೂ ಅವರಿಗೆ ತಮ್ಮನ್ನು ತೊಡಗಿಸಿಕೊಳ್ಳಲಾಗಲಿಲ್ಲ. ಕಷ್ಟಸಹಿಷ್ಣುಗಳಾದ ಅವರಲ್ಲಿ ಬಹಳಷ್ಟು ಜನ ಘಟ್ಟಹತ್ತಿ ಕೂಲಿಯನ್ನೇ ಗಟ್ಟಿಯಾಗಿ ಆರಿಸಿಕೊಂಡು ಬಿಟ್ಟರು. ಅವರು ಮೇಲೇಳುವ ಪ್ರಯತ್ನವನ್ನೇ ನಡೆಸಲಿಲ್ಲ. ಹಾಗಾಗಲು ಉಳಿದ ಜಾತಿಗಳವರು ಅವರನ್ನು ತಳ್ಳಲು ನೋಡಿದರು ಎನ್ನುವುದೂ ಒಂದು ಕಾರಣ ಅಷ್ಟೆ. ಅದರ ಜೊತೆಗೆ ಅವರ ಕುಡಿತದ ಚಟ ಮತ್ತು ತಲೆ ತಲಾಂತರದಿಂದಲೂ ತಾವು ಕೆಳಗಿನವರು ಎಂಬ ಮನಸ್ಸಿನೊಳಗೇ ಕುಳಿತ ಕೀಳರಿಮೆ ಭಾವವೇ ಕಾರಣ. ಅದು ಯಾವ ಪ್ರಯೋಜನಕ್ಕೂ ಬಾರದ ಅಮಿಷದ ಮತಾಂತರಕ್ಕೂ ಕಾರಣವಾಯಿತು. ಈಗಲೂ ಸರಕಾರದಿಂದ ಕೊಡುವ ಸವಲತ್ತುಗಳು ಕೆಲವರಲ್ಲಿ ಸ್ವಲ್ಪ ಚೈತನ್ಯ ತುಂಬಿ ಅಪರೂಪದಲ್ಲಿ ಕೆಲವರಿಗೆ ವಿದ್ಯೆ ಸಿಗುತ್ತಿದೆ. ಬುದ್ಧಿ ಎಲ್ಲರಂತೆ ಇದ್ದರೂ ಮೇಲೇಳಲು ಸರಕಾರೀ ಸವಲತ್ತುಗಳಿಗಿಂತ ಕುಡಿತ ಬಿಡುವುದು ಮತ್ತು ವಿದ್ಯೆ ಎಂಬ ಅಮೂಲ್ಯ ಸಂಪತ್ತು ಗಳಿಸುವುದು ಅತಿ ಮುಖ್ಯವಾಗಿತ್ತು. ತಲೆಮಾರಿನ ಒಬ್ಬ ವಿದ್ಯೆ ಕಲಿತರೆ ಅವನ ಪೀಳಿಗೆಯೇ ಮತ್ತೆ ವಿದ್ಯಾವಂತರಾಗುತ್ತಾರೆ. ಆದರೆ ಬಂಧುಗಳೆಲ್ಲರೂ ವಿದ್ಯಾವಂತರಾಗುವುದಿಲ್ಲ. ಹಾಗಾಗಿ ಅದು ತುಂಬ ನಿಧಾನವಾಗುತ್ತಿದೆ. ಇತರ ಜಾತಿಗಳಲ್ಲಿ ಅವರಷ್ಟೇ ನಿರ್ಗತಿಕರಾಗಿದ್ದವರು ಕೂಡಾ ಕಷ್ಟಪಟ್ಟು ವಿದ್ಯೆ ಕಲಿತು ಅಥವಾ ವ್ಯಾಪಾರ ವ್ಯವಹಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅದರ ಬಲದಿಂದ ಮೇಲೇಳುವುದು ಕಣ್ಣಿಗೆ ಗೋಚರವಾಗುತ್ತದೆ.


ಇಲ್ಲಿ ಮೂರು ತಲೆಮಾರು ಎನ್ನುವುದು ಸುಮಾರಾಗಿ ಬರಹಗಾರನ ಗಮನಕ್ಕೆ ಬಂದ ಸಮಕಾಲೀನ ಸ್ಥಿತಿ. ಅದಕ್ಕೂ

ಹಿಂದೆ ಹೇಗಿತ್ತು ಎಂದು ಕಲ್ಪಿಸಬಹುದಷ್ಟೆ. ಇದಕ್ಕಿಂತ ನೂರು ವರ್ಷಗಳ ಹಿಂದಿನ ಸ್ಥಿತಿಯನ್ನು ಮಾನ್ಯ ಶಿವರಾಮ ಕಾರಂತರ ಚೋಮನದುಡಿ ಕೃತಿಯಲ್ಲಿ ಕಾಣಬಹುದು. ಅಂದರೆ ಎಷ್ಟೋ ಸಾವಿರ ವರ್ಷಗಳಿಂದಲೂ ಕೊರಗರಂಥವರ ಬದುಕು ಹಾಗೇ ಇದೆ ಎಂದರೆ ಸರಕಾರ ಮತ್ತು ನಾಗರಿಕರ ಕರ್ತವ್ಯ ಏನು? ಅಂಥವರು ಸಿಕ್ಕಿದ ಬದುಕನ್ನು ಕೀಳರಿಮೆಯಿಂದ ಅಥವಾ ಕೂಲಿ ಕಾರ್ಮಿಕರಾಗಿಯೇ ಕಳೆದು ಸಾಯಬೇಕಾ? ಎನ್ನುವ ಪ್ರಶ್ನೆ ವಿಚಾರವಂತರಿಗೆ ನೋವು ಕೊಡುವಂಥದ್ದು. ಇಂದಿಗೂ ಶಾಲೆಗಳಲ್ಲಿ ಬಾಲ್ಯದಲ್ಲೇ ಮನಸ್ಸಿನ ಮೇಲೆ ಪರಿಣಾಮ ಬೀರುವ ಜಾತಿ ನಮೂದಿಸುವ ಪದ್ಧತಿಯನ್ನು ಸರಕಾರ ಕೈ ಬಿಟ್ಟಿಲ್ಲ. ಕಣ್ಣೊರೆಸುವ ಸವಲತ್ತು ನೀಡಿ ರಾಜಕಾರಣಿಗಳು ಜಾತಿಯ ಆಧಾರದ ಮೇಲೆ ಓಟು ಕೇಳುವುದು ನಿಂತಿಲ್ಲ. ಅವರಿಗಿಂತ ಮೇಲೆ ಎಂದುಕೊಂಡ ಎಲ್ಲ ವರ್ಗದವರೂ ಅವರನ್ನು ಕೆಳವರ್ಗ ಎಂದು ತಿರಸ್ಕಾರದಿಂದ ನೋಡುವುದನ್ನು ಬಿಟ್ಟಿಲ್ಲ. ಅಷ್ಟೇ ಅಲ್ಲ; ಈ ಜಾತಿಭೇದ ಎನ್ನುವುದು ಇನ್ನೂ ನಮ್ಮ ರಕ್ತದಿಂದಲೇ ಹೋಗಿಲ್ಲ! ಪರಿಣಾಮ; ಮತಾಂತರದ ಪಿಡುಗು!?

ಮುಖ್ಯ ಪಾತ್ರವಾದ ಕಾವೇರಿಯ ಕಥೆಯ ಜೊತೆ ಈ ಕೃತಿಗೆ ಇನ್ನೊಂದು ಮಗ್ಗಲು ಇದೆ. ಅದು ತನಿಯ ಎಂಬ ಕೊರಗ ಜಾತಿಯ ಯುವಕನ ಕಥೆ. ಕಾವೇರಿಯು ದ.ಕನ್ನಡದಲ್ಲಿರುವ ಶ್ರೀಮತಿ ಮತ್ತು ಶ್ರೀಪಾದ ಭಟ್ಟರ ಮನೆಯಲ್ಲಿ ಅಡಿಗೆಯ ಕೆಲಸ ಮಾಡುವ ಸಮಯದಲ್ಲಿ ‘ಉಳುವವನೇ ಒಡೆಯ’ ಎಂಬ ಕಾನೂನು ಬರುತ್ತದೆ. ಇದರಿಂದ ಗೇಣಿದಾರರು ಎಲ್ಲರೂ ಭೂಮಾಲೀಕರಾಗುತ್ತಾರೆ. ಶ್ರೀಪಾದ ಭಟ್ಟರು ತಮ್ಮ ಶ್ರೀಮಂತಿಕೆ ಕಳೆದುಕೊಂಡು ಬೀದಿಗೆ ಬರುತ್ತಾರೆ. ಮನೆಯಲ್ಲಿದ್ದ ಚಿನ್ನ ಕಳ್ಳರ ಪಾಲಾಗುತ್ತದೆ. ಅವರಿಗಿದ್ದ ಮೂರು ಮಕ್ಕಳಲ್ಲಿ ಹಿರಿಯ ಮಗಳನ್ನು ಶ್ರೀಮಂತಿಕೆ ಇರುವಾಗಲೇ ಉತ್ತಮ ಸಂಬಂಧ ನೋಡಿ ಮದುವೆ ಮಾಡಿಕೊಡಲಾಗಿತ್ತು. ಶ್ರೀಮಂತಿಕೆ ಕಳೆದುಕೊಂಡ ಬಳಿಕ ಮಗ ವಾಮನ ಮನೆ ಬಿಟ್ಟು ಬೊಂಬಾಯಿ ಸೇರುತ್ತಾನೆ. ಕೊನೆಯ ಮಗಳು ವಿದ್ಯಾ ಅಕ್ಕ ಶಾರದೆಯ ಮನೆಯಲ್ಲಿದ್ದು ತನ್ನ ವಿದ್ಯಾಭ್ಯಾಸ ಮುಂದುವರೆಸುತ್ತಾಳೆ. ಈ ನಡುವೆ ಮಾನಸಿಕ ಸ್ಥಿಮಿತ ಕಳೆದುಕೊಂಡ ಭಟ್ಟರು ನಿಧನ ಹೊಂದುತ್ತಾರೆ. ಭಟ್ಟರ ತೋಟದಲ್ಲಿ ಅದೂ ಇದೂ ಅಂತ ಕೆಲಸ ಮಾಡಿಕೊಂಡಿದ್ದ ತನಿಯ ಕಾಫಿ ತೋಟದ ಕೆಲಸಕ್ಕೆಂದು ಘಟ್ಟ (ಸಕಲೇಶಪುರ) ಹತ್ತುತ್ತಾನೆ. ಅವನ ಜೊತೆ ಹೆಂಡತಿ ಕಾಳಿ ಸಹಾ ಘಟ್ಟಕ್ಕೆ ಹೋಗುತ್ತಾಳೆ. ಕಷ್ಟದ ಸಮಯದಲ್ಲಿ ಬೇರೆ ದಾರಿ ಕಾಣದೆ ತನಿಯನ ಮಕ್ಕಳು ಕ್ರೈಸ್ತ ಧರ್ಮಕ್ಕೆ ಮತಾಂತರವಾಗುತ್ತಾರೆ. ಒಬ್ಬ ಮಗ ಮಾತ್ರ ಮತಾಂತರವಾಗುವುದಿಲ್ಲ.

ಪಿ ಹೆಚ್ ಡಿ ಮಾಡುವ ಉದ್ದೇಶದಿಂದ ತನ್ನ ಕೆಲಸದಿಂದ ಒಂದು ವರ್ಷ ರಜೆ ತೆಗೆದುಕೊಳ್ಳುವ ಚೈತ್ರ, ತನ್ನ ಅಧ್ಯಯನಕ್ಕಾಗಿ ಮರಳಿ ಅಜ್ಜಿಯ ಊರಿಗೆ ಬರುತ್ತಾಳೆ. ಅಲ್ಲಿ ಸಮಾಜದಲ್ಲಿರುವ ವಿವಿಧ ಜಾತಿಯ ಕುರಿತಾದ ಅಧಿಕ ಮಾಹಿತಿಗಳು ಆಕೆಗೆ ದೊರೆಯುತ್ತಾ ಹೋಗುತ್ತದೆ. ಅಜ್ಜಿ ಮತ್ತು ಮೊಮ್ಮಗಳ ಸಂಭಾಷಣೆಗಳು ನಮ್ಮ ಸಮಾಜದಲ್ಲಿ ಬಲವಾಗಿ ಬೇರೂರಿರುವ ಜಾತಿ, ಧರ್ಮ, ಮೂಢನಂಬಿಕೆ ಮೊದಲಾದುವುಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಅಜ್ಜಿಯ ಮೇಲೆ ಚೈತ್ರಾ ಇಟ್ಟ ನಂಬಿಕೆಯನ್ನು 80ರ ವಯಸ್ಸಿನ ಕಾವೇರಿ ಉಳಿಸಿಕೊಳ್ಳುತ್ತಾರಾ? ಡೈವೋರ್ಸ್ ಆಗಿ ಬಂದ ಮೊಮ್ಮಗಳಿಗೆ ಬೇರೆ ಮದುವೆಯಾಗುವಂತೆ ಹೇಳುತ್ತಾಳಾ? ಮೊಮ್ಮಗಳು ಕಾವೇರಿಯ ಮನೆಗೆ ಬಂದ ನಿಜವಾದ ಉದ್ದೇಶವಾದರೂ ಏನು? ಕಾವೇರಿಯ ಮಗ–ಸೊಸೆ ಮಗಳನ್ನು ಮನೆಗೆ ಸೇರಿಸಿಕೊಳ್ಳುತ್ತಾರಾ? ಕಾವೇರಿ ನೋಡಿದ ಹುಡುಗ ಚೈತ್ರಳಿಗೆ ಇಷ್ಟವಾಗುತ್ತಾ? ತನಿಯನ ಸಂಸಾರ ಮತ್ತೆ ಹಳಿಗೆ ಬರುತ್ತದೆಯಾ? ಶ್ರೀಮತಿಯವರ ಮಕ್ಕಳು ಏನಾಗುತ್ತಾರೆ? ಇಂತಹ ಹಲವಾರು ಪ್ರಶ್ನೆಗಳಿಗೆ ಈ ಕೃತಿ ಉತ್ತರ ನೀಡುತ್ತಾ ಹೋಗುತ್ತದೆ.

‘ಮೂರು ತಲೆಮಾರು’ ಕೃತಿಯನ್ನು ಕೈಯಲ್ಲಿ ಹಿಡಿದುಕೊಂಡಿರೆಂದಾದರೆ 304 ಪುಟಗಳನ್ನು ಓದಿ ಮುಗಿಸಲು ಹೆಚ್ಚು ಸಮಯವೇನೂ ಬೇಕಾಗಲಿಕ್ಕಿಲ್ಲ. ಏಕೆಂದರೆ ಒಮ್ಮೆ ನೀವು ಮಲೆನಾಡಿನ ಒಳಗೆ ಪ್ರವೇಶಿಸಿದರೆ ಮುಂದೆ ರೋಚಕತೆ ತನ್ನಿಂದ ತಾನೇ ನಿಮ್ಮನ್ನು ಆವರಿಸಿ ಬಿಡುತ್ತದೆ.



– ಅಶ್ವಿನ್ ಪದವಿನಂಗಡಿ

Olavina Hall Opens 75-Bed Home for Destitute Women

Marking a significant milestone in its Golden Jubilee celebrations, Olavina Halli Rehabilitation and Community Development Centre near Thalapady has inaugurated a new residential block with facilities to accommodate 75 destitute women, reaffirming its commitment to caring for the marginalised and vulnerable sections of society. The newly constructed facility offers spacious accommodation, attached bathrooms and dedicated provisions for medical care, nursing and physiotherapy services. The building replaces three old and dilapidated tiled-roof houses in which the residents were previously accommodated, providing them with improved living conditions and better care facilities.The residential block was inaugurated by Sr Luisa Bonforte, Assistant General of the Sisters of Charity, in the presence of philanthropist Michael Dsouza and his family. The entire building was blessed by Bishop of Mangaluru Rev. Dr Peter Paul Saldanha. The basement and a memorial museum dedicated to the institution's founder, Sr Amelia Cimolino, were inaugurated by her nieces, Antonietta and Eilzabetha Cimolino, along with friends from Italy. The museum has been established to preserve the founder's legacy and commemorate her contribution to the service of humanity.Founded in 1974 by Sr Amelia Cimolino in a village near Thalapady, approximately 18 km from Mangaluru, Olavina Halli began its journey by rehabilitating people recovering from leprosy and tuberculosis. Over the decades, the institution expanded its mission to provide shelter, care and support to abandoned elderly people and young women with psychiatric and intellectual disabilities. The institution is managed by the Congregation of the Sisters of Charity of Saints Bartolomea Capitanio and Vincenza Gerosa. Its five decades of dedicated service to society were recognised with the 2024 Dakshina Kannada District Rajyotsava Award.The new residential block became a reality through the generous contributions of donors and well-wishers. A major share of the financial assistance came from philanthropist Michael D'Souza. Other contributors included the children of Alphonse and Gemma Coelho, Antonietta Cimolino and the Association of Polse Olavina Halli. Speaking on the occasion, Bishop Peter Paul Saldanha appreciated the Sisters of Charity for their dedicated service to the marginalised and their commitment to providing care and dignity to those in need. Philanthropist Michael



Dsouza lauded the Sisters for their selfless service and unwavering dedication to the institution's mission. Dr M. Vijaya Kumar, Pro-Chancellor of Yenepoya (Deemed to be University), encouraged the public to extend support to the institution through initiatives such as sponsoring meals for its residents. Former administrators and several individuals who had contributed to the growth and development of Olavina Halli were also felicitated as part of the Golden Jubilee celebrations. The inauguration of the new residential block marks an important chapter in Olavina Halli's five-decade journey of compassion and service, strengthening its mission to provide shelter, care and dignity to women in need.

Fr Ronald Pais Appointed Rector of Saint Aloysius Institutions



Rev. Fr Ronald Pais SJ, has been appointed the new Rector of Saint Aloysius Institutions, Mangaluru, succeeding Rev. Fr Brian Pereira, SJ, who has been appointed Provincial of the Karnataka Jesuit Province. The appointment was announced by Rev. Fr Arturo Abascal Sosa, Superior General of the Society of Jesus, through a letter dated October 28, 2026 (KAR 2026/25).Rev. Fr Ronald brings to this important responsibility a wealth of experience in pastoral ministry, Jesuit formation, educational administration, spiritual accompaniment and institutional leadership. His academic specialisation in counselling and psychology further strengthens his ability to guide the Saint Aloysius community in its pursuit of academic excellence, personal growth and holistic education.A Journey of Jesuit Formation and Academic Excellence: Hailing from Dornahalli in the Diocese of Mysuru, Fr Ronald joined the Society of Jesus on June 16, 2000, at Anand Jyothi Novitiate, Guntur, Andhra Pradesh. He pronounced his First Vows on June 21, 2002. He completed his Juniorate in Thiruvananthapuram (2002–2003), pursued his Bachelor of Arts degree in Dharwad (2003–2006), and studied philosophy at Jnana Deepa, Pune (2006–2008). He subsequently completed his theological studies in Berkeley, United States (2009–2012). He was ordained a Priest on December 8, 2012. Following his Tertianship at Sitagarha, Hazaribagh, in 2016, he pronounced his Final Vows on March 10, 2019.Further strengthening his academic credentials, Fr Ronald obtained a Master of Science degree in Counselling and Psychology from Sampoorna Montfort College, Bengaluru, in 2019. His professional development also includes specialised training in multidimensional approaches to pain and trauma at CCPI, Hyderabad, in 2023, and participation in the Ignatian Leadership Programme at Sacred Heart College, Shembaganur, in 2022. His diverse academic and spiritual formation has equipped him with valuable insights into personal development, emotional well-being, meaningful relationships and collaborative leadership.Extensive Experience in Pastoral Ministry and Leadership: Throughout his Jesuit journey, Fr Ronald has served in several important responsibilities spanning pastoral ministry, vocation promotion, spiritual formation, education and institutional administration. Following his ordination, he served in pastoral ministry at St Philomena's Church, Mysuru (2012–2013). He later took up the responsibilities of Vocation Promoter and Director of Pre-Novitiate at Navasadhana, Bengaluru (2013–2016). His subsequent assignments included serving as Director of the MBA Twinning Programme at St Joseph's Evening College (2017–2018), followed by his appointment as Minister and Programme Coordinator at the Spirituality Centre of Fatima Retreat House, Mangaluru (2019–2020). From 2021 to 2025, he served as Superior of Ashakiran, the Jesuit scholasticate in Mangaluru. Since 2023, he has also been serving as a Province Consultor. In June 2025, he assumed the responsibility of Novice Master at Mount St Joseph, Bengaluru, where he has been guiding young Jesuits in their initial formation. His wide-ranging experience reflects his dedication to nurturing vocations, accompanying individuals in their personal and spiritual journeys, strengthening communities and advancing the educational and pastoral mission of the Society of Jesus.A New Chapter for Saint Aloysius Institutions: As Rector, Fr Ronald will provide spiritual guidance and institutional leadership to the Saint Aloysius community, working closely with the management, faculty, staff, students and other stakeholders to strengthen the institution's longstanding educational mission and Jesuit traditions. His appointment marks an important new chapter in the continuing journey of Saint Aloysius Institutions, which has remained committed to academic excellence, character formation, inclusive education and service to society. The Jesuits and the Aloysian community extend a warm welcome to Fr Ronald Pais, SJ, and wish him God's abundant blessings and success as he takes up this new responsibility.

SDM College Ujire Wins Inter-Collegiate Zonal Kabaddi Tournament at Milagres



Milagres College, Mangaluru, hosted a two-day Inter-Collegiate Zonal-Level Kabaddi Tournament organised by the Department of Physical Education, Mangalore University. The tournament witnessed enthusiastic participation from 35 teams representing colleges affiliated with Mangalore University. Addressing the gathering at the inaugural ceremony, Dr Gerald Santhosh Dsouza, Director of Physical Education, Mangalore University, highlighted the importance of sports in fostering discipline, self-confidence and team spirit. He emphasised that sporting activities play a vital role in maintaining physical fitness and congratulated all the athletes participating in the tournament.Rev. Dr Alwin Serrao, Principal of Milagres College, urged the participants to uphold the values of sportsmanship and discipline while making the best use of competitive platforms to showcase their talents. He observed that the regular organisation of sporting events would encourage students to maintain good physical health and develop a competitive spirit. As part of the programme, national-level kabaddi players Sai Prasad and Nasir Ammi Kuppetti were felicitated in recognition of their achievements in the sport.The inaugural programme was attended by Nawaz Naringana, President of Naringana Grama Panchayat; Dr Prasanna Kumar B.K., Tournament Observer; Harish Alva, national-level kabaddi player; Melwin Vas, Principal of Milagres Pre-University College; Aakash Shetty, Director of Physical Education at Milagres College and Event Coordinator; and Pratheeth Salyan, Sports Secretary.The tournament featured intense and exciting matches, with teams displaying impressive strength, agility, coordination and teamwork throughout the two-day competition. D. Vedavyas Kamath, MLA of Mangaluru South, attended the valedictory programme, extended his best wishes to the participating players and distributed prizes to the winning teams.Tournament Results: First Place: Sri Dharmasthala Manjunatheshwara Autonomous College, Ujire. Second Place: Milagres College, Mangaluru. Third Place: Sri Gokarnanatheshwara College of Education, Mangaluru. Fourth Place: Nehru Memorial College, Sullia. The programme commenced with a welcome address by Shravya N., Lecturer in Hindi. Aakash Shetty, Event Coordinator and Director of Physical Education at Milagres College, proposed the vote of thanks, while Priya Bhat, Lecturer in English, compered the programme. The two-day sporting event provided an excellent platform for young kabaddi players to demonstrate their abilities, strengthen team spirit and develop a passion for competitive sports.

Father Muller Hospital Achieves Milestone in Minimally Invasive Lung Surgery



Father Muller Medical College Hospital (FMMCH) this September – October 2026 has successfully performed two complex lung surgeries using the state-of-the-art Uniportal VATS (Video Assisted Thoracoscopic Surgery) technique. The patients have currently been doing well post routine check-up in the 3rd week of October. The surgeries — Right Lower Lobectomy and Left Upper Lobectomy — were successfully performed by Dr Elroy Saldanha, Associate Professor, Department of Surgical Oncology, FMMC on patients diagnosed with lung disease.Uniportal VATS is a highly advanced, minimally invasive approach that involves a single 3 to 4 cm incision in the chest wall to perform surgeries of the lung, bronchus and trachea. Unlike conventional thoracic surgeries, the procedure requires no rib excision and no major chest incision. Due to its minimally invasive nature, the benefits to patients are significant: Faster recovery, Less post-operative pain, Reduced hospital stay, Early return to routine activities.Both patients who underwent the procedure have shown excellent recovery and were discharged within 5 to 7 days. They have since resumed their normal routine activities. This achievement was made possible through the concerted team effort of the Department of Surgical Oncology, Respiratory Medicine and Anaesthesiology. Dr Elroy Saldanha has completed advanced training in Minimally Invasive Uniportal (single port) VATS at Shanghai Pulmonary Hospital, China and First Hospital of Lanzhou University (LZUFH) under the pioneer of Uniportal VATS, Dr Diego González Rivas in September 2026. Dr Srishankar Assistant Professor, Pulmonary Medicine; Dr Carishma Assistant Professor, Pulmonary Medicine and Dr Ananth Somayaji, Assistant Professor, Anaesthesiology all from FMMCH were part of the team of Doctors who steered the patient through the process of surgery and recovery. Dr Elroy also acknowledged the support of the Operation Theatre staff, Post-Operative Staff and Nursing Department for their exemplary care and steadfastness during and after the surgery. This milestone marks another step by Father Muller Medical College Hospital towards bringing globally advanced, patient-friendly surgical care to coastal Karnataka.Appreciations galore have been poured in from the Director FMCI Rev. Fr Faustine L. Lobo; Administrator FMMCH, George Sequeira; Dean FMMC; Medical Superintendent FMMCH for such an innovative procedure done for the safer recovery of the patient.

Saint Agnes PU College Marks Rajyotsava with Cultural Extravaganza



Saint Agnes PU College celebrated Karnataka Rajyotsava with enthusiasm and patriotic fervour, showcasing the state's rich cultural heritage through a series of colourful performances by students. The programme highlighted Karnataka's glorious history, Kannada language, folk traditions and artistic legacy. Students presented a variety of cultural performances, including vibrant folk dances that reflected the diversity and traditions of the state. Yakshagana, with its elaborate costumes, expressive movements and mythological themes, was one of the major attractions of the celebration, captivating the audience with its traditional grandeur. Another highlight was a dance-drama depicting the glorious Vijayanagara Empire and the architectural splendour of Hampi. The presentation paid tribute to the remarkable contributions of the Vijayanagara period to Kannada literature, architecture, music and fine arts.The performances, meticulously prepared and presented by the students, offered a glimpse into Karnataka's rich historical and cultural legacy. The celebration concluded with the gathering singing the Karnataka State Anthem in unison, reaffirming their pride in the state's language, identity and heritage. Manishka and Thanmay compered the programme, while Lavita welcomed the gathering and Laxmi proposed the vote of thanks. Principal Sr Norine Dsouza, Vice Principal Sr Janet Sequeira, Convenors Shailaja and Ms Carol, members of the teaching and support staff, and students were present on the occasion.

Saint Aloysius College Clinches Double Basketball Crown





The spirit of sportsmanship, teamwork and healthy competition came alive at Presidency School and PU College, Mangalore, as talented young basketball players from across the district competed in the District-Level Basketball Tournament 2026, organised by the Department of School Education (Pre-University), in association with the institution. The tournament witnessed thrilling encounters, outstanding individual performances and remarkable team spirit in both the boys' and girls' categories, providing an excellent platform for emerging basketball talents to showcase their skills.The inaugural ceremony was graced by Manjappa D.R., Inspector, Rural Police Station, Vamanjoor, as the Chief Guest. The other dignitaries present included H.H. Rajeshwari, DDPU, Mangalore; Dr Mrinmoy Biswas, Registrar – Accreditation and Corporate Relations; Dr Arun Devraj, Assistant Director; Prajna Shetty, Campus Officer; and Raghavendra Shenoy, Principal, Presidency School and PU College.Addressing the participants, the dignitaries encouraged the young athletes to uphold the values of discipline, determination, teamwork and true sportsmanship. They highlighted the importance of sports in building confidence, leadership qualities and an overall healthy personality. The matches in both categories were highly competitive, with participating teams displaying impressive technical skills, strategic play, excellent coordination and exceptional sporting spirit.Tournament Results: GIRLS' CATEGORY : Winners: Saint Aloysius College, Runners-up: TLC PU College. Most Valuable Player (MVP): Saanvi – Saint Aloysius College. Best Shooter: Hitaikshi – TLC PU CollegeBOYS' CATEGORY : Winners: Saint Aloysius College, Runners-up: TLC PU College. Most Valuable Player (MVP): Ian – TLC PU College. Best Shooter: Shashwath – Saint Aloysius College.Saint Aloysius College emerged as the undisputed champion of the tournament, securing the championship titles in both the boys' and girls' categories. TLC PU College also delivered an impressive performance, finishing as runners-up in both divisions. The tournament concluded successfully, celebrating the achievements of the winning teams and recognising the dedication, hard work and sporting talent of all the participants. The event reaffirmed the institution's commitment to promoting sportsmanship, teamwork, discipline and healthy competition while encouraging the holistic development of students through sports. Tighten this into a newspaper report Make the opening more news-focused.

ಮೂರು ದಶಕಗಳ ಪೊಲೀಸ್ ಸೇವೆಯ ಸಂಭ್ರಮ: 'ಮುತ್ತಿನ ಮಹೋತ್ಸವದ ಸ್ನೇಹ ಸಮ್ಮಿಲನ-2026' ಗುರುಗಳಿಗೆ ಗೌರವ ಮತ್ತು ಸಾಧಕರಿಗೆ ಸನ್ಮಾನ - ಒಂದಾದ 1996ನೇ ಸಾಲಿನ ಪೊಲೀಸ್ ಸಿಬ್ಬಂದಿಗಳು









ಪೊಲೀಸ್ ಇಲಾಖೆಯಲ್ಲಿ ಸೇವೆಗೆ ಸೇರಿದ 1996ನೇ ಸಾಲಿನ 20 ಮಂದಿ ಪೊಲೀಸ್ ಸಿಬ್ಬಂದಿಗಳು ತಮ್ಮ ಸೇವಾ ಜೀವನದ ಮೂರು ದಶಕಗಳ ಸವಿನೆನಪುಗಳನ್ನು ಮೆಲುಕು ಹಾಕುತ್ತಾ, ಸ್ನೇಹ, ಬಾಂಧವ್ಯ, ಗೌರವ ಹಾಗೂ ಕುಟುಂಬದ ಸಂತಸದ ಕ್ಷಣಗಳನ್ನು ಹಂಚಿಕೊಳ್ಳುವ ಮೂಲಕ 'ಮುತ್ತಿನ ಮಹೋತ್ಸವದ ಸ್ನೇಹ ಸಮ್ಮಿಲನ-2026' ಕಾರ್ಯಕ್ರಮವನ್ನು ಅತ್ಯಂತ ಸಂಭ್ರಮದಿಂದ ಆಚರಿಸಿದರು.

ದಕ್ಷಿಣ ಕನ್ನಡ ಜಿಲ್ಲಾ ಡಿಎಆರ್ ಹಾಗೂ ಮಂಗಳೂರು ನಗರ ಸಿಎಆರ್‌ನ ಸಿಬ್ಬಂದಿಗಳ ಒಗ್ಗೂಡುವಿಕೆಗೆ ಸಾಕ್ಷಿಯಾದ ಈ ವಿಶೇಷ ಕಾರ್ಯಕ್ರಮವು ವಾಮಂಜೂರಿನ ರಿವರ್ ರೋಸ್ಟ್ ರೆಸಾರ್ಟ್‌ನಲ್ಲಿ ನಡೆಯಿತು. ಮೂರು ದಶಕಗಳ ಸುದೀರ್ಘ ಪಯಣದಲ್ಲಿ ಪರಸ್ಪರ ಬೆಸೆದುಕೊಂಡ ಸ್ನೇಹದ ಎಳೆಗಳನ್ನು ಮತ್ತಷ್ಟು ಗಟ್ಟಿಗೊಳಿಸಿದ ಈ ಸಮ್ಮಿಲನವು ಕೇವಲ ಪುನರ್ಮಿಲನದ ಕಾರ್ಯಕ್ರಮವಾಗಿರದೆ, ಸೇವಾ ಬದ್ಧತೆ, ಗುರುಭಕ್ತಿ, ಸಾಧನೆಗೆ ಗೌರವ ಹಾಗೂ ಮುಂದಿನ ಪೀಳಿಗೆಯ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವ ಅರ್ಥಪೂರ್ಣ ವೇದಿಕೆಯಾಗಿ ಮೂಡಿಬಂತು.

ಪೊಲೀಸ್ ಇಲಾಖೆಗೆ ಸೇರಿದ ದಿನಗಳಿಂದ ಆರಂಭವಾದ ಸ್ನೇಹದ ಪಯಣವು ಕಾಲಚಕ್ರ ಉರುಳಿದಂತೆ ಹಲವು ಅನುಭವಗಳು, ಸವಾಲುಗಳು, ಕರ್ತವ್ಯನಿಷ್ಠೆ ಮತ್ತು ಸಿಹಿ-ಕಹಿ ನೆನಪುಗಳೊಂದಿಗೆ ಬೆಳೆದಿದೆ. ಇಲಾಖೆಯ ಕರ್ತವ್ಯಗಳ ಒತ್ತಡದ ನಡುವೆಯೂ ಪರಸ್ಪರರೊಂದಿಗೆ ಬೆಳೆಸಿಕೊಂಡ ಆತ್ಮೀಯತೆ ಮತ್ತು ವಿಶ್ವಾಸವೇ ಈ ಸ್ನೇಹದ ನಿಜವಾದ ಶಕ್ತಿಯಾಗಿದೆ. ಮೂವತ್ತು ವರ್ಷಗಳ ನಂತರ ಎಲ್ಲರೂ ಒಂದೇ ವೇದಿಕೆಯಲ್ಲಿ ಸೇರಿ ತಮ್ಮ ಜೀವನದ ಅನುಭವಗಳನ್ನು ಹಂಚಿಕೊಂಡಿದ್ದು, ಹಳೆಯ ನೆನಪುಗಳಿಗೆ ಮರುಜೀವ ನೀಡುವುದರ ಜೊತೆಗೆ ಹೊಸ ಉತ್ಸಾಹವನ್ನೂ ತುಂಬಿತು.

ಗುರುಗಳಿಗೆ ಗೌರವ ಸಲ್ಲಿಸಿದ ಶಿಷ್ಯವೃಂದ:

ಕಾರ್ಯಕ್ರಮದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿದ್ದು, ತಮ್ಮ ಸೇವಾ ಜೀವನದ ಆರಂಭದ ದಿನಗಳಲ್ಲಿ ಮಾರ್ಗದರ್ಶನ ನೀಡಿದ ಗುರುಗಳಿಗೆ ಸಲ್ಲಿಸಿದ ಗೌರವ. ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಶಿಸ್ತು, ಸಮಯಪ್ರಜ್ಞೆ, ಕರ್ತವ್ಯನಿಷ್ಠೆ ಹಾಗೂ ವೃತ್ತಿಪರ ಮೌಲ್ಯಗಳ ಮಹತ್ವವನ್ನು ಕಲಿಸಿಕೊಟ್ಟ ಹಿರಿಯರ ಕೊಡುಗೆ ಸದಾ ಸ್ಮರಣೀಯ.

ಈ ಹಿನ್ನೆಲೆಯಲ್ಲಿ ಅಂದು ಗುರುಗಳಾಗಿ ಮಾರ್ಗದರ್ಶನ ನೀಡಿದ್ದ ನಿವೃತ್ತ ಪೊಲೀಸ್ ಉಪನಿರೀಕ್ಷಕ ಶ್ರೀ ಎಂ. ಗಂಗಾಧರ್ ರಾವ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ತಮ್ಮ ವೃತ್ತಿಜೀವನದ ಆರಂಭದಲ್ಲಿ ಮಾರ್ಗದರ್ಶಕರಾಗಿ ನಿಂತು ಸೇವೆಯ ಮೌಲ್ಯಗಳನ್ನು ತಿಳಿಸಿಕೊಟ್ಟ ಹಿರಿಯ ಅಧಿಕಾರಿಯನ್ನು ಶಿಷ್ಯವೃಂದವು ಮೂರು ದಶಕಗಳ ಬಳಿಕವೂ ಗೌರವದಿಂದ ಸ್ಮರಿಸಿ ಸನ್ಮಾನಿಸಿದ್ದು, ಗುರು-ಶಿಷ್ಯ ಸಂಬಂಧದ ಮಹತ್ವವನ್ನು ಸಾರಿತು.

ಕರ್ತವ್ಯ ಕ್ಷೇತ್ರದಲ್ಲಿ ಹಿರಿಯರು ನೀಡಿದ ಮಾರ್ಗದರ್ಶನವು ಕೇವಲ ವೃತ್ತಿಪರ ಜ್ಞಾನಕ್ಕೆ ಸೀಮಿತವಾಗಿರದೆ, ಜೀವನದ ಹಲವು ಹಂತಗಳಲ್ಲಿ ದಾರಿದೀಪವಾಗಿರುತ್ತದೆ ಎಂಬುದನ್ನು ಈ ಗೌರವ ಸಮರ್ಪಣೆ ಮನದಟ್ಟು ಮಾಡಿಸಿತು.

ವಿಶೇಷ ಸಾಧನೆ ಮಾಡಿದ ಪೊಲೀಸ್ ಅಧಿಕಾರಿಗಳಿಗೆ ಸನ್ಮಾನ:

ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವುದು ಕೇವಲ ಉದ್ಯೋಗವಲ್ಲ; ಅದು ಶಿಸ್ತು, ಧೈರ್ಯ, ತ್ಯಾಗ, ಸಮಯಪ್ರಜ್ಞೆ ಮತ್ತು ಸಾರ್ವಜನಿಕರ ಸುರಕ್ಷತೆಯ ಹೊಣೆಗಾರಿಕೆಯನ್ನು ಒಳಗೊಂಡ ಮಹತ್ವದ ಸೇವೆಯಾಗಿದೆ. ಇಂತಹ ಸೇವಾ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದವರನ್ನು ಗುರುತಿಸಿ ಗೌರವಿಸುವುದು ಇತರರಿಗೂ ಪ್ರೇರಣೆಯಾಗುತ್ತದೆ.

ಈ ನಿಟ್ಟಿನಲ್ಲಿ ವಿಶೇಷ ಸಾಧನೆ ಮಾಡಿದ ಪೊಲೀಸ್ ಅಧಿಕಾರಿ ಶೋನ್ ಶಾ ಕೆ.ಜಿ. (DG and IGP medal), ರಿತೇಶ್ (CM medal) ಹಾಗೂ ಸುಬ್ರಾಯ ಕಲ್ಲನೆ (ಸಂಗೀತ ಕ್ಷೇತ್ರದಲ್ಲಿ) ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ತಮ್ಮ ಸಾಧನೆಗಳ ಮೂಲಕ ಗುರುತಿಸಿಕೊಂಡ ಪೊಲೀಸ್ ಅಧಿಕಾರಿಗಳನ್ನು ಸಹೋದ್ಯೋಗಿಗಳ ಸಮ್ಮುಖದಲ್ಲಿ ಗೌರವಿಸಿದ್ದು, ಸೇವಾ ಕ್ಷೇತ್ರದಲ್ಲಿ ಸಾಧನೆ ಮತ್ತು ಸಮರ್ಪಣಾ ಮನೋಭಾವಕ್ಕೆ ನೀಡಿದ ಮನ್ನಣೆಯಾಗಿ ಗಮನ ಸೆಳೆಯಿತು.

ಸಾಧಕರನ್ನು ಗೌರವಿಸುವ ಇಂತಹ ಕಾರ್ಯಕ್ರಮಗಳು ಇಲಾಖೆಯೊಳಗಿನ ಪರಸ್ಪರ ಗೌರವ, ಸೌಹಾರ್ದ ಮತ್ತು ಉತ್ತಮ ಕಾರ್ಯಸಂಸ್ಕೃತಿಯನ್ನು ಬಲಪಡಿಸುವುದರ ಜೊತೆಗೆ ಯುವ ಸಿಬ್ಬಂದಿಗೂ ಮಾದರಿಯಾಗುತ್ತವೆ.

ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹದ ಸನ್ಮಾನ: ಕಾರ್ಯಕ್ರಮದ ಮತ್ತೊಂದು ಹೃದಯಸ್ಪರ್ಶಿ ವಿಶೇಷವೆಂದರೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಕ್ಕಳನ್ನು ಗುರುತಿಸಿ ಸನ್ಮಾನಿಸಿದ್ದು. ಮಕ್ಕಳ ಪ್ರತಿಭೆ, ಪರಿಶ್ರಮ ಮತ್ತು ಸಾಧನೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುವುದರ ಜೊತೆಗೆ ಭವಿಷ್ಯದಲ್ಲಿ ಇನ್ನಷ್ಟು ಎತ್ತರದ ಗುರಿಗಳನ್ನು ಸಾಧಿಸಲು ಪ್ರೇರಣೆ ನೀಡುತ್ತದೆ.

ಈ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವೀಕ್ಷಾ ವಿ. (ಕ್ರೀಡೆ, ಮಾರಥೋನ್), ಮಾಸ್ಟರ್ ಜೆವೀಕ್ ಕೃಷ್ಣ (ಸ್ಕೇಟಿಂಗ್ ಹಾಗೂ ಅಬಾಕಸ್), ಸೃಷ್ಟಿ (NSS ರಾಷ್ಟ್ರೀಯ ಮಟ್ಟ), ಅಭಿನ್ ಎಸ್.ಕೆ. (ಕರಾಟೆ), ಧನಿಯಾ ಥಾಮಸ್ (ಕಲಿಕೆ), ತನ್ವಿತ್ ಎಂ.ಆರ್ (ತಬಲಾ ವಾದನ) ಹಾಗೂ ಅನ್ವಿತ್ ಕೋಟ್ಯಾನ್ (ಕರಾಟೆ) ಅವರನ್ನು ಸನ್ಮಾನಿಸಲಾಯಿತು. ಮಕ್ಕಳ ಸಾಧನೆಗೆ ವೇದಿಕೆಯಲ್ಲಿ ಮನ್ನಣೆ ದೊರೆತ ಕ್ಷಣಗಳು ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿದವು. ಪೋಷಕರ ಪರಿಶ್ರಮ, ಪ್ರೋತ್ಸಾಹ ಮತ್ತು ಮಾರ್ಗದರ್ಶನದ ಫಲವಾಗಿ ಮಕ್ಕಳು ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆಯುತ್ತಿರುವುದನ್ನು ಗುರುತಿಸಿ ಗೌರವಿಸಿದ ಈ ಪ್ರಯತ್ನವು ಶ್ಲಾಘನೀಯವಾಗಿದೆ.

ಸಮಾಜದಲ್ಲಿ ಪ್ರತಿಭೆಗಳಿಗೆ ಸೂಕ್ತ ಪ್ರೋತ್ಸಾಹ ದೊರೆತಾಗ ಮಕ್ಕಳು ತಮ್ಮ ಸಾಮರ್ಥ್ಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಹಿರಿಯರ ಸೇವಾ ಅನುಭವ ಮತ್ತು ಮಕ್ಕಳ ಸಾಧನೆಯ ಉತ್ಸಾಹ ಒಂದೇ ವೇದಿಕೆಯಲ್ಲಿ ಬೆಸೆದುಕೊಂಡ ಈ ಸಮ್ಮಿಲನವು ತಲೆಮಾರುಗಳ ನಡುವಿನ ಪ್ರೇರಣಾತ್ಮಕ ಸಂಬಂಧಕ್ಕೂ ಸಾಕ್ಷಿಯಾಯಿತು.

ಕುಟುಂಬಗಳ ಪರಿಚಯ, ಸಾಂಸ್ಕೃತಿಕ ಕಾರ್ಯಕ್ರಮದ ಸಂಭ್ರಮ: ಪೊಲೀಸ್ ಸಿಬ್ಬಂದಿಯ ವೃತ್ತಿಜೀವನದ ಹಿಂದೆ ಕುಟುಂಬದ ತ್ಯಾಗ, ಸಹಕಾರ ಮತ್ತು ಬೆಂಬಲವೂ ಮಹತ್ವದ ಪಾತ್ರ ವಹಿಸುತ್ತದೆ. ಕರ್ತವ್ಯದ ಅನಿವಾರ್ಯತೆಗಳು, ಸಮಯದ ಅಭಾವ ಮತ್ತು ವೃತ್ತಿಪರ ಒತ್ತಡಗಳ ನಡುವೆಯೂ ಕುಟುಂಬದ ಸದಸ್ಯರು ನೀಡುವ ಪ್ರೋತ್ಸಾಹವೇ ಪೊಲೀಸ್ ಸಿಬ್ಬಂದಿಗೆ ಮಾನಸಿಕ ಶಕ್ತಿ ತುಂಬುತ್ತದೆ.

ಈ ಹಿನ್ನೆಲೆಯಲ್ಲಿ ಸಮ್ಮಿಲನದಲ್ಲಿ ಭಾಗವಹಿಸಿದ್ದ 20 ಮಂದಿ ಸಿಬ್ಬಂದಿ ತಮ್ಮ ಕುಟುಂಬದ ಸದಸ್ಯರನ್ನು ಪರಸ್ಪರ ಪರಿಚಯಿಸಿಕೊಂಡು ಆತ್ಮೀಯತೆಯನ್ನು ಹಂಚಿಕೊಂಡರು. ಕುಟುಂಬಗಳ ನಡುವೆ ಸ್ನೇಹದ ಹೊಸ ಬಾಂಧವ್ಯ ಬೆಸೆಯಲು ಈ ಕಾರ್ಯಕ್ರಮ ಅವಕಾಶ ಕಲ್ಪಿಸಿತು.

ಕುಟುಂಬದ ಪರಿಚಯದೊಂದಿಗೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಸಮಾರಂಭಕ್ಕೆ ಹಬ್ಬದ ವಾತಾವರಣವನ್ನು ತಂದವು. ನಿತ್ಯದ ಕರ್ತವ್ಯಗಳಿಂದ ಬಿಡುವು ಪಡೆದು ಸಹೋದ್ಯೋಗಿಗಳು ಹಾಗೂ ಕುಟುಂಬದ ಸದಸ್ಯರೊಂದಿಗೆ ಸಂತಸದ ಕ್ಷಣಗಳನ್ನು ಕಳೆಯುವ ಅವಕಾಶ ಎಲ್ಲರಿಗೂ ದೊರೆಯಿತು. ಹಳೆಯ ಸ್ನೇಹಿತರೊಂದಿಗಿನ ಮಾತುಕತೆ, ನೆನಪುಗಳ ಮೆಲುಕು, ಪರಸ್ಪರರ ಜೀವನದ ಅನುಭವಗಳ ಹಂಚಿಕೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಕಾರ್ಯಕ್ರಮದ ಆತ್ಮೀಯತೆಯನ್ನು ಹೆಚ್ಚಿಸಿದವು.

ಮೂರು ದಶಕಗಳ ಸ್ನೇಹಕ್ಕೆ ಹೊಸ ಚೈತನ್ಯ: ಮೂವತ್ತು ವರ್ಷಗಳ ಹಿಂದೆ ಪೊಲೀಸ್ ಇಲಾಖೆಯಲ್ಲಿ ಸೇವಾ ಪಯಣ ಆರಂಭಿಸಿದ ಸಹೋದ್ಯೋಗಿಗಳು ಕಾಲದ ಬದಲಾವಣೆ, ವೃತ್ತಿಜೀವನದ ಅನುಭವಗಳು ಮತ್ತು ವೈಯಕ್ತಿಕ ಬದುಕಿನ ಹಲವು ಹಂತಗಳನ್ನು ದಾಟಿ ಮತ್ತೆ ಒಂದೇ ವೇದಿಕೆಯಲ್ಲಿ ಸೇರಿರುವುದು ವಿಶೇಷ ಮಹತ್ವ ಹೊಂದಿದೆ. ಕಾಲ ಎಷ್ಟೇ ಬದಲಾದರೂ ನಿಜವಾದ ಸ್ನೇಹ ಮತ್ತು ಪರಸ್ಪರ ಗೌರವದ ಸಂಬಂಧಗಳು ಅಚಲವಾಗಿರುತ್ತವೆ ಎಂಬ ಸಂದೇಶವನ್ನು ಈ ಸಮ್ಮಿಲನ ಸಾರಿತು.

ಸ್ನೇಹ ಸಮ್ಮಿಲನವು ಹಳೆಯ ನೆನಪುಗಳನ್ನು ಮೆಲುಕು ಹಾಕುವ ಸಂದರ್ಭ ಮಾತ್ರವಲ್ಲದೆ, ಪರಸ್ಪರರ ಸಾಧನೆಗಳನ್ನು ಸಂಭ್ರಮಿಸುವ, ಹಿರಿಯರಿಗೆ ಕೃತಜ್ಞತೆ ಸಲ್ಲಿಸುವ, ಮಕ್ಕಳ ಪ್ರತಿಭೆಗಳನ್ನು ಗೌರವಿಸುವ ಹಾಗೂ ಕುಟುಂಬಗಳ ನಡುವೆ ಆತ್ಮೀಯತೆಯನ್ನು ಬೆಳೆಸುವ ವೇದಿಕೆಯೂ ಆಗಿದೆ.

'ಮುತ್ತಿನ ಮಹೋತ್ಸವದ ಸ್ನೇಹ ಸಮ್ಮಿಲನ-2026' ಕಾರ್ಯಕ್ರಮವು ಪೊಲೀಸ್ ಇಲಾಖೆಯ ಸಹೋದ್ಯೋಗಿಗಳ ನಡುವಿನ ಸ್ನೇಹದ ಬಲ, ಹಿರಿಯರ ಮೇಲಿನ ಗೌರವ, ಸಾಧಕರಿಗೆ ನೀಡುವ ಮನ್ನಣೆ ಮತ್ತು ಮಕ್ಕಳ ಭವಿಷ್ಯದ ಬಗ್ಗೆ ಹೊಂದಿರುವ ಕಾಳಜಿಯನ್ನು ಒಂದೇ ವೇದಿಕೆಯಲ್ಲಿ ಅನಾವರಣಗೊಳಿಸಿತು.

ಸೇವೆಯ ಮೂಲಕ ಆರಂಭವಾದ ಸಂಬಂಧವು ಕಾಲಕ್ರಮೇಣ ಆತ್ಮೀಯ ಸ್ನೇಹವಾಗಿ, ಕುಟುಂಬಗಳನ್ನೂ ಬೆಸೆಯುವ ಬಾಂಧವ್ಯವಾಗಿ ಬೆಳೆದಿರುವುದು ಈ ಕಾರ್ಯಕ್ರಮದ ನಿಜವಾದ ವಿಶೇಷತೆ. ಮೂರು ದಶಕಗಳ ನೆನಪುಗಳನ್ನು ಹೊತ್ತು ಸಾಗಿದ ಈ ಸಮ್ಮಿಲನವು ಭಾಗವಹಿಸಿದ ಎಲ್ಲರ ಮನದಲ್ಲಿ ಸವಿನೆನಪಾಗಿ ಉಳಿಯುವುದರೊಂದಿಗೆ, ಮುಂದಿನ ದಿನಗಳಲ್ಲಿಯೂ ಸ್ನೇಹ ಮತ್ತು ಸೌಹಾರ್ದದ ಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುವ ಸಾರ್ಥಕ ಪ್ರಯತ್ನವಾಗಿ ಮೂಡಿಬಂತು.

ಸೇವೆಯ ಮೂರು ದಶಕಗಳಿಗೆ ಗೌರವ, ಸ್ನೇಹಕ್ಕೆ ಹೊಸ ಚೈತನ್ಯ, ಸಾಧನೆಗಳಿಗೆ ಪ್ರೋತ್ಸಾಹ ಹಾಗೂ ಕುಟುಂಬಗಳಿಗೆ ಆತ್ಮೀಯತೆಯ ಸ್ಪರ್ಶ ನೀಡಿದ 'ಮುತ್ತಿನ ಮಹೋತ್ಸವದ ಸ್ನೇಹ ಸಮ್ಮಿಲನ-2026' ಸಾರ್ಥಕ ಸಂಭ್ರಮವಾಗಿ ಗಮನ ಸೆಳೆಯಿತು.



If not delivered please return To:

ಕರಾವಳಿ ಸುದ್ದಿ
KARBIL/2015/62120 DAKSHINA KANNADA

Door Number 2-68/2B, Near Nithyadar Mansion, Mani Post & Village,
Bantwala Taluku - 574 253. Mob.: 8431426747

PRGI No.: KARBIL/2015/62120
Post Without Prepayment License No.: SK/WPP/PTR/208/2026-28
Postal Regd No. : PTR/150/2026-28
MANGALORE RMS
Posted on 7th November 2026

Printed by SAINT JOSEPH PRINTERS Published by ROSHAN BONIFACE MARTIS on behalf of ROSHAN BONIFACE MARTIS, printed at Dakshina Kannada and published at Door Number 2-68/2B, Near NITHYADAR MANSION, MANI POST & VILLAGE, BANTWALA TALUKU, DAKSHINA KANNADA DISTRICT, KARNATAKA - 574 253 editor ROSHAN BONIFACE MARTIS.